
# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ 2020




ಬಿಡಿ ಪ್ರತಿ: ರೂ.10.00

## ಸಂಪಾದಕ ಮಂಡಳಿ

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

## ಆಡಳಿತ ಮಂಡಳಿ

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

**ತಿಳಿನಗೆಯ ಕಾರಂಜಿ**


**ಸಂಪುಟ 37**

**ಸಂಚಿಕೆ – 5**

**ಫೆಬ್ರವರಿ- 2020**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ನಾಸಾಭರಣರು! | ಬಿ.ಎಸ್. ಶೈಲಜಾ | 6 |
| ಶ್ರೀನಿವಾಸನ ನಾಮಾಂತರ | ಪಾಲಹಳ್ಳಿ ವಿಶ್ವನಾಥ್ | 9 |
| ವಾಗಡ್ವೆಂಚರ್ | ಶಂಸ ಐತಾಳ | 13 |
| ಭ್ರಮನಿರಸನ | ವೈ.ಎಂ. ರಘುನಂದನ್ | 15 |
| ತುಂತುರು | ದಂನಲ | 18 |
| ಗುಂಡನ ಜಿಜ್ಞಾಸೆ | ಲತಾ ಹೆಗಡೆ | 19 |
| ಎಂಥಹ ಎಫೆಕ್ಟು..... | ಎಚ್. ಗೋಪಾಲಕೃಷ್ಣ | 22 |
| ಕನ್ನಡ ಕಲಿಯುತ್ತಾ ಇದ್ದೇವೆ | ವೀಣಾ ರಂಗನಾಥ್ | 28 |
| ಫ್ಯಾನ್ಸಿಡ್ರೆಸ್ | ರಮೇಶ್ ಹೊನ್ನುಡಿಕೆ | 30 |
| ಕಂಡೋರ್ಮನೆಯಿಚಾರ.. | ನಳಿನಿ ಸೂರ್ಯಪ್ರಕಾಶ್ | 33 |
| ಬಾಳ್ಳುಪೇಟೆ ಭಾಗೀರತಮ್ಮ ಪ್ರಸಂಗ | ವತ್ಸಲ | 35 |


**ಮುಖಪುಟ ವ್ಯಂಗ್ಯಚಿತ್ರ :**

**ಸುನಿಲ್ ಅಗರ್‌ವಾಲ್ ಮತ್ತು ಅಜಿತ್ ನಿನಾನ್** (ಇಂಟರ್ನೆಟ್)


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. ಸಂಪರ್ಕ : email: koravanjiaparanji@gmail.com ದೂ: 9845264304



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ಮತಕ್ಕಿಂತ ಮನಸ್ಸು ಕಟ್ಟಿಕೊಳ್ಳಿ – ಹೇಳಿಕೆ

**ಅಪರಂಜಿ ತಲೆದೂಗಿದಳಂತೆ!!**

★★★★

ಕಾರವಾರ ಬಂದರು ಅಭಿವೃದ್ಧಿ – ಪತ್ರಿಕೆ

**ತಿಮಿಂಗಲಗಳೆಲ್ಲಾ ಸಂತಸದಿಂದ ಈಜಿದವಂತೆ!!**

★★★★

ಚಿನ್ನಾಭರಣಗಳಿಗೆ ಜನವರಿ 2021 ರಿಂದ ಹಾಲ್‌ಮಾರ್ಕ್ ಕಡ್ಡಾಯ – ಸುದ್ದಿ

**ನನಗೇನೂ ಮಾರ್ಕ್ ಹಾಕಬೇಡಿ ಅಂತ ಅಪರಂಜಿ ಪ್ರತಿಭಟಿಸಿದಳಂತೆ!!**

★★★★

ನಗು ಮೂಡಿದರೆ ಜೀವನ ಸಾರ್ಥಕ – ಹೇಳಿಕೆ

**ಅಪರಂಜಿ ಬಳಗದವರೆಲ್ಲಾ ಕರತಾಡನ ಮಾಡಿದರಂತೆ**

★★★★★

ನಿರ್ದಯೆಯಿಂದ ದಮನವೇ ಚೀನಾ ನೀತಿ – ಪತ್ರಿಕೆ

**ಇದು ''ನೀತಿ'' ಹೇಗಾಯ್ತು ಸಾರ್??**

★★★★★★★

ಟ್ರಂಪ್ ವರ್ತನೆ ನಿಕ್ಸನ್ನನಿಗಿಂತ ಕೆಟ್ಟದು – ವಾಷಿಂಗ್‌ಟನ್ ಪತ್ರಿಕೆ

**''ಅಂಡರ್‌ಸ್ಟೇಟ್‌ಮೆಂಟ್ ಆಫ್ ದ ಸೆಂಚುರಿ'' ಅನ್ನಬಹುದು ಇದನ್ನ!!**

★★★

## ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಮಂಗಳೂರಿನ ಸಂದೇಶ ಫೌಂಡೇಷನ್ನಿನವರು 2020ರ ಸಾಲಿನ ಮಾಧ್ಯಮ ಪ್ರಶಸ್ತಿಗೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪರಂಜಿಯ ಸಾಧನೆಯ ದ್ಯೋತಕವಾಗಿ ನನಗೆ ಪ್ರಶಸ್ತಿ ನೀಡಿದ್ದಾರೆ. ಮೂವತ್ತೇಳು ವರ್ಷಗಳ ಕಾಲ ನಾಡಿನಲ್ಲಿ ತಿಳಿನಗೆಯ ಬುಗ್ಗೆಯನ್ನು ಚಿಮ್ಮಿಸುತ್ತಿರುವ ಅಪರಂಜಿಯ ಚಟುವಟಿಕೆಯ ಹಿನ್ನೆಲೆಯಲ್ಲಿ ನಮ್ಮ ಬಳಗದ ಎಲ್ಲರ ಪಾತ್ರವೂ ಇರುವುದರಿಂದ ಈ ಪ್ರಶಸ್ತಿ ಅಪರಂಜಿ ಬಳಗಕ್ಕೆ ಸಂದ ಗೌರವ. ನಿಮ್ಮೆಲ್ಲರ ಪರವಾಗಿ ನಾನು ಮಂಗಳೂರಿನಲ್ಲಿ ನಡೆಯುವ ಈ ಸಮಾರಂಭಕ್ಕೆ ಪ್ರಶಸ್ತಿ ಸ್ವೀಕರಿಸಲು ಹೋಗುತ್ತಿದ್ದೇನೆ. ಬಜ್ಜೋಡಿಯಲ್ಲಿನ ಸಂದೇಶ ಫೌಂಡೇಷನ್ ಭವನದಲ್ಲಿ, ಫೆಬ್ರುವರಿ 9 ರಂದು ಸಂಜೆ 5.30ಕ್ಕೆ ಸಮಾರಂಭ ಪ್ರಾರಂಭವಾಗುತ್ತದೆ. ಮಂಗಳೂರಿನಲ್ಲಿರುವ, ಅಲ್ಲಿಗೆ ಬರಲಿಚ್ಛಿಸುವ ಎಲ್ಲ ಅಭಿಮಾನಿಗಳಿಗೆ ಈ ಸಂಭ್ರಮಕ್ಕೆ ಬನ್ನಿರೆಂದು ಆದರದ ಆಹ್ವಾನ.

1983ನೇ ಇಸವಿಯ ಪ್ರಾರಂಭದ ದಿನಗಳ ಕಾಲವದು. ನಮ್ಮ ತಂದೆ ರಾ.ಶಿ.ಯವರು ತಮ್ಮ ಜೀವಿತದ ಸಂಧ್ಯೆಯಲ್ಲಿದ್ದರು. ಒಂದು ದಿನ ಅ.ರಾ.ಸೇ. ಮತ್ತು ಅವರ ಗೆಳೆಯರೊಬ್ಬರು (ಅವರು ಶೇಷಗಿರಿ ಅಂತ ನನಗೆ ಆಮೇಲೆ ತಿಳಿಯಿತು) ತಂದೆಯವರನ್ನು ನೋಡಲು ಬಂದರು. ನಿಂತುಹೋದ ಕೊರವಂಜಿ ಪತ್ರಿಕೆಯನ್ನು ಪುನಃ ಪ್ರಾರಂಭಿಸಲು ರಾ.ಶಿ.ಯವರ ಒಪ್ಪಿಗೆಯನ್ನು ಪಡೆಯುವ ಉದ್ದೇಶದಿಂದ ಅವರು ಬಂದಿದ್ದರು. ''ಕಾಡಿಗೆ ಹೋದ ಕೊರವಂಜಿ ಅಲ್ಲೇ ಸುಖವಾಗಿ ಇರಲು ಬಿಡಿ. ಅವಳನ್ನ ಯಾಕೆ ಸತಾಯಿಸುತ್ತೀರ. ಅವಳ ಬದಲು ಅವಳ ಮಗಳು ಅಪರಂಜಿಯನ್ನ ನಾಡಿಗೆ ಕರೆತನ್ನಿ. ಸಂತಸದಿಂದ ಆಶೀರ್ವದಿಸುವೆ'' ಅಂತ ರಾ.ಶಿ. ಹೇಳಿಬಿಟ್ಟರು. ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಚಿತ್ರದುರ್ಗದಲ್ಲಿ ಅಪರಂಜಿಯ ಮೊದಲ ಸಂಚಿಕೆ ಬಿಡುಗಡೆಯಾಯಿತು. ಚಿತ್ರದುರ್ಗದಲ್ಲಿ ಶೇಷಗಿರಿಯವರ ಸಂಪಾದಕತ್ವ, ಮೈಸೂರಿನಲ್ಲಿ ಪಂಚಾಕ್ಷರಿಯಿಂದ ಮುದ್ರಣ, ಬೆಂಗಳೂರಿನಲ್ಲಿ ನನ್ನ ವಿತರಣೆಯ ನಿರ್ವಹಣೆ ಹೀಗೆ ಒಂದು ವರ್ಷ ನಡೆದ ಮೇಲೆ, ''ಈ ಮೂರು ಕಾಲಿನ ಓಟ ಸಲ್ಲ'' ಎಂದು ನಾವೆಲ್ಲಾ ನಿರ್ಧರಿಸಿದ ನಂತರ 1984ರಿಂದ ನನ್ನ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಅಪರಂಜಿ ಹೊರಡಲು ಪ್ರಾರಂಭವಾಯಿತು. ಮೊದಲ ದಿನಗಳಲ್ಲಿ ಬರಹಗಾರರ ಬಳಗ ಸಹಜವಾಗಿಯೇ ಕಿರಿದಾಗಿತ್ತು. ನನ್ನ ಜೊತೆಗೆ ನನ್ನ ಇಬ್ಬರು ಅಕ್ಕಂದಿರು (ಕಮಲಾ ರಾಮಸ್ವಾಮಿ ಮತ್ತು ಲೀಲಾ ಮಿರ್ಲೆ) ನನ್ನ ತಮ್ಮ ಓಂಪ್ರಕಾಶ್, ಅ.ರಾ.ಸೇ, ಎಂ.ಎಸ್.ಕೆ. ಪ್ರಭು ಮೊದಲ ದಿನಗಳಲ್ಲಿ ಪತ್ರಿಕೆಯನ್ನು ನಮ್ಮ ಬರಹಗಳಿಂದ ತುಂಬುತ್ತಿದ್ದೆವು. ನಮ್ಮ ಈ ಪುಟ್ಟ ಬಳಗವನ್ನು ಮೊದಲು ಸೇರಿದ್ದು ಶ್ರೀನಿವಾಸ ವೈದ್ಯ. ಆಗ ಅವರು ಮುಂಬೈಯಲ್ಲಿ ಬ್ಯಾಂಕ್ ಮ್ಯಾನೇಜರ್ ಆಗಿದ್ದರು. ಅವರ ನಂತರ ಭುವನೇಶ್ವರಿಯವರು ಮಂಗಳೂರಿನಿಂದ ತಮ್ಮ ಬರಹಗಳನ್ನು ಕಳುಹಿಸಲು ಪ್ರಾರಂಭಿಸಿದರು. ಆ ಪ್ರಾರಂಭದ

ದಿನಗಳಲ್ಲಿ ಅಪರಂಜಿಯ ಆರ್ಥಿಕ ನಿರ್ವಹಣೆಗೆ ನನ್ನ ಉದ್ಯಮದ ಒತ್ತಾಸೆ ಅಗತ್ಯವಾಗಿತ್ತು. ಕೊರವಂಜಿಯ ಪರಂಪರೆಯನ್ನು ಮುಂದುವರಿಸುವ ಸದುದ್ದೇಶವಿದ್ದುದರಿಂದ ಈ ಒತ್ತಾಸೆ ಒಂದು ಭಾರದಂತೆ ಕಾಣಿಸಲಿಲ್ಲ. ಹತ್ತು ವರ್ಷಗಳು ಪತ್ರಿಕೆ ನಡೆದ ಮೇಲೆ, ಕೈಗಾರಿಕಾ ಹಿಂಜರಿತದ ಹಿನ್ನೆಲೆಯಲ್ಲಿ ಅಪರಂಜಿಯನ್ನು ಮುಂದುವರಿಸುವ ಕೆಲಸ ದುಸ್ತರವಾಗಿ ಕಾಣತೊಡಗಿತು. ಆ ದಿನಗಳಲ್ಲಿ ಒಮ್ಮೆ ಕೃಷ್ಣ ಸುಬ್ಬರಾವ್ ಮತ್ತು ಗೋಪಾಲಕೃಷ್ಣ ನಮ್ಮ ಮನೆಗೆ ಅಪರಂಜಿಗೆ ಚಂದಾ ಕೊಟ್ಟು ಹೋಗುವುದಕ್ಕೆ ಬಂದರು. ಒಂದೆರಡು ಕುಶಲ ಮಾತನಾಡಿ ಅವರು ಹೊರಡುವುದರಲ್ಲಿದ್ದಾಗ ಅನಿರೀಕ್ಷಿತವಾಗಿ ಮಳೆ ಬರಲು ಪ್ರಾರಂಭವಾಯಿತು. ಸರಿ, ಅವರು ಮಳೆ ನಿಲ್ಲುವ ವರೆಗೆ ಕಾಯುತ್ತಿದ್ದಾಗ ನಾನು ಅವರೊಂದಿಗೆ ಅಪರಂಜಿಯ ನಿರ್ವಹಣೆಯ ಬಗ್ಗೆ ನನಗಾಗುತ್ತಿದ್ದ ಕಷ್ಟಗಳನ್ನು ಹಂಚಿಕೊಂಡೆ. ''ಖಂಡಿತಾ ಅಪರಂಜಿ ಮುಂದುವರಿಸಿ. ಒಂದು ಅಪರಂಜಿ ಹಬ್ಬವನ್ನು ನಡೆಸಿ, ಅಪರಂಜಿಗೆ ಪ್ರಚಾರ ಕೊಡೋಣ. ನಮ್ಮ ಕೈಗಾರಿಕಾ ರಂಗದ ಸಾಹಿತ್ಯವೇದಿಕೆ ನಿಮ್ಮೊಂದಿಗೆ ನಿಲ್ಲುತ್ತದೆ'' ಎಂದು ಹೇಳಿ ನುಡಿದಂತೆ ನಡೆದುಕೊಂಡರು. ಆ ವರ್ಷ ಸೆಪ್ಟೆಂಬರ್ ಇಪ್ಪತ್ತಾರರಂದು ನಡೆದ ''ಹತ್ತು ವರುಷದ ಹಬ್ಬ'' ಅಭೂತಪೂರ್ವ ಯಶಸ್ಸು ಕಂಡಿತು. ಈ ಹಬ್ಬವೇ ಮುಂದೆ ನಮ್ಮ ಹಾಸ್ಯೋತ್ಸವ ಸರಣಿಗೆ ನಾಂದಿಯಾಯಿತು. ಇಷ್ಟುಹೊತ್ತಿಗೆ ನಮ್ಮ ಬರಹಗಾರ ಬಳಗವೂ ಬೆಳೆದಿತ್ತು. ವಿಜಯಾ ಸಚ್ಚಿದಾನಂದ್, ಶಾಂತಾ ರಘು, ನಾಗೂಶ್ರೀ ಸೂರಿ ಇವರುಗಳ ಜೊತೆಗೆ ಹಾಸ್ಯ ಬ್ರಹ್ಮ ಸಮೂಹದ ಬೇಲೂರು ರಾಮಮೂರ್ತಿ, ಸೂರಿಹಾರ್ದಳ್ಳಿ, ಗುಂಡೂರಾವ್‌ದ್ವಯರು ಮತ್ತಿತರರು ನಮ್ಮ ಬಳಗಕ್ಕೆ ಸೇರ್ಪಡೆಯಾದರು.

ಶತಮಾನದ ತಿರುವಿನ ಹೊತ್ತಿಗೆ ನಾನು ನನ್ನ ವೃತ್ತಿಯಿಂದ ನಿವೃತ್ತನಾಗಲು ನಿರ್ಧರಿಸಿದ ಹಿನ್ನೆಲೆಯಲ್ಲಿ ಅಪರಂಜಿಯ ಆರ್ಥಿಕ ನಿರ್ವಹಣೆ ಮತ್ತೆ ಒಂದು ಸವಾಲಾಗಿ ಕಾಣತೊಡಗಿತು. ಆಗ ಮಿತ್ರ ಜಿ. ನಾಗೇಶ್ ಅವರು ಅಪರಂಜಿಗೆ ಒಂದು ಟ್ರಸ್ಟನ್ನು ರಚಿಸಿ, ಪತ್ರಿಕೆಯ ನಿರ್ವಹಣೆಯ ಜವಾಬ್ದಾರಿಯನ್ನು ಟ್ರಸ್ಟ್ ನೋಡಿಕೊಳ್ಳುವಂತೆ ಮಾಡಿ ಎಂದು ಸಲಹೆ ಮಾಡಿದರು. ಕೊರವಂಜಿ ಅಪರಂಜಿ ಟ್ರಸ್ಟ್ 1999 ರಲ್ಲಿ ರೂಪುಗೊಂಡಿತು. ಬೇಲೂರು ರಾಮಮೂರ್ತಿ, ಕೃಷ್ಣ ಸುಬ್ಬರಾವ್, ವಿ.ಆರ್. ನಾಥ್ ಮತ್ತು ಜಿ. ನಾಗೇಶ್ ಇವರುಗಳು ಟ್ರಸ್ಟಿನ ಮೊದಲ ವಿಶ್ವಸ್ಥರು. ನಾನು ನಿರ್ವಹಣಾ ಟ್ರಸ್ಟಿಯ ಕಾರ್ಯವನ್ನು ವಹಿಸಿಕೊಂಡೆ. ಈ ಹೊಸ ವ್ಯವಸ್ಥೆ ಅಪರಂಜಿಗೆ ಒಂದು ನವ ಚೈತನ್ಯವನ್ನು ಮೂಡಿಸಿತು. ಹಾಸ್ಯೋತ್ಸವಗಳು, ಯುಗಾದಿಗೆ ವಿಶೇಷ ಸಂಚಿಕೆಗಳು ಇವೆಲ್ಲಾ ಅಪರಂಜಿಯ ಚಟುವಟಿಕೆಗಳ ಪಟ್ಟಿ ತುಂಬಿರುವಂತೆ ಮಾಡಿದವು. ಅನಾರೋಗ್ಯದಿಂದ ನಾಗೇಶ್ ಮತ್ತು ಅಕಾಲಿಕ ನಿಧನದಿಂದ ರಾಜಗೋಪಾಲ್ ಇವರುಗಳ ಸ್ಥಾನಗಳು ತೆರಪಾದಾಗ, ಎಚ್.ಎನ್. ಆನಂದ, ಸಿ.ಆರ್. ಸತ್ಯ ಮತ್ತು ಕೆ. ರವೀಂದ್ರರಾವ್ ಟ್ರಸ್ಟೀಗಳಾಗಿ ಸೇರಿಕೊಂಡರು.

ಅಪರಂಜಿಯ ಈ ಸುದೀರ್ಘ ಯಾತ್ರೆಯನ್ನು ನೆನಪಿಸಿಕೊಂಡಾಗ, ಹಿಂದೊಮ್ಮೆ ನಾನು ಬರೆದ ಕವಿತೆಯೊಂದರ ಹಲವು ಸಾಲುಗಳು ನೆನಪಿಗೆ ಬರುತ್ತವೆ.

ಮುಳ್ಳು ಕಲ್ಲನು ತುಳಿದು, ಹಳ್ಳ ಕೊಳ್ಳವ ಕಳೆದು
ತುಂಬಿ ಹರಿಯುವ ಹೊಳೆಯ ಹಾದು ಬಂದಿರುವೆ.
ಜೀವನದ ಬಯಲಿನಲಿ ನೆಲೆಯ ಬೆಲೆಯನ್ನರಿತು
ದಿಟ್ಟತನವನು ತೋರಿ ನೀ ಸಾಗುತಿರುವೆ.

ಅಪರಂಜಿಯ ಈ ದಿಟ್ಟತನದ ಯಾತ್ರೆ ತುಂಬು ಯಶಸ್ಸಿನಿಂದ ಮುಂದೆ ಸಾಗುವ ಲಕ್ಷಣಗಳು ಕಾಣಿಸುತ್ತಿವೆ. ಕಳೆದ ವರ್ಷ ನಾವು ಮೂಲಧನ ದೇಣಿಗೆ ಸಂಗ್ರಹದ ಕಾರ್ಯವನ್ನು ಕೈಗೊಂಡಾಗ ನಮ್ಮ ನಿರೀಕ್ಷೆಯನ್ನೂ ಮೀರಿ ಓದುಗರಿಂದ ಪ್ರೋತ್ಸಾಹ ಸಿಕ್ಕಿತು. ನಮ್ಮ ಯುವ ಮ್ಯಾನೇಜಿಂಗ್ ಟ್ರಸ್ಟೀ ಉಲ್ಲಾಸ್, ಯುವ ಮುದ್ರಣಕಾರ ಭರತ್, ಮತ್ತು ಇಷ್ಟರಲ್ಲೇ ನಮ್ಮ ನಿರ್ವಹಣಾ ಬಳಗವನ್ನು ಸೇರಲಿರುವ ಇತರ ಪ್ರತಿಭಾವಂತ ಯುವಕ ಯುವತಿಯರು ಅಪರಂಜಿಯನ್ನು ಇನ್ನೂ ಎತ್ತರಕ್ಕೆ ಒಯ್ಯುವುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಆತ್ಮೀಯ ಗೆಳೆಯ ವೈದ್ಯರು ಯಾವಾಗಲೂ ಹೇಳುವ ಈ ಸಾಲುಗಳು ಅಪರಂಜಿಯ ಚೈತನ್ಯದ ಸೆಲೆಗೆ ಮೂಲಮಂತ್ರ.

''ಸಂತಸವ ಹಂಚುವುದು ಸಂತರಾ ಕೆಲಸ
ಇದುವೆ ನಿಜಕು ತಾ ದೇವ ಮೆಚ್ಚುವ ಕೆಲಸ''

■

## ಲಿಮರಿಕ್ಸ್

– ಬಿ.ಎಸ್. ರವಿಕುಮಾರ್

### ದೇವರಲ್ಲಿ ಬೇಡಿದ್ದು

ಇದನ್ನು ಹೇಳಿದ್ದು ಈಮೋ ಫಿಲಿಪ್ಸ್, ಅಮೆರಿಕನ್ ನಗೆಗಾರ
ಕೇಳಿಕೊಂಡನಂತೆ ದೇವರಲ್ಲಿ "ಒಂದು ಬೈಕ್ ಕಳಿಸು ಹೇಗಾರಾ"
ದೇವರು ಹಾಗೆಲ್ಲಾ ಕಳಿಸುತ್ತಾನೆಯೇ, ಪೆದ್ದು!
ಎಂದು ಪಾರ್ಕ್ ಮಾಡಿದ್ದ ಹೊಸ ಬೈಕ್ ಕದ್ದು
ದೇವರೇ ಕ್ಷಮಿಸಿಬಿಡು ಎಂದು ಪ್ರಾರ್ಥಿಸಿದನಂತೆ ರವಿವಾರ



# ನಾಸಾಭರಣರು!

● ಬಿ ಎಸ್ ಶೈಲಜಾ

ಹೌದು! ನೀವು ಓದಿದ್ದು ಸರಿಯೇ. ನಾಸಾಭರಣರ ವಿಷಯವನ್ನೇ ನಾನು ಹೇಳಲು ಹೊರಟದ್ದು. ನಾಗಾಭರಣರ ಕುರಿತು ಅಲ್ಲ.

ನಮ್ಮ ಹೆಂಗಸರಲ್ಲಿ ಮೂಗುತಿ ಹಾಕಿರುವವರು ಶೇಕಡಾ 50ರಷ್ಟು ಇರಬಹುದು. ಸದ್ಯ! ಇದಕ್ಕೆ ಜಾತಿ ಭೇದವಿಲ್ಲ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ತರತರಾವರಿ ಮೂಗುತಿಗಳನ್ನು ಬುಲಾಕುಗಳನ್ನೂ ಕಾಣಬಹುದು. ಈ ವೈವಿಧ್ಯ ನಮಗೆ ಹೊಸದು ಎನ್ನಿಸದಿದ್ದರೂ ಪರದೇಶೀಯರಿಗೆ ಸುದ್ದಿಯೇ ಆಗುವುದು.ಅವರ ಕ್ಯಾಮೆರಾಗಳು ಅವರಿಗೇ ತಿಳಿಯದಂತೆ ಮೂಗುತಿಗಳತ್ತವೇ ತಿರುಗಿ ಅವನ್ನು ಸೆರೆ ಹಿಡಿದುಬಿಡುತ್ತವೆ. ಕೆಲವು ಸಂಪ್ರದಾಯಗಳಲ್ಲಿ ಹುಡುಗಿಗೆ ಐದಾರು ವರ್ಷಕ್ಕೇ ಮೂಗು ಚುಚ್ಚಿದರೆ, ಕೆಲವೆಡೆ ಹದಿಹರೆಯಕ್ಕೆ, ಇನ್ನೂ ಕೆಲವೆಡೆ ಮದುವೆಗೆ ಮುನ್ನ – ಒಟ್ಟಿನಲ್ಲಿಅದು ಅನಿವಾರ್ಯ ಎಂಬಂತೆ ಇದೆ. ಆದರೆ ಇನ್ನು ಕೆಲವೆಡೆ ಹುಡುಗಿಯ ಇಚ್ಛೆಗೇ ಬಿಟ್ಟದ್ದು. ಆದ್ದರಿಂದ ಕ್ಯಾಮೆರಾಗಳಿಗೆ ವಯೋವೈವಿಧ್ಯವೂ ದೊರಕುತ್ತದೆ. ಕೆಲವರು ಬಲಗಡೆ ಕೆಲವರು ಎಡಗಡೆ ಚುಚ್ಚಿಸಿಕೊಂಡರೆ ಕೆಲವರು ಎರಡೂ ಕಡೆ ಚುಚ್ಚಿಸಿಕೊಂಡಿರುತ್ತಾರೆ.

ಖ್ಯಾತ ಜೆನೆಟಿಕ್ ವಿಜ್ಞಾನಿ ಜೆ ಬಿ ಎಸ್ ಹಾಲ್ಡೇನ್ ಅವರು ತಮ್ಮ ಬೆರಗನ್ನು ಒಂದು ಕತೆಯಲ್ಲಿ ವ್ಯಕ್ತ ಪಡಿಸಿದ್ದಾರೆ, ತನ್ನ ಬಳಿ ಚಿನ್ನ ಹೆಚ್ಚಾಗಿದೆ ಎಂದು ತೋರಿಸಿಕೊಳ್ಳಲು ಸ್ವಾತ್ ದೇಶದ ರಾಜ ತನ್ನ ಎಲ್ಲಾ ಹೆಂಡಂದಿರಿಗೂ ಕಿವಿ, ಮೂಗುಗಳಿಗೆಲ್ಲಾ ತೂತು ಮಾಡಿ ಚಿನ್ನ ತುಂಬಿಸಿದ್ದಾನೆ ಎಂದು ವರ್ಣಿಸುತ್ತಾರೆ.

ಈ ಮೂಗುತಿಯ ಪದ್ಧತಿ ಹೇಗೆ ಮತ್ತುಎಂದುಆರಂಭವಾಯಿತು ಎಂಬ ಪ್ರಶ್ನೆ ಹಲವರನ್ನು ಕಾಡಿದೆ. ಸಾಮಾನ್ಯವಾಗಿ ಗುಡ್ಡಗಾಡು ಜನರಲ್ಲಿ ಮುಖದಲ್ಲಿ ಎದ್ದು ಕಾಣುವಂತಹ ಈ ಮೂಗುತಿಗಳು ಯಾವ ರೀತಿ ಅವರ ಅಸ್ಮಿತೆಗೆ ನೆರವಾಗುತ್ತಿದ್ದಿರಬಹುದು? ಹಾಗೆಯೇ ಪುಟ್ಟದಾದ ಕಂಡೂ ಕಾಣದಂತಹ (ವಜ್ರವೂ ಇರಬಹುದು) ಮೂಗುತಿಯ ಉದ್ದೇಶ ಏನಿರಬಹುದು? ಡಾ ಜ್ಯೋತ್ಸ್ನಾ ಕಾಮತ್ ಅವರು ಈ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ವಿಜಯನಗರದ ಪರ್ವದ ನಂತರ ಇವು ಕಂಡು ಬರುತ್ತವೆ ; ಬೇಲೂರು ಶಿಲಾಬಾಲಿಕೆಯರಿಗೆ ಮೂಗುತಿಇಲ್ಲ – ಹೀಗೆ ಅನೇಕ ಅಂಶಗಳನ್ನು ಅವರು ಗಮನಿಸಿದ್ದಾರೆ.

ಪುರಂದರದಾಸರ ಕಾಲಕ್ಕೆ ಮೂಗುತಿ ಸಾಂಪ್ರದಾಯಿಕ ಆಭರಣವಾಗಿತ್ತು. ಅದು ಅವರ ಜೀವನವನ್ನೇ ಬದಲಾಯಿಸಿ ಬಿಟ್ಟಿತು. ಅಕಸ್ಮಾತ್ ಅವರ ಹೆಂಡತಿ ಮೂಗುತಿ ಹಾಕದೇ ಇದ್ದಿದ್ದರೆ . . ಅಯ್ಯೋಯ್ಯೋ. . ಪುರಂದರದಾಸರು ಶ್ರೀನಿವಾಸ ನಾಯಕನಾಗಿಯೇ ಉಳಿದು ಕಾಸಿಗೆ ಕಾಸು ಗಂಟು ಹಾಕುತ್ತಿದ್ದರೋ ಏನೋ. ಇಲ್ಲ; ಮೂಗುತಿಯ ಬದಲು ಕಿವಿಯ ಓಲೆಯಿಂದ ಕೆಲಸ ನಡೆಯುತ್ತಿತ್ತು ಅಷ್ಟೇ. ಆ ವಿಠಲ ಪುರಂದರದಾಸರನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುತ್ತಿರಲಿಲ್ಲ.

ರಾವಣ ಸೀತೆಯನ್ನು ಕದ್ದೊಯ್ದಾಗ ಆಕೆ ಆಭರಣಗಳನ್ನು ಗಂಟುಕಟ್ಟಿ ಎಸೆದಳಷ್ಟೆ. ಅದರಲ್ಲಿ ನೂಪುರವಿದ್ದುದು ಖಚಿತ. ಏಕೆಂದರೆ ಲಕ್ಷ್ಮಣ ಅವನ್ನು ಮಾತ್ರ ಗುರುತಿಸಿದನಂತಲ್ಲಾ. ಆದರೆ ಅಲ್ಲಿ ಮೂಗುತಿಯ ಪ್ರಸ್ತಾಪವಿಲ್ಲ. ಭಾಸನ ನಾಟಕದಲ್ಲಿ ಒಂದು ಸನ್ನಿವೇಶವಿದೆ. ಸೀತೆ ಅಕಸ್ಮಾತ್ತಾಗಿ ಕಿವಿಯ ಕುಂಡಲಗಳನ್ನು ತೆಗೆದಿಟ್ಟಿರುವಾಗ ರಾಮ ಬಂದು ನೋಡಿ "ಕಿವಿಯ ಹಾಲೆಯನ್ನು ನೋಡಿದರೆ ಈಗ ತಾನೇ ಕುಂಡಲಗಳನ್ನು ತೆಗೆದಿರುವೆ ಎಂದು ತಿಳಿಯುತ್ತದೆ" ಎನ್ನುತ್ತಾನೆ. ಮೂಗುತಿಯ ಪ್ರಸ್ತಾಪವೇ ಇಲ್ಲ. ಮಹಾಭಾರತದಲ್ಲಿಯೂ ಮೂಗುತಿಯ ಹೆಸರೇ ಇಲ್ಲ. ಹಾಗಾದರೆ ಅದು ಸಂಪ್ರದಾಯದ ರೇಖೆಯೊಳಗೆ ಪ್ರವೇಶ ಪಡೆದುಕೊಂಡು ಪುರಂದರದಾಸರ ಹೆಂಡತಿಯ ಮೂಗನ್ನು ಏರಿದ್ದು ಹೇಗೆ?



ಸಿನು ಕ್ಷೇತ್ರದಲ್ಲಿ ದೊರಕಿದ ಈ ಹಿಂಗಾಣಿ ಬೊಂಬೆಯ ಮೂಗಿನ ನಡುತಡಿಕೆಯ ರಂಧ್ರದಲ್ಲಿ ಭಾರಿ ಗಾತ್ರದ ಆಭರಣಗಳನ್ನು ಕಾಣಬಹುದು. (ಚಿತ್ರ: ಆನಾ ಮಾರಿಯಾ ಫಾಲ್ಚೆಟ್ಟಿ-ಬೊಗೊಟಾ)



ಇಷ್ಟೆಲ್ಲಾ ಪ್ರಶ್ನೆಗಳನ್ನು ಹುಟ್ಟು ಹಾಕುವ ಮೂಗುತಿಗಳು ಭಾರತಕ್ಕೆ ಮಾತ್ರ ಸೀಮಿತವೆಂದು ಕೊಳ್ಳಬೇಡಿ. ಅಮೆರಿಕದ ಒಂದು ವಸ್ತು ಸಂಗ್ರಹಾಲಯದಲ್ಲಿ ಇದ್ದ ಚಿತ್ರಗಳೆಲ್ಲಾ ಮೂಗುತಿ ಧರಿಸಿದ ಇಂತಹ ನಾಸಾಭರಣರದ್ದೇ. ಅವುಗಳ ವಿನ್ಯಾಸವೂ ಬಹಳ ವಿಶಿಷ್ಟ. ಅಲ್ಲಿದ್ದ ಒಂದು ವಿಚಿತ್ರವಾದ ಚಿನ್ನದ ಆಭರಣ ಮಿಡತೆಯಂತೆ ಕಾಣುತ್ತಿತ್ತು. ಅದನ್ನು ಧರಿಸುವುದು ಹೇಗೆ ಎಂಬ ಪ್ರಶ್ನೆ ಖಂಡಿತಾ ಉದ್ಭವಿಸುತ್ತಿತ್ತು. ಆದ್ದರಿಂದಲೋ ಏನೋ ಅದರ ಪಕ್ಕದಲ್ಲಿ ಅದನ್ನು ಧರಿಸಿದವನ





ಚಿತ್ರವನ್ನೂ ಬರೆದಿದ್ದರು. ಎರಡು ಹೊಳ್ಳೆಗಳ ನಡುವಿನ ಮೂಳೆಯ ಮೂಲಕ ಹಾದು ಹೋಗುವ ಚಿನ್ನದ ಸರಳು ಸಾಕಷ್ಟು ದಪ್ಪವಿತ್ತು. ಇನ್ನೊಂದು ಸರಳವಾದ ಉಂಗುರದಂತೆ ಇದ್ದರೂ ಅದರ ದಪ್ಪ ಕಂಡು ಆಶ್ಚರ್ಯವಾಯಿತು. ಊಟ ಮಾಡುವಾಗ ಅದು ಅಡ್ಡ ಬರುತ್ತಿರಲಿಲ್ಲವೇ? ಎಂಬ ಸಂದೇಹ ಖಂಡಿತಾ ಬಂದೇ ಬರುತ್ತದೆ.

ಆ ಮನುಷ್ಯ ಮೂಗಿಗೆ ಅಷ್ಟು ಭಾರೀ ಉಂಗುರ ಹಾಕಿ ಕೊಂಡಿದ್ದ; ಇನ್ನೊಂದು ವಿಗ್ರಹ ಸಣ್ಣ ಬುಲಾಕು ಹಾಕಿ ಕೊಂಡಿತ್ತಾದರೂ ಮೈಮೇಲೆ ಒಂದು ತುಂಡು ಬಟ್ಟೆಯೂ ಇರದಿದ್ದುದು ಆಶ್ಚರ್ಯವೆನಿಸಿತು. ಭಾರೀ ಜೋರು ವಿನ್ಯಾಸ ಹಾಕಿಕೊಂಡಿದ್ದವ ಬಹುಶಃ ಮಹಾರಾಜ ಇದ್ದಿರಬಹುದು. ಇವೆಲ್ಲಾ ಅಮೆರಿಕದ ಮೂಲ ವಾಸಿಗಳ ಆಭರಣಗಳು. ಈಗ ಅವರನ್ನೇ ಹುಡುಕಬೇಕಾದ ಪರಿಸ್ಥಿತಿ – ಇನ್ನುಅವರ ಮೂಗಿನ ಆಭರಣವನ್ನು ಎಲ್ಲಿ ಕಾಣಬೇಕು?

ಇದು ಅಮೆರಿಕದ ನ್ಯೂಯಾರ್ಕ್‌ನ ವಸ್ತು ಸಂಗ್ರಹಾಲಯದಲ್ಲಿ ಕಂಡದ್ದು. ಆದ್ದರಿಂದ ಯುರೋಪಿಯನ್ನರು ಅಲ್ಲಿಗೆ ಕಾಲಿಡುವುದಕ್ಕೆ ಮುಂಚೆ ಇದ್ದ ನಾಗರೀಕತೆ ಎನ್ನಬಹುದು. ಆದರೆ ಆಫ್ರಿಕಾದಲ್ಲಿ ಮತ್ತು ಮಧ್ಯ ಏಷ್ಯಾದಲ್ಲಿಯೂ ಈ ಪದ್ಧತಿ ಇತ್ತಂತೆ. ಪುರುಷರು ಧಾರಾಳವಾಗಿ ಬಳಸುತ್ತಿದ್ದರಂತೆ. ಪುರುಷರಿಗೆ ಮೂಗು ಚುಚ್ಚುವ ಸಮಾರಂಭ ಬಹಳ ಅದ್ದೂರಿಯಾಗಿ ಜರುಗುತ್ತಿತ್ತಂತೆ. ಅಲ್ಲಿಯ ಹಳೆಯ ದೇವಸ್ಥಾನಗಳ ಗೋಡೆಗಳ ಮೇಲೆ ಈ ಸಮಾರಂಭದ ಚಿತ್ರಗಳನ್ನು ಕೆತ್ತಿದ್ದಾರೆ.ಈ ಕುರಿತುಟೆಕ್ಸಾಸ್ ವಿಶ್ವವಿದ್ಯಾಲಯದಿಂದ ಒಂದು ಪುಸ್ತಕವೇ ಪ್ರಕಟಗೊಂಡಿದೆ.

ಹಾಗಾದರೆ ಎಲ್ಲಿ ಚಿನ್ನ, ವಜ್ರ ಹೇರಳವಾಗಿತ್ತೋ ಅಲ್ಲೆಲ್ಲಾ ಈ ಪದ್ಧತಿ ಇತ್ತು ಎನ್ನೋಣವೇ? ಇದು ಪ್ರತಿಷ್ಠೆಯ ಸಂಕೇತವೂ ಆಗಿರಬೇಕು. ಏಕೆಂದರೆ ಅದನ್ನು ಧರಿಸಿದವನನ್ನು ಕಾಪಾಡಲು ಸುತ್ತಲೂ ಪದಾತಿಗಳಿರಲೇ ಬೇಕಲ್ಲವೇ? ಆದ್ದರಿಂದಲೇ 'ಮಹಾರಾಜ' ನಿಗೆ ಭಾರಿ ಗಾತ್ರದ್ದು.

ಮೂಗುತಿಯ ಅಪರಾವತಾರಗಳು ದಿನದಿನಕ್ಕೆ ಜನಪ್ರಿಯವಾಗುತ್ತಿರುವುದರ ಜೊತೆಗೆ ವಿದೇಶೀಯರನ್ನು ಆಕರ್ಷಿಸುತ್ತಿದೆ. ಜೊತೆಗೆ ಪುರುಷರನ್ನೂ ಆಕರ್ಷಿಸುತ್ತಿದೆ ಎಂಬುದು ಆಭರಣಗಳ ಸೃಷ್ಟಿಕರ್ತರಿಗೆ ಹರ್ಷ ಉಂಟುಮಾಡುತ್ತಿರಬೇಕು. ಹೀಗೊಬ್ಬ ಪುರುಷ ಮೂಗುತಿ ಹಾಕಿಕೊಂಡು ಬೀದಿಯಲ್ಲಿ ಓಡಾಡುತ್ತಿರುವುದನ್ನು ಕಲ್ಪಿಸಿಕೊಳ್ಳಿ. ಪ್ರತಿಯೊಬ್ಬರೂ ತಿರುಗಿತಿರುಗಿ ಅವನನ್ನು ನೋಡುವವರೇ. ಯಾವನಾದರೂ ಕ್ರಿಕೆಟ್ ಆಟಗಾರನೋ ಚಿತ್ರನಟನೋ ಹಾಕಿಕೊಂಡು ಬಿಟ್ಟರಂತೂ ಸರಿಯೇ ಸರಿ. ಎಲ್ಲ ಪಡ್ಡೆ ಹುಡುಗರೂ ಹಾಕಿಕೊಳ್ಳುತ್ತವೆ. ಆದರೆ ಅದರಿಂದ ಈ ಹುಡುಗರು ಎಲ್ಲಂದರಲ್ಲಿ ಮಲಗುವಂತಿಲ್ಲ; ಏಕೆಂದರೆ ನಿದ್ದೆಗೇಜಾರಿದಾಗ ಮೂಗನ್ನೇ ಕತ್ತರಿಸಿಕೊಂಡು ಹೋಗಿ ಬಿಟ್ಟರೆ ಏನು ಗತಿ? ಇದರಿಂದ ಒಂದು ಅನುಕೂಲವೂ ಇದೆ – ಬೀಡಾಡಿಗಳ ಸಂಖ್ಯೆ ಕಡಿಮೆಯಾಗಬಹುದು.

ನಮ್ಮ ಚಿನಿವಾರರು ಇಂತಹ ಮೂಗುತಿಗಳನ್ನು ಜನಪ್ರಿಯಗೊಳಿಸಲು ಹೊರಟರೆ ಸರಗಳ್ಳರ ಜೊತೆಗೆ ಮೂಗಳ್ಳರೂ ಹುಟ್ಟಿಕೊಳ್ಳುತ್ತಾರೆ ಎಂಬುದಂತೂ ನಿಜ. ಆಗ 'ಹೊಯ್ಸಳ' ರಿಗೆ ಕೈತುಂಬಾ ಕೆಲಸ. ■

# ಶ್ರೀನಿವಾಸನ ನಾಮಾಂತರ

● ಪಾಲಹಳ್ಳಿ ವಿಶ್ವನಾಥ್

ನ್ಯಾಯಾಧೀಶರ ಕೋಣೆಯ ಹೊರಗೆ ಶ್ರೀನಿವಾಸ ತನ್ನ ವಕೀಲರ ಜೊತೆ ಕುಳಿತಿದ್ದ. ಅವನೇನಾದರೂ ತಪ್ಪು ಮಾಡಿದ್ದಾನೆಯೇ ಎಂದು ನೀವು ಕೇಳಬಹುದು. ಇಲ್ಲ, ಇಲ್ಲ! ನಮ್ಮ ಶ್ರೀನಿವಾಸ ತಪ್ಪು ಮಾಡುವವನಲ್ಲ. ತನ್ನ ಜೀವನದಲ್ಲಿ ಒಂದು ದೊಡ್ಡ ನಿರ್ಧಾರವನ್ನು ತೆಗೆದುಕೊಂಡಿದ್ದನಷ್ಟೆ. ಆ ನಿರ್ಧಾರವನ್ನು ಕಾರ್ಯಗತ ಮಾಡಲು ಕೋರ್ಟಿನ ಹತ್ತಿರ ಹೋದಾಗ ಅಲ್ಲಿಯ ಹಿರಿಯ ವಕೀಲರುಗಳು ಮೊನ್ನೆ ಮೊನ್ನೆ ಲಾ ಕಾಲೇಜಿನಿಂದ ಹೊರಬಂದಿದ್ದ ನವ ಯುವಕನೊಬ್ಬನತ್ತ ಕಳಿಸಿದರು. ಆತ ಒಂದು ಪ್ರಮಾಣಪತ್ರ (ಅಫಿಡವಿಟ್ಟು) ಮಾಡಿಕೊಟ್ಟಿದ್ದು ಇಬ್ಬರೂ ನ್ಯಾಯಾಧೀಶರ ಹತ್ತಿರ ಹೋಗಿ ಕಾಯಬೇಕಾಗಿ ಬಂದಿತ್ತು. ವಕೀಲರ ಮುಖದಲ್ಲಿ ಆತಂಕವಿದ್ದಿತು. ಅದು ಅವರ ಮೊದಲನೆಯ ಕೇಸು. ಸರಿಯಾಗಿರದಿದ್ದರೆ ಎಂಬ ಯೋಚನೆ ಇತ್ತು. ಆದರೆ ಶ್ರೀನಿವಾಸನ ಮುಖದಲ್ಲಿ ಸಂತಸವನ್ನು ಕಾಣಬಹುದಿತ್ತು. ಇನ್ನು ಕೆಲವೆ ಕ್ಷಣಗಳಲ್ಲಿ ಬಿಡುಗಡೆ ಸಿಗುತ್ತದೆ ಎಂಬ ನಿರೀಕ್ಷಣೆ ಇದ್ದಿತು. ಯಾವುದರಿಂದ ಬಿಡುಗಡೆ? ತನ್ನ ಹೆಸರಿನಿಂದ! ಹಳೆಯದ್ದೆಲ್ಲಾ ನೆನಪು ಬಂದಿತು.

ಅವನ ತಂದೆ ತಾಯಿ ತಮ್ಮ ಮನೆ ದೇವರು ಶ್ರೀರಂಗಪಟ್ಟಣದ ಹತ್ತಿರದ ಕರಿಘಟ್ಟದ ಶ್ರೀನಿವಾಸನ ಭಕ್ತರು. ಪ್ರತಿವರ್ಷ ಅಲ್ಲೆ ನಿಂತೂ ನಿಂತೂ ಹರಿಯುತ್ತಿದ್ದ ಮೊಣಕಾಲಿನ ಆಳದ ಲೋಕಪಾವನಿ ನದಿಯ ನೀರಿನಲ್ಲಿ ಹೇಗೋ ಮಿಂದು ಬೆಟ್ಟದ ಮೇಲೆ ಹೋಗಿ ಸೇವೆ ಮಾಡಿಸುತ್ತಿದ್ದರು. ಆ ದೇವರ ನೆನಪಿನಲ್ಲಿಯೇ ವೃದ್ಧಾಪ್ಯದಲ್ಲಿ ಹುಟ್ಟಿದ ಮಗನಿಗೆ ಶ್ರೀನಿವಾಸ ಎಂಬ ಹೆಸರನ್ನು ಇಟ್ಟಿದ್ದರು. ಮಗುವಿದ್ದಾಗ ಅವನು ತನ್ನ ಹೆಸರಿನ ಬಗ್ಗೆ ಏನೂ ಆಕ್ಷೇಪಣೆಯನ್ನು ಎತ್ತಿರಲಿಲ್ಲ. ಶ್ರೀನಿವಾಸ ಎಂದು ಕೂಗಿದಾಗ ಬಂದೇ ಎಂದು ಹೇಳಲೂ ಯಾವತ್ತೂ ಮರೆಯಲಿಲ್ಲ. ಹೆಸರು ಕೇಳಿದಾಗ ಮುದ್ದಾಗಿ ಸ್ತೀ-ನಿ-ವಾ-ಸ ಎಂದು ಹೇಳುತ್ತಿತ್ತು ಮಗು. ಮೊದಮೊದಲು ಶ ಬರುತ್ತಿರಲಿಲ್ಲ. ಆಮೇಲೆ ಅದು ಸರಿಹೋಯಿತು.

ಶಾಲೆ ಸೇರಿದಾಗ ಅವನ ತೊಂದರೆಗಳು ಪ್ರಾರಂಭವಾಗಿದ್ದವು. ಕೆ. ಶ್ರೀನಿವಾಸ ಎಂದು ಅಧ್ಯಾಪಕರು ಕೂಗಿದಾಗ ಎಸ್‌ಸಾರ್ ಎಂದು ಕೂಗಿದ. ಆದರೆ ಅವನ ಧ್ವನಿಯ ಜೊತೆಯೇ ಮತ್ತೊಂದು ಎಳೆಯ ಧ್ವನಿಯೂ ಕೇಳಿಸಿತು. ಹೌದು, ತರಗತಿಯಲ್ಲಿ ಇಬ್ಬರು ಕೆ. ಶ್ರೀನಿವಾಸರಿದ್ದರು. ಆ ವರ್ಷದ ತರಗತಿಯ ಅಧ್ಯಾಪಕರು ಕನ್ನಡ ಪಾಠ ಹೇಳಿಕೊಡುತ್ತಿದ್ದರಿಂದ ಅವರಿಗೆ ಆಂಗ್ಲ ಭಾಷೆಯ ಬಗ್ಗೆ ತಿರಸ್ಕಾರ ಭಾವನೆಯಿದ್ದಿತು. ಆದ್ದರಿಂದ ಒಬ್ಬನನ್ನು ಅ. ಶ್ರೀನಿವಾಸ ಮತ್ತು ಇನ್ನೊಬ್ಬನನ್ನು ಆ. ಶ್ರೀನಿವಾಸ ಎಂದು ಕರೆಯಲು ಪ್ರಾರಂಭಿಸಿದರು. ವರ್ಷ ಮುಗಿದು ಮುಂದಿನ ತರಗತಿಗೆ ಹೋದಾಗ ಕ್ಲಾಸ್ ಟೀಚರ್ ಬದಲಾವಣೆಯಾಗಿ ಇಂಗ್ಲಿಷ್ ಪಾಠ ಹೇಳಿಕೊಡುವವರಾಗಿದ್ದರಿಂದ ಅವರಿಗೆ ಸ್ವಾಭಾವಿಕವಾಗಿ ಇಂಗ್ಲಿಷ್ ಅಕ್ಷರಗಳ ಮೇಲೆ ಮಮತೆ ಹೆಚ್ಚಿದ್ದು ಎ. ಶ್ರೀನಿವಾಸ, ಬಿ. ಶ್ರೀನಿವಾಸ, ಸಿ. ಶ್ರೀನಿವಾಸ ಎಂದು ಹೊಸ ನಾಮಕರಣ ಮಾಡಿದರು. ಹೌದು, ಮತ್ತೊಬ್ಬ ಶ್ರೀನಿವಾಸ ಹೆಸರಿನ ಹುಡುಗ ತರಗತಿಯನ್ನು ಸೇರಿದ್ದು ಒಂದೇ ತರಗತಿಯಲ್ಲಿ ಈಗ ಮೂರು ಶ್ರೀನಿವಾಸರಿದ್ದರು. ತೇರ್ಗಡೆಯಾಗಿ ಮುಂದಿನ ತರಗತಿಗೆ ಹೋದಾಗ ಚರಿತ್ರೆಯ

ಅಧ್ಯಾಪಕರು ಕ್ಲಾಸ್ ಟೀಚರ್ ಆದರು. ಅದ್ದರಿಂದ ಇವರುಗಳ ಹೆಸರುಗಳು ಒಂದನೆಯ ಶ್ರೀನಿವಾಸ, ಎರಡನೆಯ ಶ್ರೀನಿವಾಸ.. ಇತ್ಯಾದಿಗೆ ಬದಲಾದವು. ಒಟ್ಟಿನಲ್ಲಿ ಹೈಸ್ಕೂಲು ಮುಗಿಯುವಾಗ ತರಗತಿಯಲ್ಲಿ ಐದು ಶ್ರೀನಿವಾಸರಿದ್ದರು. ಬೇರೆ ಬೇರೆ ಅಧ್ಯಾಪಕರು ಬೇರೆ ಬೇರೆ ಹೆಸರುಗಳನ್ನು ಕೊಟ್ಟಿದ್ದರೂ, ಆಂಗ್ಲ ಭಾಷೆಯ ಮೋಹದಿಂದಾಗಿ ಕಡೆಗೂ ಉಳಿದಿದ್ದು ಆ ಭಾಷೆಯ ಅಕ್ಷರಗಳು – ಎ. ಶ್ರೀನಿವಾಸ, ಬಿ. ಶ್ರೀನಿವಾಸ ಇತ್ಯಾದಿ. ಇಷ್ಟು ಹೊತ್ತಿಗೆ ಈ ಶ್ರೀನಿವಾಸರೆಲ್ಲ ತಮ್ಮ ನಿಜ ಇನ್‌ಷಿಯಲ್‌ಗಳನ್ನು ಮರೆತುಬಿಟ್ಟು ಎ. ಶ್ರೀನಿವಾಸ, ಬಿ. ಶ್ರೀನಿವಾಸ ಇತ್ಯಾದಿ ಎಂದೇ ಕರೆದುಕೊಳ್ಳಲು ಪ್ರಾರಂಭಿಸಿದ್ದರು. ನಮ್ಮ, ಅಂದರೆ ಈ ಕಥೆಯ ನಾಯಕ, ಬಿ. ಶ್ರೀನಿವಾಸ. ಕೆಲವು ಸಹಪಾಠಿಗಳು ಅವನನ್ನು ತಮಾಷೆಗಾಗಿ ಅವನ ಪೂರ್ವನಾಮಗಳಲ್ಲೊಂದಾದ ಎರಡನೆಯ ಶ್ರೀನಿವಾಸ ಎಂದು ಕರೆಯುತ್ತಿದ್ದರು.

ಹೊಸದಾಗಿ ಕಾಲೇಜು ಸೇರಿದಾಗ ಶ್ರೀನಿವಾಸನಿಗೆ ಸ್ವಲ್ಪ ಹಾಯ್ ಎನಿಸಿತು. ಏಕೆಂದರೆ ಇತರ ಶ್ರೀನಿವಾಸರು ಅಂದರೆ ಒಂದನೆಯ, ಮೂರನೆಯ, ನಾಲ್ಕನೆಯ ಮತ್ತು ಐದನೆಯ ಶ್ರೀನಿವಾಸರು ಬೇರೆಯ ಕಾಲೇಜುಗಳಿಗೆ ಹೋಗಿಬಿಟ್ಟಿದ್ದರು. ಸದ್ಯ ಶ್ರೀನಿವಾಸ ನಾನು ಒಬ್ಬನೇ ಎಂದುಕೊಂಡ. ಆದರೆ ಆ ಸಂತೋಷ ಇದ್ದಿದ್ದು ಎರಡೇ ದಿನ. ಏಕೆಂದರೆ ಮತ್ತೊಬ್ಬ ಹೊಸ ಶ್ರೀನಿವಾಸ ಕಾಲೇಜು ಸೇರಿದ್ದ. ನಿಧಾನವಾಗಿ ತರಗತಿಯಲ್ಲಿ ಶ್ರೀನಿವಾಸರ ಸಂಖ್ಯೆ ಮತ್ತೆ ಹೆಚ್ಚಾಯಿತು. ಒಟ್ಟಿನಲ್ಲಿ ಆ ವರ್ಷ ಆ ತರಗತಿಯಲ್ಲಿ (ಅಂದರೆ ಎ, ಬಿ, ಸಿ ಉಪತರಗತಿಗಳೂ ಸೇರಿ) 10 ಶ್ರೀನಿವಾಸರಿದ್ದರು. ಕಡೆಯ ಶ್ರೀನಿವಾಸನಾದ ಜೆ. ಶ್ರೀನಿವಾಸ ಒಗ್ಗಟ್ಟಿಗಾಗಿ 'ಶ್ರೀನಿವಾಸ ಸಂಘ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ. ಆದರೆ ಇತರ ತರಗತಿಗಳಲ್ಲೂ ಶ್ರೀನಿವಾಸರಿದ್ದರಲ್ಲವೆ? ಕಾಲೇಜಿನಲ್ಲಿ ಒಟ್ಟು ಇದ್ದ ಇಪ್ಪತ್ತಾರು ಶ್ರೀನಿವಾಸರೂ ಈ ಸಂಘದ ಸದಸ್ಯರಾಗಿದ್ದರು. ಯಾವ ಶ್ರೀನಿವಾಸನಿಗೆ ಏನು ಆಪತ್ತು ಬಂದರೂ ಎಲ್ಲರೂ ಒಟ್ಟಿಗೆ ಹೋರಾಡುತ್ತಿದ್ದರು. ಆಗ ಈಗ ಪಿಕ್‌ನಿಕ್ ಹೋಗುತ್ತಿದ್ದರು. ಆ ಸಂಘದಲ್ಲಿ ಒಬ್ಬರು ಇನ್ನೊಬ್ಬರನ್ನು ಹೇಗೆ ಸಂಬೋಧಿಸುತ್ತಿದ್ದರು ಎನ್ನುವುದು ನಮಗೆ ತಿಳಿಯದ ವಿಷಯ. ಆಂಗ್ಲ ಭಾಷೆಯ 26 ಅಕ್ಷರಗಳನ್ನೂ ಬಳಸುತ್ತಿದ್ದರೋ ಏನೋ! ಎ. ಶ್ರೀನಿವಾಸನಿಂದ ಹಿಡಿದು ಜೆಡ್. ಶ್ರೀನಿವಾಸದ ತನಕ? ಗೊತ್ತಿಲ್ಲ. ಇದನ್ನು ಸರಿಯಾಗಿ ಊಹೆಮಾಡುವಷ್ಟು ಜಾಣರಲ್ಲ ನಾವು! ಈ ಸಂಘವನ್ನು ನೋಡಿ ಇತರ ಸಂಘಗಳೂ ಹುಟ್ಟಿಕೊಂಡವು: ವೆಂಕಟೇಶ ಸಂಘ, ಸತ್ಯನಾರಾಯಣ ಸಂಘ, ಚಂದ್ರಶೇಖರ ಸಂಘ ಇತ್ಯಾದಿ. ಆದರೂ ಶ್ರೀನಿವಾಸ ಸಂಘದಲ್ಲಿ ಹೆಚ್ಚು ಸದಸ್ಯರಿದ್ದರಲ್ಲದೆ ಕಾಲೇಜಿನ ಮೊದಲನೆಯ ಸಂಘವೆಂದೂ ಮಹತ್ವ ಹೆಚ್ಚಿತ್ತು. ಈ ಸಂಘಗಳ ಮಧ್ಯೆಬಹಳ ಪೈಪೋಟಿ ಇದ್ದು ವಿವಿಧ ಪಂದ್ಯಗಳಲ್ಲದೆ ಆಗಾಗ್ಗೆ ಘರ್ಷಣೆಗಳೂ ಇದ್ದು ಸಣ್ಣ ಪುಟ್ಟ ಜಗಳಗಳೂ ನಡೆಯುತ್ತಿದ್ದವು.

ಒಂದು ಬಾರಿ ಶ್ರೀನಿವಾಸ ಸಂಘದವರಿಗೆ ಕೆಟ್ಟ ಹೆಸರು ತರಲು ವೆಂಕಟೇಶ ಸಂಘದವರು ಶ್ರೀನಿವಾಸ ಎಂಬ ಹೆಸರಿನಲ್ಲಿ ಅದೇ ಕಾಲೇಜಿನ ಗೀತಾ ಎಂಬ ಹುಡುಗಿಗೆ ಒಂದು ಪತ್ರ ಕಳಿಸಿದರು. ಪತ್ರದಲ್ಲಿ ಏನಿತ್ತೋ ಅಂತೂ ಎಲ್ಲರು ಅದನ್ನು ಪ್ರೇಮ ಪತ್ರವೆಂದು ಕರೆದರು. ಬಹಳ ಗಲಾಟೆಯಾಗಿ ಪ್ರಿನ್ಸಿಪಾಲರೂ ಎಲ್ಲ ಶ್ರೀನಿವಾರನ್ನೂ ಕರೆದು ಅವರಿಗೆ

ಛೀಮಾರಿ ಹಾಕಿದ್ದರು. ತಾವು ಮಾಡದ ತಪ್ಪಿಗೆ ಬಯ್ಯಿಸಿಕೊಂಡವೆಲ್ಲಾ ಎಂದು ಎಲ್ಲ ಶ್ರೀನಿವಾಸರಿಗೂ ಬೇಸರ ಬಂದು ಸೇಡು ತೀರಿಸಿಕೊಳ್ಳಲು ಅವರು ಏನು ಮಾಡಬೇಕೆಂದು ಯೋಚಿಸುತ್ತಿದ್ದರು. ಅದೇನೇ ಇರಲಿ, ಆ ಪತ್ರವೂ ಸರಿಯಾದ ವ್ಯಕ್ತಿಗೆ ಹೋಗಿರಲಿಲ್ಲ, ಗೀತಾ ಎಂಬ ಹೆಸರಿನ ಏಳು ಹುಡುಗಿಯರಿದ್ದರು, ಈ ಪತ್ರ ಯಾರಿಗೆ ಸೇರಬೇಕಿತ್ತೋ ಅದು ತಿಳಿಯಲಿಲ್ಲ, ಒಟ್ಟಿನಲ್ಲಿ ಎಲ್ಲ ಗೀತಾಗಳೂ ಸೇರಿ ದೂರು ಕೊಟ್ಟಿದ್ದರು. ಗೀತಾ ಎಂಬ ಹೆಸರು ಇಟ್ಟುಕೊಂಡಿದ್ದ ಈ ಯುವತಿಯರಿಗೂ ಜೀವನದಲ್ಲಿ ನಮ್ಮ ಶ್ರೀನಿವಾಸರ ತರಹ ಬಹಳ ಗೊಂದಲಗಳಿದ್ದವು. ಅವುಗಳ ಬಗ್ಗೆ ಈಗ ನಾವು ಯೋಚಿಸುವುದು ಬೇಡ, ಏಕೆಂದರೆ ಅದು ನಮ್ಮನ್ನು ನಮ್ಮ ಮೂಲ ಉದ್ದೇಶದಿಂದ ದೂರ ಕರೆದುಕೊಂಡು ಹೋಗಿಬಿಡುತ್ತದೆ.

ನಮ್ಮ ಶ್ರೀನಿವಾಸ ಕೆಲಸಕ್ಕೆ ಸೇರಿದ ನಂತರ ತನ್ನ ತೊಂದರೆಗಳೆಲ್ಲಾ ಮುಗಿಯುತ್ತದೆ ಎಂದುಕೊಂಡಿದ್ದ. ಆದರೆ ಅದು ಹಾಗೇನೂ ಆಗಲಿಲ್ಲ. ಅವನ ಕಂಪನಿ ದೊಡ್ಡದಾಗಿದ್ದರೂ ಅವನ ವಿಭಾಗದಲ್ಲಿಯೇ ಮೂರು ಶ್ರೀನಿವಾಸರಿದ್ದರು. ಏನು ಮಾಡಬೇಕೆಂದು ಯೋಚಿಸುತ್ತಿದ್ದಾಗ ಅವನಿಗೆ ಆಂಗ್ಲ ಹಾಸ್ಯ ಲೇಖಕ ವುಡ್‌ಹೌಸ್ ರವರ ಒಬ್ಬ ನಾಯಕ ಸ್ಮಿತ್ ನೆನಪಿಗೆ ಬಂದ ಆತ ಸ್ಮಿತ್ ಎಂಬ ಬಹಳ ಸಾಧಾರಣ ಹೆಸರನ್ನು ಇಟ್ಟುಕೊಂಡು ಬಹಳ ಕಷ್ಟಪಟ್ಟಿದ್ದು ಕಡೆಗೆ ಆ ಹೆಸರಿಗೆ ಪಿ ಎಂಬ ಅಕ್ಷರವನ್ನು ಸೇರಿಸಿಕೊಂಡು ಪಿ(ಮೌನ)ಸ್ಮಿತ್ ಎಂದು ಬದಲಾಯಿಸಿಕೊಂಡು ಜೀವನದಲ್ಲಿ ಮೇಲೆ ಹೋಗಿದ್ದ. ಇದೂ ನಮ್ಮ ಶ್ರೀನಿವಾಸನಿಗೆ ಸ್ಫೂರ್ತಿಯಾಗಿ ತನ್ನ ಹೆಸರನ್ನು ಬದಲಾಯಿಸಿಕೊಳ್ಳಲು ನಿರ್ಧರಿಸಿದ. ಆಧಾರ್, ಡ್ರೈವಿಂಗ್ ಲೈಸೆನ್ಸ್, ಪ್ಯಾನ್ ಕಾರ್ಡ್ ಇತ್ಯಾದಿಯೆಲ್ಲ ಬದಲಾಯಿಸಬೇಕಾಗುತ್ತದೆ ಎಂದು ಗೆಳೆಯರು ಎಚ್ಚರಿಸಿದರು. ಸಂಬಂಧಿಕರು ಇನ್ನೂ ಏನೇನೋ ಕಾರಣಗಳನ್ನು ಕೊಟ್ಟರು. ನಿನಗೆ ಎಷ್ಟು ಒಳ್ಳೆಯ ಹೆಸರಿಟ್ಟಿದ್ದೆವು ಎಂದು ಅಪ್ಪ ಬೇಜಾರು ಮಾಡಿಕೊಂಡರು; ಅಮ್ಮ ಅತ್ತಳು. ಬೇಡವೋ, ಕರಿಘಟ್ಟದ ದೇವರಿಗೆ ಕೋಪ ಬರುತ್ತೋ, ಬೇಡ ಕಣೊ ಎಂದರು! ತಪ್ಪು ಕಾಣಿಕೆ ಕೊಡ್ತೀನಿ ಎಂದು ಅವರನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದ. ಹಿಂದಿನ ದಿನ ಹಲವಾರು ಬಂಧು ಬಳಗದವರು ಬಂದು ಅವನ ಪೂರ್ವನಾಮದ ಅವಸಾನದ ಬಗ್ಗೆ ಸಂತಾಪ ಸೂಚಿಸಿ ಹೋದರು. ಕಡೆಗೆ ನಮ್ಮ ಶ್ರೀನಿವಾಸ ಯಾವ ಹೆಸರನ್ನು ಇಟ್ಟುಕೊಂಡ? ಸ್ಮಿತ್ ತರಹ ಏನಾದರೂ ಅಕ್ಷರ ಸೇರಿಸಿಕೊಂಡನೆ? ತಿಳಿಯದು. ನ್ಯಾಯಾಧೀಶರ ಕೋಣೆಯಿಂದ ಕರೆ ಬಂದಿತು. ಶ್ರೀನಿವಾಸ ಮತ್ತು ಅವನ ವಕೀಲ ಒಳಹೋದರು. ಅವರು ಹೊರಗೆ ಬರಲಿ. ಆಗ ಅವನ ಹೊಸ ಹೆಸರು ತಿಳಿಯುತ್ತದೆ.

(1950ರ ದಶಕದಲ್ಲಿ ಬಸವನಗುಡಿಯ ನ್ಯಾಶನಲ್ ಹೈಸ್ಕೂಲಿನಲ್ಲಿ ನಾನು ಓದು ಶುರುಮಾಡಿದಾಗ ನಮ್ಮ ಸಿ ಸೆಕ್ಷನ್‌ನಲ್ಲಿ ಇಬ್ಬರು 'ಕೆ. ಶ್ರೀನಿವಾಸನ್'ರಿದ್ದರು. ನಮ್ಮ ಕ್ಲಾಸ್ ಟೀಚರ್ ಎಚ್ ಎಸ್ ಎಮ್ ಒಬ್ಬನ ಇನ್‌ಷಿಯಲ್‌ನ್ನು ವಿಕೆ ಎಂದು ಮಾಡಿ ಆ ಸಮಸ್ಯೆಯನ್ನು ಬಗೆಹರಿಸಿದ್ದರು. ಇಂದೂ ನಾವು ಅವನನ್ನು ವಿಕೆ ಎಂದೆ ಕರೆಯುತ್ತೇವೆ! ಹಾಗೂ ಬೇರೆ ಇಬ್ಬರು 'ಶ್ರೀನಿವಾಸ'ರಿದ್ದರು. ಅವರ ಇನ್‌ಷಿಯಲ್‌ಗಳು ಬೇರೆ ಇದ್ದಿದ್ದರಿಂದ ಅವರ ಹೆಸರುಗಳು ಹಾಗೇ ಉಳಿದವು) ■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana

## ಬೀಚಿ ಪ್ರಕಾಶನ



**Get your Book Published !**

**We provide Publishing, Marketing & Distribution support to Authors**

- Sell your books both online & Retail( Book Shops)
- Get 100/ Royalty
- Retain Full copy Rights
- Publish your book faster
- Get paid for every book sold

**ಲೇಖಕರೇ, ತಮ್ಮ ಪುಸ್ತಕಗಳು ಪ್ರಕಟವಾಗಬೇಕೆ?**

ನಾವು ಲೇಖಕರಿಗೆ ಪುಸ್ತಕಗಳನ್ನು ಮುದ್ರಿಸಲು, ಮಾರಾಟ ಮಾಡಲು ಹಾಗೂ ವಿತರಿಸಲು ಸಹಕರಿಸುತ್ತೇವೆ.

- ನಿಮ್ಮ ಪುಸ್ತಕಗಳನ್ನು ಆನ್‌ಲೈನ್ ಮತ್ತು ಸಗಟು ವ್ಯಾಪಾರ ಮಳಿಗೆಗಳಿಂದ ಮಾರಾಟ ಮಾರಬಹುದು.(ಪುಸ್ತಕ ಅಂಗಡಿ).
- ರಾಯಧನ ೧೦೦% ಪಡೆಯುತ್ತೀರಿ.
- ನಕಲು ಹಕ್ಕುಗಳನ್ನು ಉಳಿಸಿಕೊಳ್ಳಿ.
- ನಿಮ್ಮ ಪುಸ್ತಕಗಳನ್ನು ತ್ವರಿತವಾಗಿ ಮುದ್ರಿಸಬಹುದು.
- ಪ್ರತಿ ಪುಸ್ತಕ ಮಾರಾಟದ ಬಳಿಕ ಹಣ ಪಡೆಯುತ್ತೀರಿ.

**CONTACT: 9845264304**

# ವಾಗಡ್ವೆಂಚರ್

● ಶಂಸ ಐತಾಳ

1. ದಿನನಿತ್ಯದ ಪ್ರಾತಃಸ್ನಾನ ಸಂಧ್ಯಾವಂದನೆಗಳನ್ನು ಧ್ಯಾನಾನಾದವಾದಿ ಷೋಡಶೋಪಚಾರ ಪೂಜೆಯನ್ನು ವಿಧ್ಯುಕ್ತವಾಗಿ ಮುಗಿಸಿ, 'ಸೇಫ್ ಆಗಿ ವಾಪಸ್ ಬರುವಂತೆ ಅನುಗ್ರಹಿಸಿ' ಎಂದು ಹತ್ತು ಹತ್ತು ಸಲ ವಿಘ್ನನಿವಾರಕ ಗಣಪತಿಯನ್ನು ಪ್ರಾರ್ಥಿಸಿ. ಆ ಮೇಲೆಯೇ ಮನೆಯಿಂದ ಹೊರಗೆ ಹೆಜ್ಜೆಯಿಡಿ.

2. ಪಂಚೆಯನ್ನು ಉಟ್ಟುಕೊಳ್ಳಬೇಡಿ, ಕಾಲಿಗೆ ಸುತ್ತಿಕೊಂಡು ನೀವು ಉರುಳಿ ಬೀಳಬಹುದು. ನನ್ನ ಹಳೆಯ ಪ್ಯಾಂಟ್ ಅಥವಾ ಪೈಜಾಮವನ್ನು ಧರಿಸಿ.

3. ಬೆಳಗಿನ ಜಾವ ಯಾವ ದ್ವಿಚಕ್ರ, ತ್ರಿಚಕ್ರ, ಚತುಶ್ಚಕ್ರ ವಾಹನಗಳ ಚಾಲಕರೂ ಸಂಚಾರ ನಿಯಮಗಳನ್ನು ಪಾಲಿಸುವುದಿಲ್ಲ. ಇಡೀ ರಸ್ತೆಯೇ (ಕೆಲವು ಸಲ ಫುಟ್‌ಪಾತ್ ಕೂಡ) ತಮ್ಮ ಆಸ್ತಿಯೆಂಬಂತೆ ವರ್ತಿಸುತ್ತಾರೆ. ಅಲ್ಲದೆ ಐದಾರು ದಿನಗಳಿಂದ ಜಿರಾಜಿರಿ ಸುರಿಯುತ್ತಿರುವ ರಾಕ್ಷಸ ಮಳೆಯಿಂದ ಎಲ್ಲ ರಸ್ತೆಗಳೂ ವಂಡಾರು ಕಂಬಳದ ಕೆಸರುಗದ್ದೆಗಳಂತಾಗಿವೆ. ರಸ್ತೆಗಳ ನಡುವೆ ಅಲ್ಲಲ್ಲಿ ಹಳ್ಳಗುಂಡಿಗಳೂ ಸರೋವರಗಳೂ ಉಂಟಾಗಿ ಗುಂಡಿಗಳಲ್ಲಿ ರಸ್ತೆಯೋ ರಸ್ತೆಯಲ್ಲಿ ಗುಂಡಿಗಳೋ ಎಂಬುದೇ ತಿಳಿಯದಂತಾಗಿದೆ. ನಿಮ್ಮ ಉದ್ದವಾದ ಊರುಗೋಲಿನಿಂದ ಮೊದಲು ಆಮೂಲಾಗ್ರವಾಗಿ ರಸ್ತೆಯನ್ನು ಸರ್ವೇಮಾಡಿ ಅನಂತರವೇ ಮುಂದೆ ಸಾಗಿ.

4. ಬೆಂಗಳೂರು ಇನ್ನೂ ಸಿಂಗಾಪುರೀಕರಣ ಗೊಂಡಿಲ್ಲ; ರಸ್ತೆಗಳೂ ಹೇಮಾಮಾಲಿನಿಯ ಕೆನ್ನೆಗಳಂತೆ ನುಣುಪಾಗಿಲ್ಲ ನೆನಪಿರಲಿ.

5. ರಸ್ತೆ ಕ್ರಾಸ್ ಮಾಡುವಾಗ ನಿಮ್ಮ ಜೀವವನ್ನು ಎರಡೂ ಕೈಗಳಲ್ಲಿ ಭದ್ರವಾಗಿ ಹಿಡಿದುಕೊಂಡು ಆಮೆ ವೇಗದಲ್ಲಿ ನಿಧಾನವಾಗಿ ಮುಂದೆ ಹೋಗಿ. ನನ್ನ ಹೆಲ್ಮೆಟನ್ನು ತಲೆಗೆ ಏರಿಸಿಕೊಂಡು ಹೋಗುವುದು ಒಳ್ಳೆಯದು ಟ್ರೈ ಮಾಡಿ.

6. ಹೆಣ್ಣುಮಕ್ಕಳು ಎದುರಾದಾಗ, ಅಥವಾ ಹಿಂದಿನಿಂದ ನಿಮ್ಮನ್ನು ಓವರ್‌ಟೇಕ್ ಮಾಡುವಾಗ ಅವರ ಮೈ ನಿಮ್ಮ ಮೈಗೆ ತಾಗದಂತೆ ಕಟ್ಟೆಚ್ಚರ ವಹಿಸಿ. ಇತ್ತೀಚೆಗೆ ಮಹಿಳೆಯರು ಸಬಲೀಕರಣಗೊಂಡಿದ್ದಾರೆ. ಯಾವಳೇ ಸ್ತ್ರೀ ಯಾವನೇ ಪುರುಷನ ಮೇಲೆ ಯಾವುದೇ ಕಾಲದಲ್ಲಿ ಲೈಂಗಿಕ ಕಿರುಕುಳದ ಮೊಕದ್ದಮೆಯನ್ನು ಈಗ ಸುಲಭವಾಗಿ ಹೂಡಬಹುದು. ನೀವು ನಿವೃತ್ತಿಹೊಂದಿ ಹದಿನೆಂಟಿಪ್ಪತ್ತು ವರ್ಷಗಳಾಗಿವೆ. ಖರೆ, ಆದರೆ ನೀವು ಪ್ರಾಧ್ಯಾಪಕರಾಗಿದ್ದಾಗ, ನಿಮ್ಮ ಶಿಷ್ಯೆಯೋ ಪಿಎಚ್‌ಡಿ ವಿದ್ಯಾರ್ಥಿನಿಯೋ ಆಗಿದ್ದವಳು ಈಗ ಕೂಡ 'ಮಿಟೂ' ಎನ್ನಬಹುದಾಗಿದೆ.

7. ಬೆಂಗಳೂರಿಗರಿಗೆ ಅದೇಕೋ ಏನೋ 'ನಡೆಯಲು' ಬರುವುದಿಲ್ಲ. ಅವರು ಹುಚ್ಚು ಕುದುರೆಯಂತೆ ಹಗಲಿರುಳೂ ಶರವೇಗದಲ್ಲಿ ಧಾವಿಸುತ್ತಿರುತ್ತಾರೆ. ಹಿಂದಿನಿಂದ ಅಥವಾ ಮುಂದಿನಿಂದ ಯಾರಾದರೂ ಢಿಕ್ಕಿ ಹೊಡೆದು ನೀವು ಕುಸಿದು ಬಿದ್ದರೆ ತತ್‌ಕ್ಷಣ ನನಗೆ ಏಮರ್ಜೆನ್ಸಿ ಕಾಲ್‌ಮಾಡಿ.

8. ಫೋನ್ ಎಂದೊಡನೆ ನೆನಪಾಯಿತು. ನಿನ್ನೆ ರಾತ್ರಿ ಅದನ್ನು ಹಂಡ್ರೆಡ್ ಪರ್ಸೆಂಟ್ ಚಾರ್ಜ್ ಮಾಡಿದ್ದೀರಿ ತಾನೇ? ಮೊಬೈಲ್ ಜೊತೆಗೆ ಬ್ಯಾಟ್ರಿ, ಛತ್ರಿ, ಸಂಪೂರ್ಣ ವಿಳಾಸ ಮತ್ತು ಭಾವಚಿತ್ರಗಳಿಂದ ಕೂಡಿದ ಯಾವುದಾದರೂ ಒಂದು ಅಧಿಕೃತ ಐಡೆಂಟಿಟಿ ಕಾರ್ಡಿನ ಸೆಲ್ಫ್ ಎಟೆಸ್ಟೆಡ್ ಜೆರಾಕ್ಸ್ ಕಾಪಿಯನ್ನೂ ಇಟ್ಟುಕೊಳ್ಳಿ. ಹೆಚ್ಚು ಉತ್ತಮವಾದ ಅಂತಹ ಕಾರ್ಡ್ ಎಂದರೆ ಆಧಾರ್ ಕಾರ್ಡ್. ಅದೇ ನಿಮಗೆ ಸದಾ ಆಧಾರವನ್ನು ನೀಡುತ್ತದೆ. ಜೀವನದುದ್ದಕ್ಕೂ, ಜೀವನಾನಂತರವೂ.

9. ಊರಿನಲ್ಲಿ ಮಾಡುವಂತೆ ಅಂಗಡಿಗಳ ಬೋರ್ಡ್‌ಗಳನ್ನು ಓದುತ್ತ ಹೋಗಬೇಡಿ. 'ಇಲ್ಲಿ ಮಲವಿಸರ್ಜನೆಯನ್ನು ವಿಸರ್ಜಿಸ ಕೂಡದು', 'ಭಾರಿಸು ಖನ್ನಢ ಢಿಂಢಿಮವ', 'ಇಲಿಗೆ ಚೀಟಿ ಹಚ್ಚಬಾರದು', 'ಕನ್ನಡಕಗಳಿಗೆ ಓರಾಡಿ' ಮುಂತಾದ ಗೋಡೆಬರಹಗಳನ್ನು ನೋಡಿ 'ಶಬ್ದಮಣಿದರ್ಪಣಮ್' ತಜ್ಞರಾಗಿರುವ ನಿಮ್ಮ ಕರುಳು ಚುರ್ ಎನ್ನಬಹುದು. ದುಃಖ-ತಪ್ತರಾಗಬೇಡಿ. ಅವುಗಳಲ್ಲಿನ ಅಕ್ಷರ ಮತ್ತು ವ್ಯಾಕರಣ ದೋಷಗಳನ್ನು ತಿದ್ದುವುದು ನಿಮಗೆ ಸರ್ವದಾ ಸಾಧ್ಯವಿಲ್ಲ. ಅಷ್ಟಲ್ಲದೆ ಬಹುತೇಕ ಬೆಂಗಳೂರಿಗರಿಗೆ ಕನ್ನಡವೇ ಬರುವುದಿಲ್ಲವಲ್ಲ? ಬಂದರೂ ಬಳಸಲು ಲಜ್ಜೆಪಡುವರಲ್ಲ?

10. ಫುಟ್‌ಪಾತ್ ಮತ್ತು ನಡುರಸ್ತೆ - ಇವುಗಳಲ್ಲಿ ಯಾವುದು ಹೆಚ್ಚು ಸುರಕ್ಷಿತ ಎಂದು ನಿರ್ಧರಿಸುವುದು ನಿಮ್ಮ ವಿವೇಚನೆಗೇ ಬಿಟ್ಟದ್ದು. ನಿಮ್ಮ ಮನಃಸಾಕ್ಷಿ ಸೂಚಿಸುವಂಥ ವಾಕ್‌ಪಥವನ್ನು ಗುರುತಿಸಿಕೊಳ್ಳುವುದು ನಿಮ್ಮದೇ ಜವಾಬ್ದಾರಿ.

11. ಅಪರಿಚಿತರೊಂದಿಗೆ ಖಂಡಿತಾ ಮಾತನಾಡಬೇಡಿ. ಮಾತನಾಡಿದರೂ ನಿಮ್ಮ ವೈಯಕ್ತಿಕ 'ಕಂಟೆಂಟ್‌ಗಳು ಹಿಡನ್' ಆಗಿರಲಿ. ಪರಿಚಿತರು ಸಿಕ್ಕಿದರೂ ದಾರಿಯಲ್ಲಿ ಅವರೊಡನೆ ಹರಟೆ ಹೊಡೆಯುವುದು ಕ್ಷೇಮಕರವಲ್ಲ; ಅದು ಸುಸಂಸ್ಕೃತ ವರ್ತನೆಯೂ ಅಲ್ಲ.

12. ಸೇಫ್ ಆಗಿ ಮನೆಗೆ ವಾಪಸ್ ಬಂದ(ರೆ) ಅನಂತರ ಇನ್ನೊಮ್ಮೆ ಶುದ್ಧಿಸ್ನಾನ ಮಾಡಿ ದೇವರ ಕೋಣೆಗೆ ಹೋಗಿ ಜೀವ ಉಳಿಸಿದ ವಿಘ್ನವಿನಾಯಕನಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸಿ; ಅಡುಗೆ ಮನೆಗೆ ಹೋಗಿ ಬಿಸಿ ಬಿಸಿ ಕಾಫಿ ಕುಡಿದು ಸ್ವಲ್ಪ ವಿಶ್ರಮಿಸಿ.

-ಎಂದು ಮೊಮ್ಮಗ ಶ್ರೀವತ್ಸ ನಿರೂಪಿಸಿದ ಬೀಭತ್ಸಕರವಾದ ಎಚ್ಚರಿಕೆಯ ದ್ವಾದಶ ಸೂತ್ರಗಳನ್ನು ಚಾಚೂತಪ್ಪದೆ ಪರಿಪಾಲಿಸಿ ವಾಕಿಂಗ್ ಮುಗಿಸಿ ಮನೆಗೆ ಮರಳಿದ ನನ್ನನ್ನು ಕಂಡ ಅವನು ಮೂಕವಿಸ್ಮಿತವಾಗಿ 'ಫ್ರೇಟ್, ಫ್ರೇಟ್, ಫ್ಯ್ರಾಂಡ್ ಫಾ; ನಿಮ್ಮದು ಫ್ರೇಟ್ ಅಡ್ವೆಂಛರ್'! ಎಂದು ಆಶ್ಚರ್ಯದಿಂದ ಉದ್ಗರಿಸಿದ ನಾನು ದೇವರ ಕೋಣೆಯತ್ತ ಧಾವಿಸಿದೆ. ■

---

## ಲಿಮರಿಕ್ಸ್

– ಬಿ.ಎಸ್. ರವಿಕುಮಾರ್

### ಒಂದೇ ಏಟಿಗೆ ಎರಡು ಹಣ್ಣು

ಹೀಗೆ ಹೇಳಿದನಂತೆ ಜಾನತನ ಸ್ವಿಫ್ಟ
(ಸಿದ್ಧವಾಗುತ್ತದೆ ಅವನ ಜಾಣತನ ಸ್ಪಷ್ಟ)
"ಏರುತ್ತಿರುವ ಜನಸಂಖ್ಯೆ ಹಾಗೂ ಜಗತ್ತಿನ ಹಸಿವಿನ ಸಮಸ್ಯೆ
ಎರಡಕ್ಕೂ ನರಮಾಂಸ ಭಕ್ಷಣೆಯೇ ಉತ್ರ"

# ಭ್ರಮನಿರಸನ

● ವೈ.ಎಂ. ರಘುನಂದನ್

ನಮ್ಮ ತಾತ ಮನೆಯಲ್ಲಿ ಇರುವವರೆಗೂ, ಅಜ್ಜಿ ಹಾಡುವಂತಿರಲಿಲ್ಲ. ಇದು ತಾತನ ಶಾಸನ. ಏಕೆಂದರೆ, ಮದುವೆಗೆ ಕನ್ಯೆ ನೋಡಲು ಹೋಗಿದ್ದ ಸಂದರ್ಭ. ತಾತ ಅಜ್ಜಿಯ ಅಂದರೆ, ಅಂದಿನ ಆ 'ಕನ್ಯೆಯ' ರೂಪ ಸಿರಿಗೆ ಮರುಳಾಗಿದ್ದರು. ಆದರೆ ಅವರ ಕಂಠ ಮಾಧುರ್ಯಕ್ಕೆ ಹೆದರಿ, ಅಲ್ಲಾಡಿ, ಬೆದರಿ, ಬೆಂಡಾಗಿ ಹೋಗಿ, ತಕ್ಷಣ ಜಾರಿಗೆ ಬರುವಂತೆ, ಸುಗ್ರೀವಾಜ್ಞೆ ಹೊರಡಿಸಿ ಬಿಟ್ಟಿದ್ದರಂತೆ. ವರನ ತಾಯಿ ತಂದೆಗೆ, ಕನ್ಯೆಯ ಮನೆಯ ಶ್ರೀಮಂತಿಕೆಗೆ ಮನಸೋತಿದ್ದರು.

ಎಂದಿನಂತೆ, ಅನೇಕ ಶತಮಾನಗಳಿಂದ ಬಂದಿರುವ ಪದ್ಧತಿ.... ಉಪ್ಪಿಟ್ಟು, ಕೇಸರಿಭಾತು, ಬೋಂಡ ಮತ್ತು ಕಾಫಿ ಸರಬರಾಜಾಗಿತ್ತು. ಬಸ್ಸು ಬರಲು ಇನ್ನೂ ಒಂದೆರಡು ಗಂಟೆಗಳ ಕಾಲಾವಕಾಶ ಬೇರೆ ಇತ್ತು. ಅದ್ಯಾರೋ ಮಡಿ ಹೆಂಗಸರೊಬ್ಬರು 'ಹುಡ್ಗಿಕೈಯಲ್ಲಿ ಒಂದು ಹಾಡು ಹೇಳಿಸಿ' ಅಂತ ತಂದಿಟ್ಟಿದ್ದರು.

ವರನಿಗೆ ಅನುಮಾನ. 'ಹುಡ್ಗಿಕೈಯಲ್ಲಿ ಹಾಡ್ಸಿ ಅಂತಿದ್ದಾರಲ್ಲ... ಬಾಯಲ್ಲಿ ಅಲ್ಲವೇ ಹಾಡೋದು....' ಎಂದು ತಾಯಿಯ ಕಿವಿಯಲ್ಲಿ ಪಿಸುಗುಟ್ಟಿದ್ದ. ಆಕೆಗೆ ಎಲ್ಲಿ ಶ್ರೀಮಂತರ ಸಂಬಂಧ ತಪ್ಪಿ ಹೋದಾತೋ ಎಂಬ ಚಿಂತೆ, ಆತಂಕ. ಮಗನಿಗೆ ದುರುಗುಟ್ಟಿ ನೋಡಿ, ಕಿವಿಯಲ್ಲಿ ಒದರಿದ್ದರು, 'ನಾಣಿ ತೆಪ್ಪಗಿರು. ಹುಡ್ಗಿ ಬಾಯಲ್ಲಾದರೂ ಹಾಡಲಿ, ಮೂಗಲ್ಲಾದರು ಹಾಡಲಿ.... ಒಟ್ಟಿನಲ್ಲಿ ನವರಂಧ್ರಗಳಿಂದ ಎಲ್ಲಾದರೂ ಹಾಡಲಿ. ನೀ ಸುಮ್ನಿರು' – ಎಂದು ಬಾಯಿ ಮುಚ್ಚಿಸಿದ್ದರು.

'ಏನಂತೆ ಅಳಿಯಂದ್ರ ಅನುಮಾನ' – ಅದ್ಯಾರೋ, ಕಿವಿಕೇಳದ ಮುತ್ತೈದೆ ಕೇಳಿದ್ದರು ವರನ ತಾಯಿಗೆ.

'ಏನಿಲ್ಲ ವೈನೀ.... ಹುಡ್ಗಿಗೆ ಹಾಡು ಬರೋದಾದರೆ ಹಾಡಲಿ.... ಬಲವಂತ ಬೇಡ' ಅಂತಿದ್ದಾನೆ ಎಂದು ತೇಲಿಸಿ ಬಿಟ್ಟಿದ್ದರು ವಿಷಯ.

'ಈಗ್ಲಿಂದಲೇ, ಹೆಂಡ್ತಿ ವಹಿಸಿಕೊಂಡು, ಹೋಗ್ತಿದ್ದಾರೆ ಅಳಿಯಂದ್ರು... ಒಳ್ಳೇದು'. –ಇನ್ಯಾರೋ ಹೆಂಡ್ತಿಗಂಡ ಉವಾಚ. ಅವರ ಹೆಂಡ್ತಿ 'ನೀವು ಸುಮ್ನಿರ್ತೀರಾ...' ಎಂದು ಗಂಡನ ಬಾಯಿ ಮುಚ್ಚಿಸಿ 'ಹಾಡು ಮಗಳೇ...' ಎಂದಿದ್ದರು. ಸಾರ್ವಜನಿಕರ ಒತ್ತಾಯದ ಮೇರೆಗೆ, ಕೆಮ್ಮಿ, ಕ್ಯಾಕರಿಸಿ, ಗಂಟಲು ಸರಿಪಡಿಸಿಕೊಂಡ ಕನ್ಯೆ ಆರಂಭಿಸಿದ್ದಳು–

'ಸಿಕ್ಕಿದೆಯಾ ಎಲೇ ಜೀವ, ಕುಕ್ಕಿ ಕೊಲ್ಲದೇ ಬಿಡೆನು' ಅದ್ಯಾವುದೋ ದಾಸ ಸಾಹಿತ್ಯವಂತೆ. ಹೆಂಗಸರೆಲ್ಲರೂ ತಲೆದೂಗಿದರು. ಗಂಡಸರು ಮಾಳಿಗೆ ನೋಡಿದ್ದರು. ನಮ್ಮ 'ವರ' 2 ಸಲ ಬಚ್ಚಲ ಮನೆಗೆ ಹೋಗಿ ಬಂದಿದ್ದ.

'ಒಪ್ಪಿಗೆ ಏನೋ ನಾಣಿ' ತಂದೆ ಕೇಳಿದ್ದರು ಹತ್ತಿರ ಕರೆದು ಕಿವಿಯಲ್ಲಿ!

'ಹುಡ್ಗಿ ಮತ್ತೆಂದೂ ಹಾಡದಿದ್ದರೆ ಒಪ್ಪಿಗೆ' ಎಂದಿದ್ದ ನಾಣಿ.

'ಆ ಬಗ್ಗೆ ನಾನಿದ್ದೇನೆ. ಅಪ್ಪಿ, ತಪ್ಪಿ ಸೊಸೆ ಹಾಡದಂತೆ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತೇವೆ'

– ಎಂದು ತಾಯಿ ಧೈರ್ಯ ತುಂಬಿದ್ದರು. ಮದುವೆ ಆಯ್ತು. ಊರೆಲ್ಲ ಬಂದು ಉಂಡು ಹೋದರು. ನಾಣಿ ಹೆಚ್ಚು ಮಾತುಗಾರನಲ್ಲ. ಏನಿದ್ದರೂ ಕೃತಿಯಲ್ಲಿ ಮಾಡಿ ತೋರುವ ಹುಡ್ಗ. ಹಾಗಾಗಿ 15 ವರ್ಷದಲ್ಲಿ, 16 ಮಕ್ಕಳ ತಂದೆ ಆಗಿದ್ದ! ಇದು ಆಗಿನ ಭಾರತದ ಜನಸಂಖ್ಯಾ ಅಭಿವೃದ್ಧಿಗಾಗಿ, ತಾತ ಅಜ್ಜಿಯ ಕೊಡುಗೆ.

ಕಾಲಚಕ್ರ ಬದಲಾಗಿತ್ತು. ಅಂದಿನ ಕನ್ಯೆ, ವರ ನಾಣಿ, ಇಂದು ಅಜ್ಜ, ಅಜ್ಜಿ ಆಗಿದ್ದಾರೆ. ಅವರ ತಂದೆ ತಾಯಿ, ಅತ್ತೆ ಮಾವ ಫೋಟೋದಲ್ಲಿ ಹೂವು ಏರಿಸಿಕೊಂಡಿದ್ದಾರೆ. ನಾಣಿಗೆ ಈಗ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೂ ಇದ್ದಾರೆ. ತಾತ ಸಂಜೆ ಸುತ್ತಾಡಲು ಹೋದಾಗ, ಮೊಮ್ಮಕ್ಕಳು ಅಜ್ಜಿ ಮುಂದೆ ಸೇರಿದರು. ಒಂದು ಹಾಡು ಹೇಳಿ ಅಜ್ಜಮ್ಮ ಎಂದು ಪೀಡಿಸಲಾರಂಭಿಸಿದ್ದರು.

'ಅಯ್ಯೋ ಹಾಡು, ಹಸೆ ನಂಗೆ ಬರೋಲ್ಲ ಮಕ್ಕಳೆ, ಅಜ್ಜ ನಾನು ಹಾಡಬಾರದೆಂದು ತಾಕೀತು ಮಾಡಿದ್ದಾರೆ' – ಎಂದಿದ್ದರು ಅಜ್ಜಮ್ಮ.

'ತಾತ ವಾಕಿಂಗ್ ಹೋಗಿದ್ದಾರೆ. ಡ್ಯಾಡಿ, ಮಮ್ಮಿ, ಅಂಕಲ್, ಅಮ್ಮಮ್ಮ ಯಾರೂ ಇಲ್ಲ ಅಜ್ಜಮ್ಮ' – ಮಕ್ಕಳ ಹಠ.

ಸಂಧ್ಯಾ ರಾಗ ಸಿನಿಮಾದಲ್ಲಿ ಪೂರ್ವಿಕಲ್ಯಾಣಿ ರಾಗ ಹಾಡೋಲ್ಲ ಅಂತ ಲಕ್ಷ್ಮಣ ರಾಯರು ಹಠ ಹಿಡಿದಂತೆ, ಅಜ್ಜಿ ಹಾಡಲ್ಲ ಅಂದರು.

'ನಿಮ್ಮನ್ನೇನು ಸಂಗೀತ ಕಛೇರಿ ಮಾಡಿ ಅಂತಕೇಳಿದ್ವಾ ಅಜ್ಜಮ್ಮ. ತಾತನ ಜೊತೆ, ಮಾಯಾಬಜಾರ್ ಸಿನಿಮಾಗೆ ಹೋಗಿದ್ದರಂತೆ. ಅದರ ಕಥೆ ತಾತ ಎಲ್ಲ ಹೇಳಿದ್ರು. ವಿವಾಹ ಭೋಜನವಿದು ಎಂಬುವ ಹಾಡು ಅಜ್ಜಿ ಹಾಡಿದ್ರೆ ಚೆನ್ನಾಗಿರತ್ತೆ ಅಂತ ತಾತನೇ ಹೇಳಿದ್ದಾರೆ. ಮನೇಲಿ ಯಾರೂ ಇಲ್ಲ ಅಜ್ಜಮ್ಮ ಪ್ಲೀಸ್, ಪ್ಲೀಸ್, ಪ್ಲೀಸ್ ಹಾಡಿ' – ಅಂತ ಮಕ್ಕಳ ಹಠ ಜೋರಾಯ್ತು.

ಅಜ್ಜಿ ಧೈರ್ಯ ಮಾಡಿ ಹಾಡಲಾರಂಭಿಸಿದರು, ಕಣ್ಣುಮುಚ್ಚಿ –

'ವಿವಾಹ ಭೋಜನ ವಿದು, ವಿಚಿತ್ರ ಭಕ್ಷ್ಯಗಳಿವು ಭೀಗರಿಗೆ ಔತಣವಿದು, ಇವೆಲ್ಲ ನನಗೆ ಸಾಕು... ಅಹಹ್ಹ ಅಹ್ಹಹಾ.....' ಅಜ್ಜಿ ಹಾಡು ಮುಗಿಸಿ ಕಣ್ಣು ಬಿಟ್ಟು ನೋಡಿದರೆ, ಅಲ್ಲಿ ಪೆಚ್ಚು ಮೋರೆ ಹಾಕಿಕೊಂಡು, 'ವೆಂಕು' ಮಾತ್ರ ಕುಳಿತಿದ. ಬೇರೆ ಎಲ್ಲಾ ಮಕ್ಕಳೂ ನಾಪತ್ತೆ.

'ಇದ್ಯಾಕೋ ವೆಂಕು, ಮಂಕಾಗಿದ್ದಿ, ಅವರೆಲ್ಲ ಎಲ್ಲಿ? ಹಾಡು ಚೆನ್ನಾಗಿರಲಿಲ್ಲವೇನೋ....' ವಿಚಾರಿಸಿದ್ದರು ಅಜ್ಜಮ್ಮ.

'ಅಜ್ಜಮ್ಮ ಅವರೆಲ್ಲರೂ ನಿನ್ನ ಹಾಡು ಕೇಳಲಲ್ಲ ಬಂದದ್ದು. ನಿನ್ನ ಬಾಯಿನ ಮೇಲು ಭಾಗದಲ್ಲಿ ಎಷ್ಟು ಹಲ್ಲಿದೆ ಅಂತ ಏಣಿಸಲು ಬಂದದ್ದು. ಅವರೆಲ್ಲರೂ 2 ಇದೆ, 3 ಇದೆ ಅಂತ ಬೆಟ್ಟಿಂಗ್ ಕಟ್ಟಿದ್ದರು. ನಾನು ನಾಲ್ಕು ಇದೆ, ಅಂತ 2 ಪೆನ್ಸಿಲ್ ಬೆಟ್ ಕಟ್ಟಿದ್ದೆ... ಸೋತೆ. ನೀವು ಹಾಡುವಾಗ ಹಲ್ಲು ಏಣಿಸಿದೆವು. ಎರಡೇ ಇರೋದು. ಉಷಾ, ಗೀತ ಗೆದ್ದರು. ಚಂದ್ರ, ಮುರಳಿ, ಸೋಮ, ನಾನು ಎಲ್ಲರೂ ಸೋತೆವು' ಎಂದು ನಯ ವಿನಯದಿಂದ ವರದಿ ಒಪ್ಪಿಸಿದ್ದ ವೆಂಕು. ಅಜ್ಜಿಗೆ ಭ್ರಮ ನಿರಸನವಾಯ್ತು. ವಾಕಿಂಗ್ ಮುಗಿಸಿ ಹಿಂದಿರುಗಿ ಬಂದಿದ್ದ

ಅಜ್ಜ 'ಯಾರೋ ನರಳಾಡುತ್ತಿದ್ದಂತೆ ಶಬ್ದ ಕೇಳಿಸಿತು. ಹುಷಾರಾಗಿದ್ದಿ ತಾನೇ' - ಪ್ರೀತಿಯಿಂದ ವಿಚಾರಿಸಿದ್ದರು- ಅರ್ಧಾಂಗಿಯನ್ನ.

-★-

ನಾವೆಲ್ಲರೂ ಒಂದಲ್ಲ ಒಂದು ರೀತಿ ಭ್ರಮ ನಿರಸನಕ್ಕೆ ಬಲಿ ಆಗಿರುತ್ತೇವೆ. ಶ್ರೇಷ್ಠ ಸ್ವಾಮಿಗಳು, ನಿತ್ಯಾನಂದರು ಅಂತ ಶಿಷ್ಯ ಕೋಟಿ ಅವರ ಹಿಂದೆ ಹೋಗಿರುತ್ತಾರೆ.

ದೇಶ ಬಿಟ್ಟು ಹೋದರು, ನೂರಾರು ದೂರುದಾಖಲಾದಾಗ ಭಕ್ತರು ನಿರಾಶರಾಗಿ, ಭ್ರಮೆ ನಿರಸನಕ್ಕೆ ಬಲಿಯಾಗಿರುತ್ತಾರೆ. ಸೂಪರ್ ಸಿನಿಮಾ ತೆಗೀತೀನಿ ಅಂತ ಹೋಗಿ ಪಾಪರ್ ಆದಂತಹ ನಿರ್ಮಾಪಕರನ್ನ ನೋಡಿದ್ದೇವೆ. ಪ್ರೀತಿ, ಲೀವ್ ಟುಗೆದರ್ ರಿಲೇಷನ್, ಅಂತ ಗಂಡು ಹೆಣ್ಣು ಸೇರುತ್ತಾರೆ. ಆರು ತಿಂಗಳಲ್ಲಿ ಬೇರೆ ಆಗುತ್ತಾರೆ ಭ್ರಮನಿರಸನದಿಂದ. ಮದುವೆ ಆದರೆ ಸುಖ ಸನ್ಯಾಸ ಸುಖ, ಬ್ರಹ್ಮಚರ್ಯ ಸುಖ ಅಂತ ಹೋಗಿ ಕಡೆಗೆ ಅದರಿಂದ ಭ್ರಮನಿರಸನ ಆಯ್ತು ಎನ್ನುವವರೇ ಹೆಚ್ಚಾಗುತ್ತಿದ್ದಾರೆ. ಯಾವುದೇ ವೃತ್ತಿರಂಗದಲ್ಲಿ ವಿಚಾರಿಸಿ. ಐಟಿ.ಬಿ.ಟಿ. ಡಿ.ಡಿಟಿ! ಸಾಫ್ಟವೇರ್, ಹಾರ್ಡವೇರ್, ಡಾಕ್ಟರ್, ಟೀಚರ್ ಎಲ್ಲೆಲ್ಲೂ ಭ್ರಮನಿರಸನದ ಉದಾಹರಣೆ. ಆ ಪಾರ್ಟಿ, ಈ ಪಾರ್ಟಿ ಅಂತ ಯಾರೇ ರಾಜ್ಯಾಡಳಿತಕ್ಕೆ ಬಂದರೂ, ಒಂದಿಲ್ಲ ಒಂದು ಕಾರಣದಿಂದಾಗಿ ಭ್ರಮನಿರಸನವಾಗಿರುತ್ತದೆ. ಮದುವೆಗೆ ಮುಂಚೆ ಹೀರೋ ಅಂತ ಕಂಡಿದ್ದ ಹೆಣ್ಣಿಗೆ, ಅದೇ ಗಂಡು ನಂತರ, ಜೀರೋ ಆಗಿಕಾಣುತ್ತಾನೆ.

ನಮ್ಮ ರಸ್ತೆ ಚೆಂದ್ರಿ ಮಾರ್ಡನ್ ಹುಡ್ಗಿ. ಅಂತೂ ಒಳ್ಳೆ ಹುಡ್ಗನ್ನೇ ಹುಡ್ಕಿ ಮದುವೆ ಆಯ್ತು. ಹನಿಮೂನ್ ಮುಗಿಸಿ ಬಂದರು. ಬಾಲ್ಯ ಗೆಳತಿ, ಸಖೀರು ಸೇರಿ 'ಚೆಂದ್ರಿ' ಹೇಗಿತ್ತು ಹನಿಮೂನ್ ಅನುಭವ ಅಂತ ಕೇಳಿದ್ದರು. 'ಅಯ್ಯೋ ಬಿಡ್ರೆ ಇದ್ಯಾವ ಅನುಭವ, ಆಗ ಪ್ರತಿವಾರ ನೀನು, ನಾನು, ವಿಜಿ ಎಲ್ಲರೂ ಪಿಕ್‌ನಿಕ್‌ಗೆ ಬೈಕಿನಲ್ಲಿ ಹೋಗ್ತಿದ್ವಲ್ಲ ಅದೇ ರಾಜ, ಗೋಪಿ, ದೀಪು ಜೊತೆ. ವಾರಕ್ಕೊಬ್ಬೊಬ್ಬರ ಜೋಡಿ, ಎಂತಾ ಮಜ ಇರ್ತಿತ್ತು. ಅದರ ಮುಂದೆ ಇದ್ಯಾವ ಮಧುಚಂದ್ರ ಎಂದಿದ್ದಳು. ಅವಳಿಗೂ ಪಾಪ ಭ್ರಮನಿರಸನ, ಕೇಳಿಸಿಕೊಂಡಿದ್ದ ಗಂಡ ನಾಪತ್ತೆ. ಅವನಿಗೂ ಒಂದು ಥರಹ ಭ್ರಮನಿರಸನವಾಯ್ತಂತೆ. ಭ್ರಮಾ ಲೋಕದಿಂದ ವಾಸ್ತವಕ್ಕೆ ಬರಬೇಕಿದೆ. ಮಾಯಾಮೃಗ, ಹಗಲು ಗನಸು ಬಿಟ್ಟು, ಬದುಕು ರೂಢಿಸಿಕೊಳ್ಳಬೇಕಾಗಿದೆ.

ಲೇಖನ ಮುಗಿಸುವ ಮುನ್ನ....

25 ವರ್ಷ ಕಾಲ ನಮ್ಮ ಕನ್ನಡ ನಗೆಲೋಕದ ನಕ್ಷತ್ರಗಳಲ್ಲಿ ಒಬ್ಬಳಾಗಿ ಮಿನುಗಿದ್ದವಳು 'ಕೊರವಂಜಿ'. ಕಾಡಿಗೆ ಹೋಗಿ ಭ್ರಮನಿರಸನವಾಯ್ತು. ಈಗ ಅವತಾರ ತಾಳಿ 'ಅಪರಂಜಿ'ಯಾಗಿ ರಂಜಿಸುತ್ತಿದ್ದಾಳೆ, ಕನ್ನಡ ಸಾರಸ್ವತ ಲೋಕದಲ್ಲಿ. ನಾವು ಅಪರಂಜಿಯನ್ನ ಸೂಕ್ತ ರೀತಿ ಪೋಷಿಸಿ, ಬೆಳೆಸಿ, ಉಳಿಸಿಕೊಳ್ಳಲು ಯತ್ನಿಸದಿದ್ದರೆ, ನಗೆ ಲೋಕಕ್ಕೆ, ಅಪರಂಜಿಯೂ ಭ್ರಮನಿರಸನ ಮಾಡಿ, ಕೊರವಂಜಿಯಂತೆ, ಕಾಡಿಗೆ ಹಿಂದಿರುಗಿ ಹೋಗಬಹುದು. ಹಾಗಾಗದಿರಲಿ. ಓದುಗರು, ಲೇಖಕರು, ಸಾಹಿತ್ಯ ಅಭಿಮಾನಿಗಳೆಲ್ಲರೂ ಕೈ ಜೋಡಿಸಿ, ಸಹಕರಿಸಿ, ಅಪರಂಜಿಯನ್ನ ಉಳಿಸಿ, ಬೆಳೆಸಲು ಈ ಹೊಸ ವರ್ಷದ 2020ರಲ್ಲಿ ನಿರಂತರ ಪ್ರಯತ್ನಿಸೋಣ. ಏನಂತೀರಿ? ■

● ದಂನಆ

- ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡಿದಿರಾ? ಅಷ್ಟೇ ಸಾಲದು. ಒಳ್ಳೇ ಕೆಲಸ ಸಹ ಮಾಡಬೇಕು.
- ನಿಮ್ಮ ಸುಖದ ಬೀಗದ ಕೈಯನ್ನು ಇನ್ನೊಬ್ಬರ ಕಿಸೆಯಲ್ಲಿ ಇಡಬೇಡಿ.
- ರಬ್ಬರ್ ಬ್ಯಾಂಡ್ ಕಳ್ಳಿ ಅಂದರೆ ಜಡೆ ಮುಟ್ಟಿ ನೋಡಿಕೊಂಡಳಂತೆ.
- ನಿಮಗೆ ಕನ್ನಡ ಲಾಂಗ್ವೇಜ್, ಹಿಂದಿ ಲಾಂಗ್ವೇಜ್, ತೆಲುಗು ಲಾಂಗ್ವೇಜ್ ಗೊತ್ತಿರಬಹುದು. ಆದರೆ ಬೆಸ್ಟ್ ಲಾಂಗ್ವೇಜ್ ಎಂದರೆ ಬಾಡಿ ಲಾಂಗ್ವೇಜ್.
- ಐ ಡೋಂಟ್ ಹ್ಯಾವ್ ವರ್ಡ್ಸ್ ಟು ಡಿಸ್ ಕ್ರೈಬ್ ಹೌ ಮಚ್ ಐ ಡೋಂಟ್ ಕೇರ್ ಫಾರ್ ಯು.
- ಕಳ್ಳನಿಂದ ಯಾರು ಕದಿಯುತ್ತಾರೋ ಅವರು ಅಭಿನಂದನಾರ್ಹರು.
- ದೇವರು ನಗರಗಳನ್ನು ಸೃಷ್ಟಿಸಲಿಲ್ಲ. ಸೃಷ್ಟಿಸಿದ್ದು ಹಳ್ಳಿಗಾಡನ್ನು. ನಗರಗಳನ್ನು ಸೃಷ್ಟಿಸಿದ್ದು ಮನುಷ್ಯ.
- ನಿಮ್ಮೊಳಗೆ ನಡೆಯುವ ಆಂತರಿಕ ಘರ್ಷಣೆಗಳು ನೀವು ಯಾರೆಂದು ಸಾಬೀತು ಮಾಡುತ್ತದೆ.
- ಯು ಆರ್ ಮೋರ್ ದ್ಯಾನ್ ವಾಟ್ ಯು ನೊ.
- ಮೇಲೆ ಮೇಲೆ ಏರುತ್ತಿರುವ ಬಲೂನ್‌ನಲ್ಲಿ ಇಬ್ಬರಿದ್ದರು. ಒಬ್ಬನಿಗೆ ಭೂಮಿ ದೂರ ದೂರ ಹೋದಂತೆ ಕಂಡರೆ ಇನ್ನೊಬ್ಬನಿಗೆ ನಕ್ಷತ್ರಗಳು ಹತ್ತಿರ ಬರುತ್ತಿರುವಂತೆ ಕಂಡಿತು.
- ಗಾವಸ್ಕರ್ ಉವಾಚ: ಕ್ರಿಕೆಟ್‌ನಿಂದಲೇ ನಾನು ಖ್ಯಾತನಾಗಿದ್ದು. ಇಲ್ಲದಿದ್ದರೆ ನಾನು ಬರೇ 'ನಿಲ್' ಆಗುತ್ತಿದ್ದೆ. ಸುನಿಲ್ ಅಲ್ಲ.
- ನಮಗೆ ಮುಂದೆ ಕಣ್ಣಿರಲು ಕಾರಣ? ಮುಂದೆ ನೋಡಿ ಎಂದು ಸೂಚಿಸಲು. ಗತಕಾಲವನ್ನಲ್ಲ.
- ನಿಮ್ಮನ್ನು ಎಲ್ಲರೂ ಇಷ್ಟ ಪಡುತ್ತಾರೆ ಎಂದರೆ ನೀವು ಬದುಕಿನಲ್ಲಿ ಹಲವಾರು ಬಾರಿ ರಾಜಿ ಮಾಡಿಕೊಂಡಿದ್ದೀರಿ ಎಂದರ್ಥ. ನೀವು ಎಲ್ಲರೊಂದಿಗೆ ಖುಷಿಯಾಗಿದ್ದೀರಿ ಎಂದರೆ ನೀವು ಇತರರ ತಪ್ಪುಗಳನ್ನು ಅಲಕ್ಷಿಸಿದ್ದೀರಿ ಎಂದರ್ಥ.
- ಮದುವೆಯಲ್ಲಿ ಒಬ್ಬ ಯಾವಾಗಲೂ ಸರಿ. ಇನ್ನೊಬ್ಬ ಗಂಡ.
- ನ್ಯೂ ಮಂತ್ರ: ನಾಟ್ ಜಸ್ಟ್ ಪ್ರೂವಿಂಗ್. ಬಟ್ ಇಂಪ್ರೂವಿಂಗ್.
- ಹೌ ಫನ್ನಿ ಆರ್ ಪಾಲಿಟೀಷಿಯನ್ಸ್? ದೆ ಆರ್ ಜ಼ೀರೋ ಪರ್ಸೆಂಟ್ ಫನ್ನಿ ವೆನ್ ದೆ ಟ್ರೈ ಟು ಬಿ ಫನ್ನಿ; ಬಟ್ ವೆನ್ ದೆ ಆರ್ ನಾಟ್ ಬೀಯಿಂಗ್ ಫನ್ನಿ ದೆ ಆರ್ 100 ಪರ್ಸೆಂಟ್ ಫನ್ನಿ.
- ಪರಿಸರ ಒಂದು ಅನಾಥ ಶಿಶು. ■

# ಗುಂಡನ ಜಿಜ್ಞಾಸೆ

● ಲತಾ ಹೆಗಡೆ

ಪಕ್ಕದ ಮನೆ ಪದ್ದು ಜೀವನದಲ್ಲಿ ಯಾರಿರಲಿ ಬಿಡಲಿ ಆ ಎರಡು ಪೆಟ್ಟಿಗೆಗಳಿಗೆ ಮಾತ್ರ ಅತ್ಯಂತ ಪ್ರಮುಖ ಪಾತ್ರವಿದೆ. ಅವು ಮೂರ್ಖರ ಪೆಟ್ಟಿಗೆ ಮತ್ತು ತಂಗಳು ಪೆಟ್ಟಿಗೆಗಳು! ಇವೆರಡಿದ್ದರೆ ಸಾಕೇ ಸಾಕು ಬೇಸರವೆನ್ನುವ ಮಾತೇ ಅವಳ ಸನಿಹವೂ ಸುಳಿಯದು ... ಒಂದಷ್ಟು ಬೇಯಿಸಿ ತಂಗಳು ಪೆಟ್ಟಿಗೆಯಲ್ಲಿ ತುರುಕಿಟ್ಟಳೆಂದರೆ ಇನ್ನವಳು ನಿರಾಳ. ಮಾಡಿದ್ದು ಕನಿಷ್ಟ ಮೂರು ದಿನಕ್ಕಾಗುತ್ತವೆ. ಬೆಳಗ್ಗೆಯ ತಿಂಡಿಗೆ ಸದಾ ಸರ್ವದಾ ಬ್ರೆಡ್ ಜಾಮ್; ಕುಡಿಯಲು ಮಕ್ಕಳಿಗಾದರೆ ಬೂಸ್ಟೋ ಬೋರ್ನ್ವಿಟಾನೋ ಕೊಟ್ರೆ ಗಂಡಂಗೆ ಕೇಟಿ ಚಹಾ.

ಇದು ಇತ್ತೀಚಿನ ಒಂದೆರಡು ವರ್ಷಗಳ ಬೆಳವಣಿಗೆ. ಮೊದಲಾದ್ರೆ ದೋಸೆ, ಇಡ್ಲಿ, ಪಡ್ಡು, ಅಕ್ಕಿರೊಟ್ಟಿ, ಹಬೆಗಡುಬು ಅಂತೆಲ್ಲಾ ರುಚಿರುಚಿಯಾಗಿ ಮಾಡಿ ಹಾಕೋಳು ... ಈಗ್ ಅದೇನ್ ಮೆಟ್ಟುಕೊಂಡಿದೆಯೋ... ಎಲ್ಲಾ ನನ್ ಕರ್ಮ. ನಾವು ಚಿಕ್ಕವರಿದ್ದಾಗ ಜ್ವರ ಬಂದಾಗಷ್ಟೇ ಬ್ರೆಡ್ಡು ಮನೆ ಹೊಕ್ಕಿರೋದು, ಬೇರೆ ವೇಳೇಲಿ ಅದನ್ನು ಮೂಸಿ ನೋಡೋರೂ ಇರ್ತಿರಲಿಲ್ಲ. ಇವಳು ಹಿಂದಿ ಸೀರಿಯಲ್‌ಗಳನ್ನೂ ನೋಡೋಕೆ ಪ್ರಾರಂಭಿಸಿದಾಗಿನಿಂದಲೂ ಮನೆಯಲ್ಲಿ ಈ ದುರವಸ್ಥೆ ಮೆಟ್ಟುಕೊಂಡಿದೆ ... ಧಾರಾವಾಹಿಗಳನ್ನ ಪ್ರಪಂಚ ಮಾಡಿಕೊಂಡಿರೋದ್ರಿಂದ ಆ ಉತ್ತರದವರೇ ಇವಳಿಗೆ ಆದರ್ಶಪ್ರಾಯರಾಗಿರೋ ಹಾಗಿದೆ . ಹಾಗಾಗಿ ಅವರನ್ನ ಅನುಕರಿಸುವುದೂ ಜಾಸ್ತಿಯಾಗಿದೆ ... ಇವಳ ಹುಚ್ಚಿಗೆ ಬಡ್ಕೋಬೇಕು ...' ಇದು ಪೆದ್ದುಗುಂಡನೆಂದೇ ಹೆಸರುವಾಸಿಯಾದ ನಮ್ಮ ಪದ್ದು ಗಂಡ ಗುಂಡನ ಒಳತೋಟಿ.

ಸಾಮಾನ್ಯಕ್ಕೆ ಮರುಳಾಗದಿರೋ ಪದ್ದು ಕೂಡ ಮೋಡಿಗೊಳಗಾಗಿದ್ದಾಳೆಂದರೆ ಆ ಸೀರಿಯಲ್ ಗಳಲ್ಲಿ ಏನೋ ವಿಶೇಷತೆ ಇರಲೇಬೇಕು ... ರಜಾ ದಿನದಂದು ಪೆಟ್ಟಿಗೆ ಮುಂದೆ ಕೂತೇಬಿಟ್ಟ ಗುಂಡ. 'ಬೇಟಾ, ಖಾನಾ ಖಾಕೆ ಜಾ ...' ರಾಗ ಎಳೆಯೋ ಪಾತ್ರಧಾರಿಯ ಅಲಂಕಾರ ಅಂದ ಚೆಂದ ನೋಡಿ 'ಬೇಟಾ' ಹತ್ತು ವರ್ಷದ ಒಳಗಿನದ್ದಿರಬೇಕು ಎಂದುಕೊಂಡಿದ್ದ. ನೋಡನೋಡುತ್ತಿದ್ದಂತೆ ಮೆಟ್ಟಲಿಳಿದು ರಭಸದಿಂದ ಬಂದದ್ದು ಸುಮಾರು ಇಪ್ಪತ್ತೈದು ವರ್ಷದ ಸಿಕ್ಸ್ ಪ್ಯಾಕ್ ಪಾತ್ರಧಾರಿ! ಅಂದರೆ ಈ ಬಲಿತ ಮಗನ ತಾಯಿ ಮಧ್ಯ ವಯಸ್ಕಳೇ? ಢಾಳಾಗಿ ಬಳಿದ ಮೇಕಪ್ಪು, ಕಪ್ಪು ದಟ್ಟ ಕೇಶರಾಶಿಯಿಂದಾಗಿ ನಮ್ಮ ಗುಂಡ ಮೋಸಹೋಗಿದ್ದ. ಆ ಧಾರಾವಾಹಿಯಲ್ಲಿರುವ ಹೆಂಗಸರೆಲ್ಲಾ ಬೆಳ್ಬೆಳಗ್ಗೆಯೇ ಮುಖಕ್ಕೆ ಮೂರಿಂಚು ಬಣ್ಣ, ತುಟಿಗೆ ಎರಡಿಂಚು ಲಿಪ್ಸ್ಟಿಕ್ಕು; ಕಣ್ಣುಗಳಿಗೆ ಒಂದಿಂಚು ಕಾಡಿಗೆ; ಮುಖದ ಎರಡೂ ಬದಿಯಲ್ಲೂ ಓಲಾಡುತ್ತಿರುವ ಕೂದಲ ಗುಂಗುರು ಸುರುಳಿ; ಶಿರದ ಮೇಲೆ ನಾಲ್ಕಿಂಚಿನ ಶಿಖರ ಅಥವಾ ತಲೆಹಿಂದೆ ಮರಿತಲೆಯಂತಿರುವ ಕೇಶವಿನ್ಯಾಸದ ಅಗಾಧ ವಿಗ್ಗು ಧರಿಸಿ ಎಲ್ಲೆಲ್ಲೋ ಕಸೆಗಳಿಂದ ಬಿಗಿಯಲ್ಪಟ್ಟ ಡಿಸೈನರ್ ಬ್ಲೌಸ್, ಝಗಮಗಿಸುವ ಸೀರೆಯುಟ್ಟು ಒಂದೆರಡು ಕೆಜಿ ಗಿಲೀಟನ್ನು ಧರಿಸಿ ಪಟ್ಟಾಗಿ ಕೂತು ಹರಟುತ್ತಾ ಆದೇಶಿಸುವ ರೀತಿಗೆ ಬೆರಗಾದ ಗುಂಡನ ಬಾಯಿ ಇಷ್ಟಗಲ ತೆರೆದುಕೊಂಡಿತ್ತು ...

ಅತ್ಯಾಧುನಿಕ ವೈಭವೋಪೇತ ಮನೆಯ ಸೆಟಪ್ಪು ... ಸರಿ, ಇವರು ತಿನ್ನೋದೇನಪ್ಪ ನೋಡೋಣ ಅಂದ್ರೆ ಚೆಂದದ ಪ್ಲೇಟಲ್ಲಿ ಅದೇ ಕಿತ್ತೋಗಿರೋ ಒಣಕಾಷ್ಠ ಬ್ರೆಡ್ಡು ಜ್ಯಾಮು ...! ದೊಡ್ಡ ಡೈನಿಂಗ್ ಟೇಬಲ್ ಸುತ್ತಲೂ ಅಲಂಕಾರಿಕ ಗೊಂಬೆಗಳಂತೆ ನಿಂತಿರುವ ಮತ್ತು ಕುಳಿತಿರುವ ಲಲನೆಯರ ವಸ್ತ್ರ, ಕೇಶವಿನ್ಯಾಸ ಬೇರೆಯಷ್ಟೆ. ಚೂಡಿದಾರ್ ಅಥವಾ ಪ್ಯಾಂಟ್ ಬಿಗಿ ಟೀ ಶರ್ಟ್ ಅಥವಾ ಕಣ್ಣು ಕೋರೈಸುವ ಸೀರೆಯುಟ್ಟು ಮತ್ತದೇ ಮೇಕಪ್ ಮುಖದ ಕೆಲವರದ್ದು ಮಾತ್ರ ಬಿಚ್ಚುಗೂದಲಿನ ಕೇಶವಿನ್ಯಾಸ ! ಸಮಾನವಯಸ್ಕರಂತೆ ಕಾಣುವ ಇವರಲ್ಲಿ ಅತ್ತೆ, ಅಜ್ಜಿ, ತಾಯಿ, ಮಗಳು, ಸೊಸೆ, ತಂಗಿ, ನಾದಿನಿ ಯಾರು ಎಂದು ಕಂಡುಹಿಡಿಯಲು ಸಾಧ್ಯವಾಗದೆ ನಮ್ಮ ಪಾಪದ ಗುಂಡ ತೆರೆದ ಬಾಯನ್ನು ಇನ್ನಷ್ಟು ಅಗಲವಾಗಿಸಿದ್ದ. ಅವಸರದಲ್ಲಿ ಓಡುನಡಿಗೆಯಲ್ಲೇ ಬಂದು ಸ್ಟೈಲಾಗಿ ಒಂಚೂರು ಮುರಿದು ಬಾಯಿಗೆ ಹಾಕಿ 'ಬೈ...' ಕೈಯೆತ್ತಿ ಜೈಕಾರ ಹಾಕಿ ಹೋಗುವ ಧಾವಂತಕ್ಕೆ' ಇಷ್ಟೆಲ್ಲಾ ಅಲಂಕರಿಸಿಕೊಳ್ಳುವವರಿಗೆ ಎರಡು ತುಂಡು ಬ್ರೆಡ್ಡಿನ ಹಾಳೆ ತಿನ್ನೋಕೆ ಪುರುಸೊತ್ತಿರೋಲ್ವೇ ...' ಗುಂಡನದ್ದು ಗೊಂದಲಮಯ ಸ್ಥಿತಿ. ಗಂಡು ಪಾತ್ರಧಾರಿಗಳೂ ಅಷ್ಟೇ ... ಜಿಮ್ಮಿಗೆ ಹೋಗಿ ಪೈಲ್ವಾನ್‌ರಂತೆ ಮೈ ಬೆಳೆಸಿ ಹುಂಜದ ಜುಟ್ಟು, ಕೋಳಿ ಪುಕ್ಕ, ಕಪ್ಪು ಕೂದಲಿನ ನಡುನಡುವೆ ಒಣ ಹುಲ್ಲಿನ ಬಣ್ಣದ ಕೂದಲು ... ತಲೇಲಿ ಹೇನುಗಳಿಗೆ ಓಡಾಡೋಕೆ ಸರಾಗವಾಗಲಿ ಅಂತ ತಲೆತುಂಬಾ ನೇರ ಬೈತಲೆಗಳ ವಿಚಿತ್ರ ಕೇಶವಿನ್ಯಾಸ ...ಒಂದು ಕಿವೀಲಿ ಜೋತಾಡೋ ಲೋಲಾಕು ! ತುಂಡು ಬ್ರೆಡ್ ತಿನ್ನೋ ಶಾಸ್ತ್ರ ಮಾಡಿ ಓಡೋದನ್ನ ಬಾಯಿ ಬಿಟ್ಕೊಂಡು ನೋಡೋ ರೀತಿಗೆ ಬಿಪಿ ಏರಿಸ್ಕೊಂಡ ಪದ್ದು ಗಂಡನ ತಲೆಯ ಮೇಲೊಂದು ಮೊಟಕಿ ಬಾಯಿ ಮುಚ್ಚಿಸಿದ್ದಳು.

ಬೆಳಗ್ಗಿನ ತಿನಿಸು ಮತ್ತವಳ ವೇಷಭೂಷಣದಲ್ಲಿ ಈಗಾಗಲೇ ಗಮನಾರ್ಹ ಬದಲಾವಣೆ ಆಗಿದೆ; ಇನ್ನು ಅವರಂತೆ ಹೈಹೀಲ್ಡ್ ಚಪ್ಪಲ್, ಮೂರಿಂಚು ಮೇಕಪ್ ಮಾಡಿಕೊಂಡು ತಿರುಗೋದು ಬಾಕಿ ಇದೆಯಷ್ಟೆ ... ಅದ್ಯಾವಾಗ ಆವಾಹನೆಯಾಗುತ್ತೋ ಏನೋ ... ಗೊಣಗುತ್ತಲೇ ಗಂಡ ಅನ್ನಿಸಿಕೊಂಡಿರೋ ಪ್ರಾಣಿ ಗುಂಡ ಬ್ರೆಡ್ಡು ನುಂಗೋಕ್ಕಾಗದೇ ಆರಿದ ಚಹಾದ ಸಹಾಯದಿಂದ ಗಂಟಲೊಳಗೆ ತಳ್ಳಲು ವ್ಯರ್ಥ ಯತ್ನ ನಡೆಸಿದ.

ರಜಾದಿನವಾದ್ದರಿಂದ ದಿನಪತ್ರಿಕೆ, ಜಂಗಮವಾಣಿಯಲ್ಲೇ ತಲೆ ತೂರಿಸಿದವನಿಗೆ ತೂಕಡಿಕೆ ಆವರಿಸಿತ್ತು. ಎಚ್ಚರವಾದಾಗ ಮಧ್ಯಾಹ್ನ ಒಂದು ಗಂಟೆ. ಮನೆಯ ಅವಸ್ಥೆ ಬೆಳಗಿನಂತೇ ಇತ್ತು. 'ವೀಕೆಂಡ್ ವಿತ್ ರಮೇಶ್' ಮರುವೀಕ್ಷಣೆಯಲ್ಲಿ ಮಗ್ನಳಾಗಿ ಚಿಪ್ಸ್ ಕುರುಕುತ್ತಾ ಕುಳಿತ ಪದ್ದು ಕಂಡಳು. "ಲೇ ...ಊಟಕ್ಕೆ ಏನ್ ಸ್ಪೆಷಲ್ ಮಾಡಿದ್ದೀಯೇ?" ಆಸೆಯಿಂದ ಕೇಳಿದ್ದ.

" ಮೊನ್ನೆ ಮಾಡಿದ್ ಕೂಟು ತುಂಬಾ ಇದೆ. ನಿನ್ನೆ ರಾತ್ರಿ ಮಾಡಿದ ಅನ್ನ ಕೂಡ ಹಾಗೇ ಇದೆ ಕಣ್ರೀ ...ಬಿಸಿ ಮಾಡಿ ಕೊಡ್ತೀನಿ ತಾಳಿ, ನಟಿ ಪ್ರೇಮಂದು ವೈಯುಕ್ತಿಕ ಜೀವನ ಇಂಟರೆಸ್ಟಿಂಗ್ ಆಗಿದೆ... ನಿನ್ನೆ ರಾತ್ರಿ ಸರಿಯಾಗಿ ಕೇಳಿಸಿರಲಿಲ್ಲ, ಮುಗೀಲಿ ..."

ಬೆಳಗ್ಗೆ ತಿಂದ ಬ್ರೆಡ್ ಕರಗಿ ಹೊಟ್ಟೆ ಚುರುಗುಡುತ್ತಿತ್ತು. ಗುಂಡ


ತಡಮಾಡಲಿಲ್ಲ ... ಕೈಗೆ ಸಿಕ್ಕ ಶರ್ಟು ಪ್ಯಾಂಟು ಸಿಕ್ಕಿಸಿಕೊಂಡು ಮೊಬೈಲ್ನಲ್ಲಿ ಮಾತಾಡೋ ಹಾಗೆ ನಟಿಸಿ "ಲೇ, ಶಂಕ್ರು ಫೋನ್ ಮಾಡಿದ್ದ ಕಣೇ... ಊಟಕ್ಕೆ ಮನೇಗೆ ಬರ್ತೀನಿ ಅಂದ, ನಿಂಗ್ಯಾಕೆ ಸುಮ್ನೆ ತೊಂದ್ರೆ ಅಂತ– ಬೇಡ ಕಣೋ ಪದ್ದು ಮನೇಲಿ ಇಲ್ಲ ಅಂದೆ. ಸರಿ ಹೊರಗೆಲ್ಲಾದ್ರೂ ತಿನ್ನೋಣ ಬಾ ಅಂದ... ನೀನು ಹಾಯಾಗಿ ಪ್ರೇಮ ಪುರಾಣ ನೋಡು. ಹೊರಗ್ ಊಟ ಮಾಡಿ ಶಂಕ್ರುನ ಅಲ್ಲಿಂದಲ್ಲೇ ಸಾಗ ಹಾಕಿ ಬರ್ತೀನಿ ಕಣೆ .. ಬೈ ..." ಮನೇಲಿ ದಿನಾಲೂ ಅಂಗಡಿಯಿಂದ ತಂದ ಬ್ರೆಡ್ ತಿನ್ನಿಸ್ತಾಳಲ್ಲಾ; ನಿನ್ನೇದು ಮೊನ್ನೇದು ಅವಳೇ ತಿನ್ನಲಿ. ಸರ್ಕಲ್ ನಲ್ಲಿ ಶುರುವಾಗಿರೋ ಹೊಸ ಹೋಟೆಲ್ 'ಮನೆ ಅಡುಗೆ'ಗೆ ಹೋಗಿ ಆ ಹೊಟೇಲ್‌ನಲ್ಲಿ ಮಾಡಿರೋ ಮನೆ ಅಡುಗೆ ಸವಿದು ಬರೋಣವೆಂದು ಗುಂಡ ಹೊಸ ಹುಮ್ಮಸ್ಸಿನಿಂದ ಹೊರಟ. ಬೇರೇ ದಾರಿಯಾದರೂ ಎಲ್ಲಿತ್ತು? ಹೆಂಡತಿಗೆ ತೊಂದರೆ ಆಗಬಾರದು ಎಂದು ಗೆಳೆಯನನ್ನು ಹೊರಗೆ ಊಟಕ್ಕೆ ಕರೆದುಕೊಂಡು ಹೋದ ಗಂಡನ ಬಗ್ಗೆ ಹೆಮ್ಮೆಪಟ್ಟುಕೊಂಡು ಬೀಗುತ್ತಾ ಟಿವಿ ವೀಕ್ಷಣೆಯಲ್ಲಿ ತೊಡಗಿದ್ದಳು ನಮ್ ಗುಂಡನ ಮಡದಿ ಪದ್ದು.

ರಸ್ತೆಯಲ್ಲಿ ಗುಂಡನಲ್ಲಿ ಅನೇಕ ಪ್ರಶ್ನೆಗಳ ನೂಕುನುಗ್ಗಲು... ಬ್ರೆಡ್ ಕಂಡು ಹಿಡಿದ ಮಹಾನುಭಾವ ಯಾರು ... ಯಾವ ಕಾರಣಕ್ಕೆ ಬ್ರೆಡ್ ಕಂಡು ಹಿಡಿದದ್ದು ... ಉತ್ತರದವರು ಬೆಳಗ್ಗಿನ ತಿಂಡಿಗೆ ಬ್ರೆಡ್ಡೇ ತಿನ್ನೋದು ಯಾಕೆ... ತಿಂದರೂನೂ ಟೀವೀಲಿ ತೋರಿಸೋಕೆ ಪರ್ಮಿಷನ್ ಕೊಟ್ಟೋರು ಯಾರು...? ಮುಂತಾಗಿ. ಹೋಟೇಲ್ನಲ್ಲಿ ಪರಿಚಯಸ್ಥರು ಅನೇಕರು ಸಿಕ್ಕಿದ್ದರು. ಪರಿಚಯದ ನಗೆ ಬೀರಿ ಗಾಂಭೀರ್ಯದಿಂದ ಕುಳಿತರೂ ಗುಂಡನಲ್ಲಿ ಹೊಸದೊಂದು ಪ್ರಶ್ನೆ ಸೇರ್ಪಡೆಯಾಗಿತ್ತು ... ರಜಾದಿನವಿದ್ದೂ ಸಹ ಒಂಟಿಗೂಬೆಗಳಂತೆ ಹೋಟೆಲ್ಲಿಗೆ ಬಂದ ಪರಿಚಯಸ್ಥರದ್ದೂ ತನ್ನದೇ ಅವಸ್ಥೆಯಾಗಿರಬಹುದೇ?

■

## ಲಿಮಿರಿಕ್ಸ್

– **ಬಿ.ಎಸ್. ರವಿಕುಮಾರ್**



**ಪಾಲಿಟಿಕ್ಸ್**

"ಲ್ಯಾಟಿನ್ ಭಾಷೆಯಲ್ಲಿ 'ಪಾಲಿ' ಬಹುವಚನ ಸೂಚಿ"
–– ನಟ ರಾಬಿನ್ ವಿಲಿಯಮ್ಸ್ ಹೀಗೆ ಚುಚ್ಚಿದನು ಸೂಜಿ:
"ಇನ್ನು ಟಿಕ್ಸ್ ಎಂದರೆ ನಿಮಗೆಲ್ಲ ಗೊತ್ತು
ರಕ್ತವನ್ನೆಲ್ಲಾ ಹೀರಿಬಿಡುವ ಜಂತು
ಪಾಲಿಟಿಕ್ಸ್ ಎಂದರೆ ಗೊತ್ತಾಯಿತೇ ಎಂಥದದು ಬೂಚಿ?"

# ಅಬ್ಬಾ ಎಂಥಹ ಎಫೆಕ್ಟು.......... !

● ಎಚ್. ಗೋಪಾಲಕೃಷ್ಣ

ಮಧ್ಯಾಹ್ನ ಸೂರ್ಯ ನೆತ್ತಿ ಸುಡುಕ್ಕೆ ಶುರು ಹಚ್ಚಿ ಆಗಲೇ ಸುಮಾರು ಹೊತ್ತಾಗಿದೆ. ಯಾರೋ ಮುಂಬಾಗಿಲು ಬಡಿಬೇಕೇ?

ಯಾರೋ ಏನೋ ಮಾರೋದಿಕ್ಕೆ ಬಂದಿರೋರು, ಸುಮ್ಮನೆ ಕೂತುಬಿಡಲೇ ಅಂತ ಯೋಚಿಸಿದೆ. ಅಡಿಗೆಮನೆಯಿಂದ ಭೂತ ಓಡಿಬರುತ್ತೆ. ಇಲ್ಲೇ ಕುಕ್ಕರಿಸಿಕೊಂಡಿದೀಯಾ ಯಾರಾದರೂ ಬಾಗಿಲು ಬಡಿದರೆ ತೆಗೆಯೋಕ್ಕೆ ಅದೇನು ದೊಡ್ಡ ರೋಗ ನಿನಗೆ? ಒಳಗಡೆ ತಲೆ ಹೋಗೋ ಕೆಲಸ ನನಗೆ. ಅದರ ಮಧ್ಯ ಇದೊಂದು...... ಅಂತ ವರಾತ ಶುರು ಹಚ್ಚುತ್ತೆ, ನಿಲ್ಲಿಸೋದು ಭಾರೀ ಕಷ್ಟ ಅಂತ ಗೊತ್ತು. ಅದರಿಂದ ತೆಪ್ಪಗೆ ಮೇಲೆದ್ದೆ, ಬಾಗಿಲು ತೆಗೆದೆ.

ಎದುರಿಗೆ ಒಂದು ಹಣ್ಣು ಹಣ್ಣು ಮುದುಕ ನಿಂತಿತ್ತು. ಸುಮಾರು ನೂರು ವರ್ಷ ಅಂತ ಹೇಳಬಹುದು ಅದರ ವಯಸ್ಸು!

ಯಾರು ಸಾರ್. ಯಾರನ್ನ ನೋಡಬೇಕಿತ್ತು ಅಂತ ಕೇಳಿ ಈ ಬಿಸಿಲಿನಲ್ಲಿ ಯಾಕೆ ಮನೆಯಿಂದ ಆಚೆ ಬರ್ತೀರಿ, ಮನೇಲಿ ಮಕ್ಕಳೋ ಮೊಮ್ಮಕ್ಕಳೂ ನಿಮ್ಮ ಕೆಲಸ ಮಾಡಿಕೊಡಲ್ಲವೇ...... ಅಂತ ಕಾಳಜಿ ತೋರಿಸಿದೆ.

ಸಾರ್ ಒಳ್ಗೆ ಬರ್ಲಾ.... ಅಂದರು.

ಬನ್ನಿ ಅಂತ ಬಾಗಿಲು ಪೂರ್ತಿ ತೆರೆದೆ. ಒಳ್ಗೆ ಬಂದು ಕುರ್ಚಿ ಮೇಲೆ ಕೂತರು.

ಸ್ವಲ್ಪ ನೀರು..... ಅಂದರು.

ಫ್ರಿಜ್‌ನಿಂದ ನೀರು ತಂದು ಕೊಟ್ಟೆ. ನಿಧಾನಕ್ಕೆ ಗುಟುಕುಗುಟುಕು ನೀರು ಹೀರಿದರು.

ನಾನ್ಯಾರು ಗೊತ್ತಾಗಲಿಲ್ಲವೇ ಸಾರ್.... ಅಂದರು.

ತಲೆ ಆಡಿಸಿದೆ.

ನಾನು ಸಾರ್ ಸೋಮಯ್ಯ... ಅಂದರು

ನನಗೆ ಹತ್ತೋ ಹದಿನೈದೋ ಸೋ ಮಯ್ಯ ಗೊತ್ತು

ನಾಲ್ಕು ಸೋ ಮಯ್ಯಗಳು ನನ್ನ ವಿದ್ಯಾಭ್ಯಾಸದ ವಿವಿಧ ಕಾಲಮಾನದಲ್ಲಿ ಕ್ಲಾಸ್ ಮೇಟ್ಸ್ ಆಗಿದ್ದೋರು.

ಎಂಟು ಸೋ ಮಯ್ಯಗಳು ನನ್ನ ಮೂವತ್ತೆಂಟು ವರ್ಷದ ಫ್ಯಾಕ್ಟರಿ ಜೀವನದಲ್ಲಿ ಗೊತ್ತಿದ್ದೋರು. ಈತನ ಹೋಲಿಕೆ ಇರೋ ಯಾವ ಸೋ ಮಯ್ಯನೂ ನೆನಪಿಗೆ ಬರಲಿಲ್ಲ.

ಸಾರ್, ವಯಸ್ಸಾಯ್ತು, ನೀವು ನೆನಪಿಗೆ ಬರ್ತಿಲ್ಲ... ಅಂದೆ.

ಅದು ಹೇಗೆ ನೆನಪಿರುತ್ತೆ ಬಿಡಿ, ನನ್ನಂತೋರು ಅದೆಷ್ಟು ಸಾವಿರ ನರಮನುಸ್ಸರೋ.... ಎಂದರು.

ಬರೀ ನಕ್ಕೆ.

ಯಜಮಾನರು ಜೇಬಿನೊಳಗೆ ಕೈ ಹಾಕಿ ಪರ್ಸ್ ಆಚೆ ತೆಗೆದ್ರು. ಅದರಿಂದ ನೂರರ ಎರಡು ನೋಟು ಆಚೆ ತೆಗೆದರು. ಇದನ್ನ ತಗೊಳ್ಳಿ.... ಅಂದರು. ಗುರುತು ಪರಿಚಯ ಇಲ್ಲದೇ ಇರೋ ಹಣ್ಣು ಹಣ್ಣು ಮುದುಕ ದುಡ್ಡು ಕೊಟ್ಟರೆ ಇಸ್ಕೊಬೋದೇ...

ಏನಿದು? ನನಗ್ಯಾಕೆ ಕೊಡ್ತಿದೀರಿ?.... ಅಂದೆ ಧ್ವನಿಯಲ್ಲಿ ಕೊಂಚ ಬಿರುಸು ಸೇರಿಸಿ.

ಅಯ್ಯೋ ದೇವರೇ ಇದು ನಿಮ್ಮದು ಕಣ್ರೀ.....

ಅದು ಹೇಗೆ ನಂದಾಗುತ್ತೆ....? ಅಂದೆ, ಧ್ವನಿಯನ್ನು ಮತ್ತೂ ಒರಟು ಮಾಡಿಕೊಂಡು...

1984 ನೆನೆಸಿಕೊಳ್ಳಿ. ಆಗಲೇ ಅಲ್ವಾ ನೀವು ಮನೆ ಕಟ್ಟಿದ್ದು? ನಿಮಗೆ ಕರೆಂಟು ಕೊಡೋಕ್ಕೆ ನಿಮ್ಮ ಹತ್ರ ಇನ್ನೂರು ಲಂಚ ಪೀಕಿದ್ದೆ ನಾನು ನೆನಪಿಗೆ ಬಂತೇ.....

ಅಯ್ಯೋ ಸೋ ಮಯ್ಯ. ಕೆಈಬಿ ಸೋಮಯ್ಯ ಅಲ್ಲವೇನ್ರಿ ನೀವು? ಅಂದೆ.

ನಾನು ಮನೆ ಕಟ್ಟಬೇಕಾದರೆ ಈ ಮನುಷ್ಯ ನಮ್ಮ ಏರಿಯಾದ ಕೆಈಬಿ ಎಂಜಿನೀರು. ಕರೆಂಟು ಕೊಡಿ ಅಂತ ಯಾರು ಹೋದರೂ ಸಖತ್ ಲಂಚ ಹೊಡೆದೇ ಕರೆಂಟ್ ಕೊಡೋನು. ನನ್ನ ಹತ್ತಿರ ಆರುನೂರನ್ನು ಕೇಳಿದ್ದ. ಸ್ವಾಮಿ ನಾನು ಬಡವ, ಕಾರಕಾನೆಲಿ ಕೂಲಿ ಕೆಲಸ ನಂದು ಅಂತ ಒಂದು ವಾರ ಬೇಡಿಕೊಂಡ ಮೇಲೆ ಇನ್ನೂರಕ್ಕೆ ಇಳಿಸಿದ್ದ. ಲಂಚ ಕೊಟ್ಟು, ಮನೇಗೆ ಕರೆಂಟು ಬಂದಮೇಲೆ ಸೋ ಮಯ್ಯ ಸರ್ವನಾಶವಾಗಲಿ ಅಂತ ಶಾಪ ಹಾಕಿದ್ದೆ. ಇದೇ ಸಮಯದಲ್ಲಿ ಅವನಿಗೆ ಮೂರನೇ ಸಂಸಾರ ಗಂಟುಬಿದ್ದಿತ್ತು. ಸರ್ವನಾಶ ಆದ ಅಂತ ಒಂದು ಲೀಟರು ನಂದಿನಿ ಹಾಲು ಕುಡಿದಿದ್ದೆ, ಇದು ಆ ಕಾಲದ ಅಂದರೆ 1983ರ ಕಥೆ !

ಈಗ ಈತ ಬಂದು ಲಂಚ ವಾಪಾಸ್ ಕೊಡ್ತಿದಾನೆ ಅಂದರೆ.... ಅಯ್ಯೋ ಅನಿಸಿತು.

ಬೇಡಿ ಸೋಮಯ್ಯನೋರೇ, ದುಡ್ಡು ಜೇಬಲ್ಲಿ ಇಟ್ಕೊಳ್ಳಿ. ನಾನು ಅದನ್ನೆಲ್ಲಾ ಮರೆತಿದೀನಿ.... ಅಂದೆ.

ನೀವು ಮರೆತಿರಬೋದು ಸಾರ್, ನಾನು ಮರೆತಿಲ್ಲ. ನನ್ನ ಮೇಲೆ ಒಂದು ಹಾಸ್ಯ ಲೇಖನ ಬರೆದ್ರಲ್ಲಾ ಅದರ ಕಟಿಂಗು ಇನ್ನೂ ಇದೆ ನನ್ನ ಫೈಲ್ ನಲ್ಲಿ.... ಅಂದ !

ಇನ್ನೂರು ಕೊಟ್ಟಿದ್ದ ಹೊಟ್ಟೆಉರಿಯನ್ನು ಒಂದು ಮಿಡಲ್ ಬರೆದು ಕಡಿಮೆ ಮಾಡಿಕೊಂಡಿದ್ದೆ, ಅದರಲ್ಲಿ ಐವತ್ತು ಬಂದಿತ್ತು ಪೇಪರಿನವರಿಂದ !

ಬಲವಂತವಾಗಿ ಎರಡು ನೋಟು ಜೇಬಲ್ಲಿ ತುರುಕಿದ. ಆಚೆ ಬಂದ ನನ್ನಾಕೆಗೆ ನಮಸ್ಕಾರ ತಾಯಿ ಅಂದ.

ಹೆಂಡತಿ ಊಟಕ್ಕೆ ಎಬ್ಬಿಸಿದಳು.

ಬೇಡಾ ತಾಯಿ, ಅದನ್ನೆಲ್ಲ ಮನೇಲಿ ಮುಗಿಸ್ಕೊಂಡೆ ಹೊರಟೆ. ಈ ಏರಿಯಾದಲ್ಲಿ ಇನ್ನೂ ಹದಿಮೂರು ಮನೆ ಬಾಕಿ ಇದೆ. ಎಷ್ಟು ಜನ ಬದುಕಿದ್ದಾರೋ ಗೊತ್ತಿಲ್ಲ.... ಅಂತ ಎದ್ದ.

ಹೆಂಡತಿ ಮಜ್ಜಿಗೆ ತಂದುಕೊಟ್ಟಳು, ಕುಡಿದ.

ಈಗ ಮನಸ್ಸು ನಿರಾಳ ಆಯ್ತಮ್ಮಾ.... ಅಂತ ಎದ್ದು ಹೊರಟ.

ಅವನು ಬಾಗಿಲು ದಾಟುತ್ತಿದ್ದ ಹಾಗೇ ನನ್ನಾಕೆ ಪಾಪ ಅವರಮೇಲೆ ನೀವು ಬರೀಬಾರದಿತ್ತು ಅಂದಳು.

ಕಳ್ಳ ನನ್ನಮಗ ಅವಾಗ ಎಷ್ಟು ಜನರ ಕಣ್ಣಲ್ಲಿ ರಕ್ತ ಹರಿಸಿದಾನೊ.... ಅಂತ

ಮನಸ್ಸಿನಲ್ಲೇ ಅಂದುಕೊಂಡು ಮುಂಬಾಗಿಲು ಹಾಕಿ ಹಿತ್ತಲಿಗೆ ಹೋದೆ.

ಮತ್ತೆ ಎರಡೇ ನಿಮಿಷದಲ್ಲಿ ಕಾಲಿಂಗ್ ಬೆಲ್ ಆಗಬೇಕೇ...?

ಬಾಗಿಲು ತೆಗೆದೆ. ಎದುರಿಗೆ ಒಬ್ಬ ನಲ್ವತ್ತರ ಆಸುಪಾಸಿನ ವಯಸ್ಸಿನ ಒಬ್ಬರು. ಎಸ್ ಅಂದೆ. ನಮ್ಮ ಏರಿಯಾ ಒಂದು ತರಹ ಯುರೋಪು ಇದ್ದ ಹಾಗೆ, ಎಲ್ಲರೂ ಇಂಗ್ಲಿಷ್ ಪಂಡಿತರು.

ಅಂಕಲ್, ನಾನು ಗೊತ್ತಾಗಲಿಲ್ವೆ...... ಅಂದ.

ರಮೇಶ್ ಅಲ್ವೇ.... ಅಂದೆ.

ಹೌದು ಅಂಕಲ್, ನಿಮ್ಮ ಮೆಮರಿ ಎಷ್ಟು ಚೆನ್ನಾಗಿದೆ... ಅಂದ.

ಅಯ್ಯೋ ರಮೇಶ್ ನನ್ನ ಹೆಂಡತಿ ಎದುರಿಗೆ ಈ ಮಾತು ಹೇಳೋ.... ಅಂದೆ.

ನಕ್ಕ. ಅಂಕಲ್ ಡ್ಯಾಡಿ ನಿಮ್ಮನ್ನ ಕರಕೊಂಡು ಬಾ ಅಂದರು, ಬನ್ನಿ ಮನೇಗೆ... ಅಂದ.

ಯಾಕೋ ಮಾರಾಯ, ಹುಷಾರಾಗಿದಾರೆ ತಾನೇ... ಅಂದೆ.

ಅದೇನೋ ನಿನ್ನೆಯಿಂದ ಪೆಟ್ಟಿಗೆ ತೆಗೆದು ಹಳೇ ಡೈರಿ ಹುಡುಕಿ ಅದೇನೋ ನೋಟ್ಸ್ ಮಾಡ್ಕೋತಿದಾರೆ.... ಅಂದ.

ರಮೇಶನ ಅಪ್ಪ ಸುಬ್ಬರಾಮು ನಂ ಏರಿಯಾದವನೇ. ನಾವು ಬಂದು ಇಲ್ಲಿ ಸೇರಿಕೊಂಡಾಗಲೇ ಅವನೂ ಬಂದಿದ್ದು. ಬಿಡಿಎ ಕಾರ್ಪೊರೇಷನ್ನು ಇಂತಹ ಕಡೆ ಕಾಂಟ್ಯಾಕ್ಟ್ ಬೆಳೆಸಿಕೊಂಡು ನಮ್ಮ ಎಲ್ಲಾ ಕೆಲಸ ಮಾಡಿಕೊಡೋನು. ಅದಕ್ಕೆ ಸ್ವಲ್ಪ ಫೀಸು ಕೊಟ್ರೆ ಆಯಿತು. ನಾನೂ ಅವನ ಹತ್ರ ಸುಮಾರು ಕೆಲಸ ಮಾಡಿಸಿಕೊಂಡಿದೀನಿ. ಹಳೇ ಡೈರಿ ತೆಗೆದು ಅದೇನೋ  ಬರ್ಕೋತಿದಾನೆ ಅಂದರೆ ಹಳೇ ಬಾಕಿ ವಸೂಲಿಗೆ ಪಟ್ಟಿ ಮಾಡ್ತಿದಾನೆ ಅಂತ. ಹಿಂದೆ ಯಾವುದಾದರೂ ಕೆಲಸ ಮಾಡಿಸ್ಕೊಂಡು ಟೋಪಿ ಹಾಕಿದೀನಾ ಅವನಿಗೆ ಅಂತ ಬೋಳು ತಲೆ ಕೆರಕೊಂಡೆ. ಸ್ವಲ್ಪ ಹೊಟ್ಟು ಉದುರಿತು ತಲೆಯಿಂದ ಶಿವಾಯಿ ಯಾವ ಬಾಕಿ ನೆನಪೂ ಬರಲಿಲ್ಲ.

ಸಂಜೆ ಬರಲಾ, ಬಿಸಿಲು...... ಅಂದೆ.

ಇಲ್ಲ ಅಂಕಲ್ ಈಗಲೇ ಬರಬೇಕಂತೆ, ಕಾರು ತಂದಿದೀನಿ, ಬನ್ನಿ. ನಾನೇ ವಾಪಾಸ್ ಬಿಡ್ತೀನಿ.... ಅಂದ.

ಅವನ ಜತೆ ಅವನ ಅಪ್ಪನ ಮನೇಗೆ ಹೋದೆ. ಎಂಬತ್ತು ಎಂಬತ್ತೈದರ ಸುಬ್ಬರಾಮು ಮಂಚದ ಮೇಲೆ ಸೊಟ್ಟಗೆ ಮಲಗಿದ್ದ. ಸೊರಗಿ ಹೋಗಿದ್ದ. ಅಯ್ಯೋ ಪಾಪ ಅನಿಸಿತು. ಅವನ ಸುತ್ತಲೂ ಇಪ್ಪತ್ತೋ ಮೂವತ್ತೋ ಡೈರಿಗಳು ಬಿದ್ದಿದ್ದವು. ಈಕಡೆ ನಾನೂರು ಪೇಜಿನ ಆರು ನೋಟು ಬುಕ್ಕು.....

ಹೇಗಿದ್ದೀ ಸುಬ್ಬರಾಮು.... ಅಂತ ಎದುರಿದ್ದ ಕುರ್ಚಿ ಮೇಲೆ ಕೂತೆ.

ಹತ್ತಿರ ಬಾ...... ಅಂದ. ಹತ್ತಿರಕ್ಕೆ ಸರಿದು ಅವನ ಮಂಚದ ಮೇಲೆ ಕೂತೆ. ಆ ಬುಕ್ಕು ಇಲ್ಲಿ ಕೊಡು ಅಂತ ನಾನೂರು ಪೇಜಿನ ಪುಸ್ತಕದ ರಾಶಿ ತೋರಿಸಿದ. ಅಷ್ಟೂ ಬೇಡ. ಎಪ್ಪತ್ತರಿಂದ ಎಂಬತ್ತು ಅಂತ ಬರೆದಿರೋದು ಕೊಡು.... ಅಂದ. ಇದೇನು ಅಂತ ಆಶ್ಚರ್ಯ ಪಡುತ್ತಾ ಆ ಪುಸ್ತಕ ಕೊಟ್ಟೆ.

ಪುಸ್ತಕದ ಅಂಚಿನಲ್ಲಿ ಫ್ಲ್ಯಾಗ್ ತರಹ ಪೇಪರ್ ಸಿಕ್ಕಿಸಿದ್ದ. ಸಾವಿರದ ಒಂಬೈನೂರ ಎಪ್ಪತ್ತಾರು  ಅಂತ ಹೇಳ್ತಾ ಹೇಳ್ತಾ ಒಂದು ಪೇಜು ತೆಗೆದ. ಹಾ

ಸಿಕ್ತು.... ಅಂತ ನನ್ನ ಕಡೆ ನೋಡಿದ. ಮುಖದಲ್ಲಿ ಅದೇನೋ ವಿಲಕ್ಷಣ ಕಳೆ ಕಾಣಿಸ್ತು. ಅದ್ಯಾವಾಗ ಅದೆಷ್ಟು ಕಡಿಮೆ ಕೊಟ್ಟಿದ್ದೇನೋ ಅದಕ್ಕೆ ಬಡ್ಡಿ ಪಡ್ಡಿ ಸೇರಿಸಿ ಅದೆಷ್ಟು ಪೀಕಿಸ್ತಾನೋ, ಇಲ್ಲಿಗೆ ಬರಲೇಬಾರದಿತ್ತು ಅಂತ ತಲೆ ಒಳಗೆ ಏರೋಪ್ಲೇನು ಓಡುತ್ತಿತ್ತು.

ಆಗಸ್ಟ್ ಇಪ್ಪತ್ತನೇ ತಾರೀಕು, ನಿನ್ನ ಸೈಟು ರಿಜಿಸ್ಟ್ರು ಮಾಡಿದ್ದು. ನಾನೇ ಬಂದಿದ್ದೆ ರಿಜಿಸ್ಟ್ರು ಮಾಡುಕ್ಕೆ.... ಅಂತ ಮುಖ ನೋಡಿದ. ನಾನು ತಲೆ ಬಗ್ಗಿಸಿ ಅದೆಷ್ಟು ಕೇಳಬೇಕು ಅಂತ ಇದ್ದೀಯೋ ಕೇಳ್ಬಿಡು ಸುಬ್ಬರಾಮು..... ಅಂತ ಎಂಜಲು ನುಂಗುತ್ತಿದ್ದೆ.

ಮೂವತ್ತು ರೂಪಾಯಿ ಚಾರ್ಜು ಮಾಡಿದ್ದೆ ನಾನು. ಹದಿಮೂರು ಜನದ್ದು ಮಾಡಿಸಿದಿಯ, ಎಲ್ಲರ ಹತ್ರವೂ ಮೂವತ್ತು ಕೇಳ್ತಿದ್ದಿ, ನಿನಗೆ ದುರಾಸೆ ಅಂತ ನೀನೇ ಎಲ್ಲರ ಎದುರೂ ಬೈದಿದ್ದೆ. ನೆನಪು ಇದೆಯಾ.... ಅಂದ.

ಮುಖದಿಂದ ಬೆವರು ಹರಿಯಲು ಶುರುವಾಗಿತ್ತು. ಸು ಸು ಸು ಸು ಸುಬ್ಬರಾಮು ಅದೆಲ್ಲಾ ಯಾಕಿವಾಗ? ಮುಗಿದ ಕಥೆ, ಬಿಟ್ಟುಬಿಡು..... ಅಂತ ಶುರುಮಾಡಿದ್ದ ನನ್ನ ಮಾತು ಅರ್ಧದಲ್ಲೇ ತಡೆದ.

ಬಿಟ್ಟುಬಿಡೊಕ್ಕೆ ಆಗುತ್ತೇನಯ್ಯ? ನಿನ್ನ ಹೆಂಡ್ತಿ ಇಡೀ ಊರಿಗೆ ನಾನು ಮೂವತ್ತು ತಗೊಂಡೆ ಅಂತ ಪ್ರಚಾರ ಮಾಡಿಬಿಟ್ಟಳು. ಎಷ್ಟೋ ವರ್ಷ ನನ್ನನ್ನ ಎಲ್ಲರೂ ಓಯ್ ಮೂವತ್ತು....ಥರ್ಟಿ ಅಂತಲೇ ಕೂಗೋರು.....

ಎದ್ದಿದ್ದ ಗಳಿಗೆ ಸರಿಯಿಲ್ಲ ಅಂತ ಹುಟ್ಟಿದ ಮೇಲೆ ಮೊದಲ ಬಾರಿಗೆ ಅನಿಸಿಬಿಟ್ಟಿತು.

ಪಕ್ಕದ ಬ್ಯಾಗು ಆಚೆ ತೆಗೆದ. ಅದರಲ್ಲಿಂದ ಹತ್ತು ರೂಪಾಯಿನ ಕಂತೆ ಹೊರಗೆ ತೆಗೆದ. ಮೂರು ನೋಟನ್ನು ನಾಲ್ಕು ಸಲ ಎಣಿಸಿದ. ತಗೋ ಅಂತ ಕೈ ಮುಂದೆ ಚಾಚಿದ.

ಸುಬ್ಬರಾಮು ಏನಪ್ಪಾ ಇದೆಲ್ಲಾ, ಬೇಡ ಇಟ್ಕೋಪ್ಪ..... ಅಂದೆ.

ಇಲ್ಲ ತಗೋ. ಈ ವಯಸ್ಸಲ್ಲಿ ನನಗೆ ನೆಮ್ಮದಿ ಬೇಕು ಅಂದರೆ ನೀನು ತಗೊಳ್ಳಲೇ ಬೇಕು..... ಅಂತ ಬಲವಂತವಾಗಿ ತುರುಕಿದ.

ಬರ್ತೀನಿ ಸುಬ್ಬರಾಮು ಅಂತ ಎದ್ದೆ. ಹೂಂ ಸರಿ, ಈಗ ನೆಮ್ಮದಿಯಾದೆ. ನಿನ್ನಾಕೆಗೆ ಹೇಳಿಬಿಡು, ಮೂವತ್ತು ಬಂದಿದೆ ಅಂತ....... ಅಂದ.

ಪೂರ್ತಿ ತಲೆ ಬಗ್ಗಿಸಿಕೊಂಡು ಅವರ ಮನೆಯಿಂದ ಹೊರಬಿದ್ದೆ. ಸುಬ್ಬರಾಮು ಮಗ ಆಚೆ ಕಾಣಿಸಲಿಲ್ಲ.

ಅವನ ಕಾರಿಗೆ ಕಾಯದೇ ದುಡುದುಡು ಮನೇಗೆ ಓಡಿಬಂದೆ.

ನೋಡಿ ಅದ್ಯಾರೋ ಬಂದಿದಾರೆ ಅಂತ ಹೆಂಡತಿ ಸೋಫಾ ಮೇಲೆ ಕೈಕಾಲು ಎಸೆದು ಬಿದ್ದಿದ್ದ ನನ್ನನ್ನು ಎಬ್ಬಿಸಿದಳು.

ಆಚೆ ಯಾರೋ ವೃದ್ಧರು ನಿಂತಿದ್ದರು. ಸುಮಾರು ತೊಂಬತ್ತರ ಹತ್ತಿರಹತ್ತಿರ ವಯಸ್ಸಾಗಿರಬಹುದು. ಸಫಾರಿ ಸೂಟು, ಕಟ್ಬೋ ಚಪ್ಪಲಿ, ಹಣೇಲಿ ಕುಂಕುಮದ ಮೇಲೆ ಅಂಟಿಸಿರೋ ಗಂಧ, ಅದರ ನಡುವೆ ಕುಸುರಿಕಾಳಿನ ಹಾಗೇ ಐದು ಅಕ್ಕಿಕಾಳು.

ಸೋಮಿ ನಮಸ್ಕಾರ.... ಅಂದಿತು ಪ್ರಾಣಿ.

ನಮಸ್ಕಾರ, ಬನ್ನಿ ಒಳಗೆ.... ಅಂದೆ. ವಯಸ್ಸಾಗಿರೋರನ್ನು ಆಚೆ ನಿಲ್ಲಿಸಿ

ಮಾತಾಡಿಸೋದು ಸಭ್ಯತೇನೇ? ಒಳಗೆ ಕೂಡಿಸಿ ಪ್ರವರ ವಿಚಾರಿಸೋಣ ಅಂತ ಪ್ಲಾನ್ ಹಾಕಿದ್ದೆ. ಚಪ್ಪಲಿ ಆಚೆ ಬಿಟ್ಟು ಒಳಗೆ ಬರ್ತಾ ಸೋಮಿ ನೆಪ್ಪಾಯ್ತಾ.. ಅಂತ ಕೇಳಿತು ವೃದ್ಧ ಪ್ರಾಣಿ !

ಇಲ್ಲಾ ಸಾರ್, ನೆನಸಿಕೊಳ್ತಾ ಇದೀನಿ..... ಅಂದೆ.

ಅವರು ಅಹಹಾ ಅಂತ ನಕ್ಕರು. ಈ ನಗೆ ಎಲ್ಲಿ ಕೇಳಿದೀನಿ, ವಿಶಿಷ್ಟವಾದ ನಗೆ, ಈ ರೀತಿ ಯಾರೂ ನಗೋರು ನನಗೆ ಅದೆಷ್ಟೋ ವರ್ಷದ ನಂತರ ಸಿಕ್ಕೇ ಇಲ್ವೇ....... ಅಂತ ಯೋಚಿಸ ಬೇಕಾದರೇನೇ ಮಲ್ಲಯ್ಯನ ನೆನಪು ಬರಬೇಕೇ?

ಮಲ್ಲಯ್ಯ ನಮ್ಮ ಮನೆಯ ಗಾರೆ ಮೇಸ್ತ್ರಿ ನಲವತ್ತು ವರ್ಷ ಹಿಂದೆ ಮನೆಕಟ್ಟಿದಾಗ. ಪ್ರತಿ ಶನಿವಾರ ಅವನಿಗೂ ನನಗೂ ತಕರಾರು. ಅವನು ಇಷ್ಟು ಸಾವಿರ ಕೊಡಿ ಅನ್ನೋದು.

ನಾನು ಅದಕ್ಕೆ ಲೆಕ್ಕ ಕೊಡು ಅನ್ನೋದು. ಅವನು ಕೊಟ್ಟ ಲೆಕ್ಕ ತಪ್ಪು ಅಂತ ಅವ್ನಿಗೆ ಗೊತ್ತಿಲ್ಲದೇ ನಾನು ಬರೆದುಕೊಂಡಿದ್ದ ಲೆಕ್ಕ ತೋರಿಸಿ ಅದರ ಪ್ರಕಾರವೇ ಕೊಡೋದು ಅನ್ನೋದು. ಜಗಳ ರಾತ್ರಿ ಹನ್ನೊಂದರವರೆಗೆ ನಡೆದು ಮುಂದಿನ ವಾರದಿಂದ ನಾನು ಕೆಲಸಕ್ಕೆ ಬರೋಲ್ಲ ಅಂತ ಅವನು ಮುನಿಸಿಕೊಂಡು ಹೋಗುತ್ತಿದ್ದ. ಭಾನುವಾರ ಸಂಜೆ ಬಂದು ನಾನು ಕೊಡೋ ಕಾಸು ತಗೊಂಡು, ಸೋಮಿ ತಾಪತ್ರಯ ಸೋಮಿ ಅಂತ ನಕ್ಕು ಸೋಮವಾರ ಮತ್ತೆ ಕೆಲಸಕ್ಕೆ ಬರೋನು.

ಕೊನೇಲಿ ಕೊಂಚ ಯಾಮಾರಿ ಎರಡು ಸಾವಿರವೊ ಏನೋ ಹೆಚ್ಚು ಅವನಿಗೆ ಹೋಗಿತ್ತು. ಬಡವ ಬಿಡಿ ಸೋಮಿ ಅಂತ ಅವನು ಎಂದಿನ ಹಾಗೆ ನಕ್ಕಿದ್ದ. ಅದೇ ನಗು ಈಗ ಕಿವಿಗೆ ಬಿದ್ದದ್ದು !

ಹೋ ಮಲ್ಲಯ್ಯ ಹೇಗಿದ್ದೀ.... ಅಂತ ಎರಡೂ ಕೈ ಹಿಡಿದು ಪ್ರೀತಿ ತೋರಿಸಿದೆ. ಇವನಿಂದ ನಮಗೂ ಒಂದು ಮನೆ ಅಂತ ಆಯಿತು ಅಂತ ಸುಮಾರು ಸಲ ನಾನು ನನ್ನಾಕೆ ಮಲ್ಲಯ್ಯನ್ನ ನೆನೆಸ್ಕೊತೀವಿ.

ಯಾರು ಬಂದಿದಾರೆ ನೋಡು ಬಾ.... ಅಂತ ಹೆಂಡತಿನ ಕರೆದೆ. ಗುರುತು ಸಿಗಲಿಲ್ವೆ ಅಂತ ಆಕೆ ಆಚೆ ಬಂದು ಸುಮ್ನೆ ನಿಂತಾಗ ಕೇಳಿದೆ.

ಅಮ್ನೋರೆ, ನಾನ್ರ ಮಲ್ಲಯ್ಯನು..... ಅಂತ ಮಲ್ಲಯ್ಯ ಮಧ್ಯೆ ಬಾಯಿ ಹಾಕಿದ.

ಅಯ್ಯೋ ಮಲ್ಲಯ್ಯನೇ, ಕುತ್ಕೊಪ್ಪ ಚೆನ್ನಾಗಿದ್ದೀಯ. ಕಾಫಿ ತರ್ತೀನಿ ಅಂತ ಹೆಂಡ್ತಿ ಒಳಗೆ ಹೋದಳು.

ಕಾಫಿ ಹೀರ್ತಾ ಉಭಯ ಕುಶಲೋಪರಿ ಆಯಿತು. ಹೊರಡ್ತಾ ಅಯ್ನೋರೆ ಇದು ತಗಳಿ ಅಂತ ಜೇಬಿಂದ ಒಂದು ಕವರ್ ತೆಗೆದು ಕೈಗಿತ್ತ. ಇದೇನು ಅಂದೆ.

ನಿಮ್ಮನೆ ಕೆಲಸ ಮಾಡಿದಾಗ ಎರಡು ಸಾವಿರ ಜಾಸ್ತಿ ತಗೊಂಡುಬಿಟ್ಟಿದ್ದೆ. ಈಗ ಅಷ್ಟು ಕೊಡೋಕ್ಕೆ ಆಗುಲ್ಲಾ, ಅದಕ್ಕೆ ಸ್ವಲ್ಪ ವಾಪಾಸ್ ಕೊಟ್ಟಿದೀನಿ, ಒಪ್ಪಿಸ್ಕೊಬೇಕು ಅಂದ.

ಅಯ್ಯೋ ಮಾರಾಯ ಯಾಕೋ ಇದೆಲ್ಲಾ.... ಅಂತ ವಾಪಾಸ್ ಜೇಬಿನಲ್ಲಿ ಇಡಲು ಹೋದೆ. ಬೇಡ ಸಾರ್ ಬೇಡ ಸಾರ್. ಇಡೀ ಊರಿಗೆ ನೀವು ನಿಮ್ಮಾಕೆ ಹಾಗೂ ನಿಮ್ಮ ವಂಶದೋರು ನಾನು ಕಾಸು ಜಾಸ್ತಿ ಲಪಟಾಯಿಸಿದೆ ಅಂತ ಹೇಳ್ಕೊಂಡು ಬಂದಿದ್ದು ನನಗೆ ಗೊತ್ತು. ಇದು ನೀವು ತಗೊಳ್ಳಲೇ ಬೇಕು ಅಂತ

ಹಠ ಹಿಡಿದು ನನ್ನಾಕೆ ಮಾತಿಗೂ ಕೇರೆ ಅನ್ನದೆ ಕವರು ಜೇಬಿಗೆ ತುರುಕಿ ಬರ್ತೀನಿ ಸಾರ್. ಅಮ್ಮೋರೇ ಬರ್ತೀನಿ ಅಂತ ಹೊರಟು ರಸ್ತೆ ತುದೀಲಿ ಮರೆಯಾದ.

***

ಏನಂತೆ ಸುಬ್ಬರಾಮು ಮಗ ಬಂದಿದ್ದು ಅಂತ ಕೇಳಿದಳು ಹೆಂಡತಿ. ಅವಳಿಗೆ ಮೂವತ್ತು ರೂಪಾಯಿನ ಕಥೆ ಹೇಳಿದೆ. ಒಂದು ನಿಮಿಷ ಅದೇನೋ ಯೋಚಿಸುತ್ತಾ ಕೂತಳು.

ಇಡೀ ಪ್ರಪಂಚದಲ್ಲಿ ನಿಮ್ಮಂಥ ಪೆದ್ದ ಇನ್ನೊಬ್ಬ ಇಲ್ಲ ಅಂದಳು. ಇದು ಮದುವೆ ಅದಾಗಲಿಂದ ಕೇಳಿಕೊಂಡು ಬಂದಿರೋದೇ ಆಗಿರುವುದರಿಂದ ತಲೆ ಒಳಗೆ ಹೋಗಲಿಲ್ಲ.

ಆಗಲೇ ನೋಡಿ ಸೋಮಯ್ಯ ಕಾಸು ಕೊಟ್ಟನಾ, ಈಗ

ಇವರು ಕೊಟ್ಟರಾ?..... ಮಲ್ಲಯ್ಯ ಮನೇಗೆ ಬಂದ್ನಾ.....?

ಹೂಂ ಅದಕ್ಕೂ ನನ್ನ ದಡ್ಡತನಕ್ಕೂ ಏನು ಸಂಬಂಧ?...... ಅಂತ ಸಿಡುಕಿದೆ.

ಅಲ್ಲಾರೀ ಆಗಲೇ ಸಾವಿರ ಲಂಚ ಕೇಳಿದವರಿಗೆ ಐದು ಸಾವಿರ, ಮೂವತ್ತು ಕೇಳಿದವರಿಗೆ ಸಾವಿರ ಈ ರೀತಿ ಲಂಚ ಕೊಟ್ಟುಬಿಟ್ಟಿದ್ದರೆ ಈಗ ಅವೆಲ್ಲಾ ವಾಪಾಸ್ ಬಂದು ನಂ ಕಷ್ಟ ಕಡಿಮೆ ಆಗ್ತಿತ್ತು ಅಲ್ವೇ? ಅದಕ್ಕೇ ಹೇಳೋದು ಗಂಡುಮುಂಡೆವಕ್ಕೆ ಬುದ್ಧಿ ಕಮ್ಮಿ ಅಂತ... ಅಂತ ಲೆಕ್ಚರು ಕೊಟ್ಟಳು.

ತಿರುಗಿಸಿ ವಾಪಾಸ್ ಕೊಡೋಕ್ಕೆ ಬರೋಲ್ಲ ಅಂತ ಅಲ್ಲ, ನಾನೂ ನಿಮ್ಮಹಾಗೇ ನೆಮ್ಮದಿ ಬೇಕು ಅನ್ನೋವನು, ತೆಪ್ಪಗಿದ್ದೆ.

ಪಕ್ಕದ ಮನೆವರು ಕೇಳಿದರು ಅದ್ಯಾರು ಅಷ್ಟು ಮುದುಕರು ಮನೇಗೆ ಬಂದಿದ್ದು ಅಂತ. ಅವರಿಗೆ ಹೀಗೇ ಲಂಚ ವಾಪಾಸ್ ಕೊಡೋಕ್ಕೆ ಬಂದಿದ್ದರು ಅಂತ ಹೇಳಿದೆ. ಅವರ ಕಾಲಿಗೆ ಬೀಳಬೇಕು, ಪುಣ್ಯ ಬರುತ್ತೆ ಅಂದರು.....

ಈಗಲೂ ಕಾಲಿಗೆ ಬಿದ್ದರೆ ಅವರ ಪಾಪವೂ ಅಡರುತ್ತೆ ಅಂದ್ಕೊಂಡೆ !

ಯಾಕೆ ಎಲ್ಲರೂ ಏಕ್ದಂ ಒಳ್ಳೇವರು ಆಗ್ತಿದಾರೆ ಗೊತ್ತಾ?....... ಅಂದಳು.

ಏನು ಕ್ರಾಂತಿ ಗ್ರೀಂತಿ ಆಯ್ತಾ?..... ಅಂದೆ.

ಅಯ್ಯೋ ಯೋಗದಿನಾಚರಣೆ ಮಾಡಿದರಲ್ಲಾ? ಆಗ ಇವರ ಸೀನಿಯರ್ ಸಿಟಿಝನ್ ಗುಂಪಿಗೆ ಅದ್ಯಾರೋ ಮಠದ ಸ್ವಾಮಿ ಬಂದಿತ್ತಂತೆ. ಅದು ನೆಮ್ಮದಿ ಬೇಕು ಅಂದರೆ ಮೊದಲು ಹಿಂದಿನ ಪಾಪ ತೊಳಕೊಳ್ಳಿ ಅಂತ ಹೇಳಿತಂತೆ. ಅದರ ಎಫೆಕ್ಟು ಇದು..... ಅಂದಳು !

ಅಯ್ಯೋ ಹೌದೇನೇ, ಸದ್ಯ ನಾನು ಯೋಗದಿನಾಚರಣೆಗೆ ಹೋಗಲಿಲ್ಲ ನೋಡು, ಇಲ್ಲಾಂದರೆ ನನ್ನ ಪಾಡು ಹೇಗಾಗ್ತಾ ಇತ್ತು ಅಂದರೆ ಕಾಲಿಗೆ ಬಿದ್ದು ಬಿಡಿ ಬಿಡಿ ಬಿಡಿ ಅಂತ ಬಡ್ಕೋಬೇಕಿತ್ತು.....

ಏನು ಬಿಡೋದು, ಬಾಗಿಲು ಹೀಗೇ ಹಾರೋಡ್ಕಂಡು ಕನಸು ಕಾಣ್ತಾ ಇದೀರಿ, ಕಳ್ಳರು ಗಿಳ್ಳರು ಬಂದು ಇಡೀ ಮನೆ ದೋಚ್ಕೊಂಡು ಹೋದರೂ ಹೋದರೆ..... ಅಂತ ಮೈ ಕುಲುಕಿ ಎಬ್ಬಿಸಿದಳು...

ಹೋ ಯೋಗದ್ದು ಎಂತಾ ಎಫೆಕ್ಟಪ್ಪಾ.. ನಮ್ಮ ಕಾಲದಲ್ಲೂ ಹೀಗಿರಬಾರದಿತ್ತೇ ಅಂತ ಎದ್ದೆ..... !

■

# ನಾವು ಕನ್ನಡ ಕಲಿಯುತ್ತಾ ಇದ್ದೇವೆ

● ವೀಣಾ ರಂಗನಾಥ್

ನಮ್ಮ ಚಿಕ್ಕಪ್ಪನವರು ನೌಕರಿಯ ಸಲುವಾಗಿ ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಬೀಡು ಬಿಟ್ಟಿದ್ದರು. ಮನೆಯಲ್ಲಿ ಕನ್ನಡ ಮಾತನಾಡಿದರೂ ಕೆಲಸ ಕಾರ್ಯಗಳನ್ನೂ ಸುಲಭವಾಗಿ ಸಾಗಿಸಲು ತಮಿಳು ಭಾಷೆಯನ್ನು ಕಲಿಯಬೇಕಾಯಿತು. ಅವರ ಮೂರು ಮಕ್ಕಳು ಕೂಡ ಶಾಲೆಯಲ್ಲಿ ತಮಿಳು ಭಾಷೆಯನ್ನು ಅನಿವಾರ್ಯವಾಗಿ ಕಲಿಯಬೇಕಾಯಿತು. ವರ್ಷಗಳು ಕಳೆದಂತೆ, ಆ ಮೂವರು ಮಕ್ಕಳು ತಮಿಳು ಭಾಷೆಯನ್ನು ನಿರರ್ಗಳವಾಗಿ ಮಾತನಾಡುವ ಮಟ್ಟಕ್ಕೆ ಬಂದರು. ಕನ್ನಡ ಮನೆಯ ಮಾತ್ರಕ್ಕೆ ಸೀಮಿತಗೊಂಡಿತು.

ಎಲ್ಲರೂ ವರ್ಷಕ್ಕೋ ಎರಡು ವರ್ಷಕ್ಕೊಮ್ಮೆ ಬೆಂಗಳೂರಿಗೆ ಬಂದು ಹೋಗುವ ರೂಢಿ ಇಟ್ಟುಕೊಂಡಿದ್ದರು. ಆಗ, ಈ ಹುಡುಗರು ನಮ್ಮೊಡನೆ ಕಷ್ಟಪಟ್ಟು ಕನ್ನಡದಲ್ಲೇ ಮಾತನಾಡಲು ಪ್ರಯತ್ನಿಸುತ್ತಿದ್ದರು. ಇಂಥ ಒಂದು ಸಂದರ್ಭ. ಒಂದು ದಿನ ಮುಸ್ಸಂಜೆ ಹೊತ್ತು. ಸಾಮಾನ್ಯವಾಗಿ, ಈ ಹೊತ್ತಿನಲ್ಲಿ, ಮನೆಯ ಹಿರಿಯರು ದೇವರ ಮುಂದೆ ಇಲ್ಲವೇ ತುಳಸಿ ಕಟ್ಟೆಯ ಮುಂದೆ ದೀಪ ಹಚ್ಚುತ್ತಾರೆ. ಇದನ್ನು ಗಮನಿಸಿದ್ದ ಅವರ ಮಗಳು (ಆಗಿನ್ನೂ ಅವಳ ವಯಸ್ಸು 6 – 7 ವರ್ಷ ಅಷ್ಟೇ) ಒಳಗೆ ಹೋಗಿ, ತನ್ನ ತಾಯಿಗೆ ಹೀಗೆ ಹೇಳಿದಳು : "ಅಮ್ಮ, ಕತ್ತಲೆ ಆಗ್ತಾ ಇದೆ, ಬೇಗ ಹೋಗಿ ದೇವರಿಗೆ 'ಬೆಂಕಿ' ಹಚ್ಚು!

ದೀಪ ಹಾಗು ಬೆಂಕಿ ಶಬ್ಧವನ್ನು ಹೇಗೆ ಬಳಸಬೇಕು ಎಂದು ಅರಿಯದ ಆ ಪುಟ್ಟ ಹುಡುಗಿ ನಮ್ಮನ್ನೆಲ್ಲಾ ನಗಿಸಿದಳು!

****

ಅಮೇರಿಕಾದಲ್ಲಿ ಅನೇಕ ಕನ್ನಡಿಗರು ವಾಸವಾಗಿದ್ದಾರೆ. ಇಂತಹವರ ಪೈಕಿ ನನ್ನ ತಂಗಿ ಹಾಗು ತಮ್ಮ. ಅವರಿಬ್ಬರಿಗೂ ಎರಡೆರಡು ಮಕ್ಕಳು : ತರುಣ್,ಶ್ರಿಯ, ಯೆಶಸ್ ಮತ್ತು ತೇಜಸ್ ಅಲ್ಲಿಯೇ ಹುಟ್ಟಿ ಬೆಳೆಯುತ್ತಿದ್ದಾರೆ. ಭಾರತದ ಸಂಸ್ಕೃತಿಯ ಪರಿಚಯವಾಗಲಿಯೆಂದು ಮಕ್ಕಳನ್ನು ಚಿನ್ಮಯ ಮಿಷನ್ ನಡೆಸುವ ತರಗತಿಗಳಿಗೆ ಸೇರಿಸಿದ್ದಾರೆ ಹಾಗು ಅನ್ಯರೊಡನೆ ಕನ್ನಡವನ್ನು ಚೆನ್ನಾಗಿ ಮಾತನಾಡುವುದಕ್ಕೆ ಬರಲಿ ಎಂದು ಕನ್ನಡ ಸಂಭಾಷಣಾ ತರಗತಿಗಳಿಗೆ ಸೇರಿಸಿದ್ದಾರೆ.

ನನ್ನ ತಂಗಿ ಹಾಗು ತಮ್ಮ ಕೆಲಸದಿಂದ ರಜೆ ತೆಗೆದುಕೊಂಡು ಸಂಸಾರ ಸಮೇತರಾಗಿ 2015 ರಲ್ಲಿ ಬೆಂಗಳೂರಿನಲ್ಲಿರುವ ನಮ್ಮ ಮನೆಗೆ ಬಂದಿದ್ದರು. :

ರಾತ್ರಿಯ ಊಟವನ್ನು ನಾವೆಲ್ಲರೂ ಉತ್ಸಾಹದಿಂದ ಕೈತುತ್ತು ಹಾಕಿಸಿಕೊಂಡು ತಿನ್ನುತ್ತಿದ್ದೆವು . ಈ ಹುಡುಗರಿಗೆ ಈ ಅನುಭವ ಒಂದು ಬಗೆಯ ಖುಷಿ ಕೊಡುತ್ತಿತ್ತು. ಇದರಲ್ಲಿ ಏನೋ ಒಂದು ಹೊಸತನ ಕಾಣಿಸುತ್ತಿತ್ತು. ಪ್ರತಿ ದಿನವು ಊಟ ಹೀಗೆ ಆಗಬೇಕೆಂದು ಬಯಸುತ್ತಿದ್ದರು. ಕೆಲ ದಿನಗಳು ಹೀಗೇ ಸಾಗಿದವು.ಒಂದು ದಿನ, ತೇಜಸ್ ಸ್ನಾನಕ್ಕೆ ಇಳಿದ. ಬಿಸಿ ನೀರು ಬಕೇಟಿನಲ್ಲಿ ಸಿದ್ಧವಾಗಿತ್ತು. ಒಂದೆರಡು

ತಂಬಿಗೆ ನೀರು ಮೈಮೇಲೆ ಹಾಕಿಕೊಂಡು, ತನ್ನ ಅಪ್ಪನಿಗೆ ಜೋರಾಗಿ ಕೂಗು ಹಾಕಿದ, "ಡ್ಯಾಡಿ, ಗಿವ್ ಮಿ ಸೋಪು ಕೈತುತ್ತು."

ನಾವೆಲ್ಲರೂ ಈ ಹುಡುಗನ ಪದ ಪ್ರಯೋಗ ಮಾಡಿದ ರೀತಿಯನ್ನು ಕಂಡು ಮೆಚ್ಚಿಕೊಂಡೆವು.

***

ವರ್ಷ2010ರಲ್ಲಿ ಯೆಶಸ್‌ನ ಉಪನಯನವನ್ನು ಮಾಡಲಾಯಿತು. ಇದರ ಪ್ರಯುಕ್ತ, ದೇವರ ಸಮಾರಾಧನೆಯನ್ನು ನಮ್ಮ ಮನೆಯಲ್ಲಿಯೇ ಮಾಡಿದೆವು.

ಪ್ರಾರಂಭದಲ್ಲಿ, ಇವೆರಡೂ ಸಮಾರಂಭಗಳ ಮಹತ್ವ, ಅರ್ಥ ಮತ್ತು ಉದ್ದೇಶಗಳನ್ನು ಅಮೇರಿಕಾದಲ್ಲಿ ಹುಟ್ಟಿ ಬೆಳೆಯುತ್ತಿರುವ ಯೆಶಸ್ಸನಿಗೆ ಸರಳವಾಗಿ ತಿಳಿಸಿದ್ದೆವು. ತನ್ನ ಸಲುವಾಗಿಯೇ ಈ ಎರಡು ಸಮಾರಂಭಗಳು ನಡೆಯುತ್ತಿರುವುದನ್ನು ತಿಳಿದು, ಯೆಶಸ್ ಖುಷಿ ಪಟ್ಟಿದ್ದ. ಅಂತೆಯೇ, ನಲಿದ.

ಈ ಎರಡೂ ಸಮಾರಂಭಗಳು ಸಾಂಗವಾಗಿ ನಡೆದವು. ಒಂದೆರಡು ವಾರಗಳು ಕಳೆದ ನಂತರ, 'ದೇವರ ಸಮಾರಾಧನೆಯದಂದು ನಡೆದ ಘಟನೆಗಳನ್ನು ಇಲ್ಲವೇ ಅಂದು ನೆರೆದಿದ್ದ ಜನಗಳನ್ನು – ಯಾವುದನ್ನೋ ಏನೋ, ಅಂತು ಜ್ಞಾಪಿಸಿಕೊಂಡು, ಯಶಸ್ ನಮ್ಮೊಡನೆ ಏನನ್ನೋ ಕೇಳುವುದಕ್ಕೆ ಹೊರಟು, ಹೀಗೆ ಕೇಳಿದ :

'ಅಮ್ಮ, ಯು ನೊ, ಆನ್ ಮೈ ಮುಂಜಿ ಇನಾಗ್ಯುರೇಶನ್ ಡೇ...'

***

ಈಗ, ಅವರುಗಳರೊಡನೆ 'ಫೇಸ್ ಟೈಮ್'ನ ಮೂಲಕ ಮಾತುಕತೆ. ಆ ಉಭಯ ಕುಶಲೋಪರಿ ಸಂಭಾಷಣೆಗಳ ಒಂದು ಉದಾಹರಣೆ ಇಲ್ಲಿದೆ.

ಅಜ್ಜಿ – ಮೊಮ್ಮಗಳ ನಡುವಿನ ಸಂವಾದ :

ಅಜ್ಜಿ : "ಹೇಗಿದ್ದೀಯಾ, ಶ್ರಿಯ?"

ಶ್ರಿಯ : "ನಾನು ಚೆನ್ನಾಗಿ ಇದ್ದೀನಿ."

ಅಜ್ಜಿ : "ಒಬ್ಬಳೇ ಮನೆಯಲ್ಲಿರುವುದಕ್ಕೆ ಭಯವಾಗುವುದಿಲ್ಲವೇ?"

ಶ್ರಿಯ : "ಇಲ್ಲಾ. ಮಜವಾಗಿ, ಆರಾಮವಾಗಿಯೇ ಇದ್ದೀನಿ. ಅಜ್ಜಿ."

ಅಜ್ಜಿ : "ಹೋಗಲಿ, ಸಮಯಕ್ಕೆ ಸರಿಯಾಗಿ, ಹಾಲು ಕುಡಿಯುತ್ತಿದ್ದೀಯಾ?

ಶ್ರಿಯ : "ಹ್ಞೂ."

ಅಜ್ಜಿ : ಡಿಡ್ ಯು ಡ್ರಿಂಕ್ ಕೋಲ್ಡ್ ಮಿಲ್ಕ್ ಆರ್ ಡಿಡ್ ಯು ಡ್ರಿಂಕ್ ವಾರ್ಮ್ ಮಿಲ್ಕ್ ಟುಡೇ?

ಶ್ರಿಯ : "ಇಲ್ಲಾ ಅಜ್ಜಿ, ನಾನು ಚಳಿ ಹಾಲನ್ನೇ ಕುಡಿದೆ."

■

# ಫ್ಯಾನ್ಸಿಡ್ರೆಸ್

● **ರಮೇಶ್ ಹೊನ್ನುಡಿಕೆ**

ಬೆಳಗಿನಿಂದಲೂ ಒಂದು ವಿಷಯ ತಲೆಯಲ್ಲಿ ಹುಳ ಕೊರೆಯುತ್ತಾ ಇತ್ತು ನಿತ್ಯಕ(ಖ)ರ್ಮಗಳನ್ನು ಮುಗಿಸಿ... ಬರೆಯಲು ಕುಳಿತೆ. ಇನ್ನೂ ಓಂ ನಾಮವೇ ಬರೆದಿರಲಿಲ್ಲ ಮೊಬೈಲು ಬಡೆದುಕೊಳ್ಳಲು ಶುರುಮಾಡಿತು. ಪ್ರಥಮ ಚುಂಬನಂ ದಂತಭಗ್ನಂ. ಸರಿ ಎದ್ದು ಹುಡುಕಾಡಿದೆ. ದರಿದ್ರ ಮೊಬೈಲು ಎಲ್ಲಿ ಅಡಗಿ ಅಣಕಿಸುತ್ತಿತ್ತೋ– ಗೊತ್ತಾಗುತ್ತಿರಲಿಲ್ಲ. ಕಡೆಗೆ ಹಾಸಿಗೆ ತಲೆದಿಂಬಿನ ಕೆಳಗೆ ಅವಿತಿತ್ತು. ತೆಗೆಯುವಷ್ಟರಲ್ಲಿ ಕಾಲ್ ಕಟ್ಟಾಯ್ತು ನೋಡಿದರೆ... ಸಿದ್ಲಿಂಗು. ನನ್ನ ಶಿಷ್ಯಕೋಟಿ ಇರಲಿ ಎಂದು ಹೇಳಿ ನಾನೇ ಕಾಲ್ ಮಾಡಿದೆ.

"ಏನಪ್ಪಾ ಸಿದ್ಲಿಂಗೂ... ಬೆಳಿಗ್ಗೆ ಬೆಳಿಗ್ಗೇನೆ ನೆನೆಸಿಕೊಂಡಿದ್ದೀಯಾ"

"ಸಾ.. ನಮಸ್ಕಾರ.. ಸಾ ಚೆನ್ನಾಗಿದ್ದೀರಾ ಸಾ.. ಅಕ್ಕಾವರು.. ಅಜ್ಜಮ್ಮಾ ಹೆಂಗವರೆ ಸಾ. ನಾನು ಹೋದ ಸಲಿ ತಂದುಕೊಟ್ಟಿದ್ದ ಮಲ್ಲಿಗೇ ಗಿಡಾ ಚಿಗುರ್ತಾ ಸಾರ್"

"ಎಲ್ಲಾ ಚೆನ್ನಾಗಿದ್ದಾರೆ. ಏನ್ ವಿಷಯ ಹೇಳಪ್ಪಾ"

"ಸಾರ್ ನೀವು ಹೋದ ಸಲಿ ನಮ್ಮ ಫ್ಯಾಕ್ಟರೀಗೆ ಬಂದಿ... ಮಾಡಿಸಿದ ನಾಟಕಾನ ಇನ್ನೂ ಎಲ್ರೂ ನೆನೆಸ್ಕೋತಾ ಇದೀವಿ ಸಾ. ಭಾಳಾ ಮಜಬೂತ್ ಆಗಿತ್ತು ಸಾ. ಈ ಸಲಿ ನಾಳೆ ಫ್ಯಾನ್ಸಿಡ್ರೆಸ್ ಕಾಂಪಿಟಿಷನ್ನನ ಮಡಗವರೆ ಸಾ. ನಮ್ಮ ಕುರುಬರಹಳ್ಳಿ ಕಾಳೇಗೌಡ ಹಿರಣ್ಯ ಕಸಿಪು ಪಾತ್ರ ಆಕಬೇಕಂತೆ ಬಲೆ ಆಸೆಯಾಗವನೆ. ನೀವು ನಮಗೆ ಸೊಲ್ಪ ಎಲ್ಪ್ ಮಾಡಬೇಕು ಸಾ. ನೀವು ವಸಿ ನಮ್ಮ ಕೂಟೆ ಬಂದೀ ಅದೇ ಸಾ ಹೋದ ಸಲಾ ತಂದಿರಲಿಲ್ಲವಾ ಡ್ರೆಸ್‌ಗಳು ಅವರ ಅಂಗಡಿಗೆ ಹೋಗಿ ಅದೇ ಸಾರ್ ನಾಗಾರ್ಜುನ ಅವರ ತಾವ ನಮ್ಮ ಕಾಳೇ ಗೌಡಂಗೆ ಡ್ರೆಸ್ ಕಾಷ್ಟೂಮ್ ಒಟವೆ ವಸ್ತ್ರ ಸೆಲೆಕ್ಟ್ ಮಾಡಬೇಕು ಸಾ. ಪಾಪ ಬಡ್ಡೆತ್ತದು ವಾರದಿಂದ ಡೈಲಾಗ್‌ಗೊಳೆಲ್ಲಾ ಚೆನ್ನಾಗಿ ಉರು ಹೊಡೆದವನೆ. ಹನ್ನೊಂದು ಘಂಟೇಗೆ ನಿಮ್ಮ ಮನೇತಾವ್ಕೆ ಬತ್ತೀವಿ. ವೊಸಿ ಹೆಲಪ್ ಮಾಡಿ ಸರ್" ಎಂದು ಉಲಿದು ಫೋನ್ ಕಟ್ ಮಾಡಿಯೇ ಬಿಟ್ಟ. ಆಯ್ತು ಇವತ್ತು ಬರವಣಿಗೆ ಕೆಲಸ ಆದ ಹಾಗೆ ಅಂತ ಪುಸ್ತಕ ಮುಚ್ಚಿ ಬನಿಯನ್ ಬಿಚ್ಚಿ ಹೆಗಲ ಮೇಲೆ ಟವಲ್ ಹಾಕ್ಕೊಂಡು ಮುಕಚೌರ, ಸ್ನಾನ ಇತ್ಯಾದಿಗಳಿಗೆ ಇಳಿದೆ.

ಇನ್ನೂ ಹತ್ತೂನಲವತ್ತು... ಅಗೋ ವಕ್ಕರಿಸಿಯೇ ಬಿಟ್ಟರು. ಶ್ರೀಮಾನ್ ಶ್ರೀ ಸಿದ್ಲಿಂಗು. ಮ॥ ರಾ॥ ಕಾಳೇಗೌಡ. ಸನ್ಮಾನ್ಯ ಕೃಷ್ಣಗಿರಿ ಕೃಷ್ಣಪ್ಪ. "ಬನ್ನಿ ಬನ್ನಿ ಸ್ವಲ್ಪ ಟೀ ಕುಡಿಯಿರಿ" ಎಂದೆ

"ಬ್ಯಾಡ ಸಾರ್. ಟೈಂ ವೇಸ್ಟ್ ಆಯ್ತದೇ. ನಡೀರಿ ವೋಗಮಾ" ಅಂತ ನನ್ನನ್ನ ತರುಮಿಕೊಂಡು ಹೊರಟೇಬಿಟ್ಟ. ಅಲ್ಲಿ ನೋಡಿದರೆ ಇನ್ನೊಬ್ಬ ಅತಿಥಿ. ಸಿದ್ಲಿಂಗನ ಮೂರು ನಾಲ್ಕು ವರ್ಷದ ಹೆಣ್ಣು ಪಿಳ್ಳೆ ಸ್ಕೂಟರಿನ ಮೇಲೆ ಕುಳಿತು ಐಸ್‌ಕ್ರೀಂ ಚೀಪುತ್ತಾ ಇತ್ತು.

"ಬಡ್ಡೆತ್ತದು ನಾನೂ ಬತ್ತೀನಿ.. ನಾನು ಬತ್ತೀನಿ ಅಂತ ಬಡ್ಕೋತದೆ ಜಿಗಣೆ ಹಿಡದಂತೆ ಹಿಡದುಬುಡ್ತು. ಇದರ ಅವ್ವ ಏ ಮೂದೇವಿ ಮಗೀನ ತಲೆ ಮೇಲೆ

ಕುಂಡರಿಸಿಕೋತಿಯಾ. ಸ್ಕೂಟರ್‌ನಾಗೆ ತಾನೆ ಓಗೋದು ಸಟೀಗೆ ಕರಕೊಂಡು ಓಗು ಅಂದುಬಿಟ್ಲು. ಇದು ಸ್ಕೂಟರ್ ಏರೇಬುಡ್ತು ನಡೀರ್ಲಾ ಹೋಗಮಾ" ಅಂತ ಸ್ಕೂಟರ್ ಏರಿದ. "ಅದು ಸರಿನಯ್ಯಾ ಈ ಇಬ್ಬರು ಯಾಕಯ್ಯಾ" ಅಂದರೆ "ಲಗೇಜು ಜಾಸ್ತಿ ಆದರೆ ಈ ಬಡ್ಡೀಮಗ ಹೊತ್ಕಂಡು ಬರ್ತಾನೆ" ಅಂತ ಹೇಳೀ ಸ್ಕೂಟರ್ ಸ್ಟಾರ್ಟ್ ಮಾಡಿದ. ಒಂದು ಬೈಕು ಒಂದು ಹೋಂಡಾ ಒಂದು ಸ್ಕೂಟರ್ ಸವಾರರು, ಒಂದು ಪಿಳ್ಳೆ ಇದು ತಪಶೀಲು.

ನಾನು ಬರೆಯುವ ಹುನ್ನಾರದಲ್ಲಿ ತಿಂಡಿ ತಿಂದಿರಲಿಲ್ಲ. ಹೊಟ್ಟೆ ಚುರುಗುಟ್ಟುತ್ತಿತ್ತು. ನಾನು ಸೂಚಿಸಿದ ಸಮೀಪದ ಹಾದಿಗೆ ಸಿದ್ಲಿಂಗು "ಸಾ ಆರೂಟನಾಗೆ ಬಲೇ ಟ್ರಾಫಿಕು ಸಾ" ಅಂತ ಹೇಳಿ ಅಡ್ಡ ರಸ್ತೆಗಳನ್ನು ಹಿಡಿದು– ನಾವು ಹೋಗಬೇಕಾದ ಅಂಗಡಿಗೆ ವಿರುದ್ಧ ದಿಕ್ಕಿನಲ್ಲಿ ಹೋರ್ಟುವಿ, ಕೊನೆಗೆ ಅಂಗಡಿಯವನಿಂದ ಪುಷ್ಪಾರ್ಚನೆ ಮಾಡಿಸಿಕೊಂಡು ನಾಗಾರ್ಜುನ ಸೇರುವ ಹೊತ್ತಿಗೆ ಹೊತ್ತು ಹನ್ನೆರಡೂವರೆ ಮೀರಿತ್ತು. ಇಷ್ಟು ಹೊತ್ತಿಗಾಗಲೇ ಸಿದ್ಲಿಂಗೂ "ಮಗಾ ಸಾರ್‌ಗೆ ಕಾಫೀ ಕುಡಿಸಬೇಕಾಗಿತ್ತು. ಕಳ್ಳಾ" ಅಂತ ನೂರು ಬಾರಿ ಲೊಚಗುಟ್ಟಿದ್ದ.

ನಾಗಾರ್ಜುನ ವಸ್ತ್ರಾಲಂಕಾರ ನಾಲ್ಕನೇ ಮಹಡಿಯಲ್ಲಿತ್ತು. ಉಶ್ಯಪ್ಪಾ ಎಂದು ತಿರುತಿರುಗಿ ಮೆಟ್ಟಿಲು ಹತ್ತಿ ಅಂಗಡಿ ಮುಂದೆ ಬಂದೊಡನೆ ಕರೆಂಟ್ ಕೈ ಕೊಟ್ಟಿತು. ಒಳ ಹೊಕ್ಕೆವು ಚಾಳೇಷು ಸಮೀಪದೃಷ್ಟಿ ಪೊರೆ ಆಪರೇಷನ್ನು, ಬಿರುಬಿಸಿಲು ವೃದ್ದಾಪ್ಯ ಎಲ್ಲ ಕೂಡಿ ಇರುವ ಕಣ್ಣೂ ಮಂಜಾಗಿ ಹೋಗಿತ್ತು.

ಆಹಾ.. ಆ ಅಂಗಡಿಯೊಳಗೋ "ಸುತ್ತಮುತ್ತಲು ಸಂಜೆಗತ್ತಲು" ಒಳಗೆ ಮೂರು ಆಕೃತಿಗಳು ಕಂಡ ಹಾಗಾಯಿತು. "ನಮಸ್ಕಾರ ಶಿವಣ್ಣ ಅವರೇ, ಚೆನ್ನಾಗಿದ್ದೀರಾ" ಅಂತ ಬೊಬ್ಬೆಹಾಕಿದೆ. "ಅವರು ಇಲ್ರು, ಪ್ಯಾಟೇಗೆ ಓಗವ್ರೇ. ನೀವು ಅನ್ನೊಂದು ಗಂಟೇಗೆ ಬತ್ತೀನಿ ಅಂದವರು ಒಂದು ಗಂಟೆಗೆ ಬಂದಿದ್ದೀರಾ. ಬಾನ್ವಾರ ಅಂಗಡಿಗೆ ರಜ. ನಿಮಗೋಸ್ಕರ ಅಂಗಡಿ ತೆಕ್ಕೊಂಡು ಕಾಯ್ತಾ ಕುಂತೀವಿ. ಲೇ ಗುರುಪಾದ. ಅದೇನು ಬೇಕೋ ಅವರಿಗೆ ತೆಕ್ಕೊಡಲಾ ಮಸ್ತಾಗಿ ಕ್ಯಾಮೆಗಳು ಕಾಯ್ತಾ ಇವೇ" ಅಂತ ಆ ಗೌಡತಿ ಲೊಟಕಿ ನಿಕಲಾಯಿಸಿದಳು.

ಶುರುವಾಯ್ತು ಆಯ್ಕೆಗಳು. ಕಾಳೇಗೌಡರಿಗೆ ಹಿರಣ್ಯ ಕಶಿಪುವಿನ ವೇಷಭೂಷಣ ವಸ್ತ್ರ– ಆಭರಣ, ಕತ್ತಿ, ಗದೆ.., ಹೂಂ ಸಾರ್ ಗದೆ. ಚಡಾವು, ಕಿರೀಟ ಎಲ್ಲ ಆಯ್ದು ಆಯ್ದು ಮೂಟೆಕಟ್ಟುವ ಹೊತ್ತಿಗೆ ಎರಡೂವರೆ ಗಂಟೆ ಮ॥ರಾ॥ಶ್ರೀ॥ ಶಿವಣ್ಣ ಬಂದರು. ರೇಟಿಗೆ ಚೌಕಾಶಿ ನಡೆಯಿತು. ಇಷ್ಟೆಲ್ಲಾ ನಡೆಯುವಾಗ ಸಿದ್ಲಿಂಗುವಿನ ಕುಮಾರ್ತಿ ಒಂದೊಂದೇ ಚಾಕಲೇಟ್ ತೆಗೆ–ತೆಗೆದು ತಿಂದು ಗೊಣ್ಣೆ ವರೆಸಿಕೊಳ್ಳುತ್ತಾ ಎಂಜಾಯ್ ಮಾಡುತ್ತಿದ್ದಳು. ಕೊನೆಗೂ ಹೊರಟೆವಿ. ಒಂದು ಹೋಂಡಾದಲ್ಲಿ ಒಂದು ಗಂಟು ಸ್ಕೂಟರಿನಲ್ಲಿ ಸಿದ್ಲಿಂಗು ಮಗಳು. ಇನ್ನೊಂದು ಒಂದು ಲಕ್ಷದ ಮೋಟರ್ ಬೈಕು ಸಾರ್ ಅದರಲ್ಲಿ ಒಂದು ಕಟ್ಟು ಕೊತ್ತಂಬರಿ ಸೊಪ್ಪು ಸಹ ಸಾಗಿಸಲಾಗುವುದಿಲ್ಲ. "ಸಾ– ಈ ಗದೇನ ಸೊಲ್ಪ ನೀವು ಇಡ್ಕೊಳ್ಳಿ ಸಾ ಅಂತ ಸಿದ್ಲಿಂಗು ಅಹವಾಲಿನ ಫಲಶ್ರುತಿ ಗದೆ ನನ್ನ ಕೈಗೆ ಬಂತು. ಸೋ ನಾನು ಗದಾಪಾಣಿಯಾಗಿ ಸ್ಕೂಟರ್ ಹಿಂದೆ ಕುಳಿತೆ.

"ಗುರೂ ಈ ಸರ್ಕಲ್‌ನಾಗೆ ದೊನ್ನೆ ಬಿರಿಯಾನಿ ಫೇಮಸ್ಸು ಗುರು ವೊಟ್ಟೆ ಪದಾ ಏಳ್ತಾ ಐತೆ ತಿನ್ನಮಾ" ಅಂತ ಕಾಳೇಗೌಡ "ಸ್ಟೇ" ತಂದರು. ಸೋ ದಿಬ್ಬಣ

ಶ್ರೀ ಕಾಲಭೈರವೇಶ್ವರ ದೊನ್ನೆ ಬಿರಿಯಾನಿ ದರ್ಶಿನಿ ಮುಂದೆ ನಿಂತಿತು ದೊನ್ನೆ ಬಿರಿಯಾನಿ ಪೊಟ್ಟಣಗಳು ಇಟ್ಟಾಡಿದವು. ನಾನು ಜಾಂಬುವಂತನಂತೆ ಒಂದು ಸ್ಟೂಲ್ ಮೇಲೆ ಕುಕ್ಕರಿಸಿದೆ. ಸಿದ್ಲಿಂಗು ಮಗಳಿಗೆ ಬಿರಿಯಾನಿ ತಿನ್ನಿಸಹೋದ. ಅದು ವಲ್ಲೆ ಎಂದಿತು. ಸಿಟ್ಟಿಗೆದ್ದು ಸಿದ್ಲಿಂಗು ಅವಳಿಗೆ ಒಂದು ಗುಮುಕಿ ಮುಂಡೆತ್ತದೆ ತಿಂತ್ಯೋ ಇಲ್ವೋ" ಎಂದು ಗದರಿದ. ಮುಳು ಮುಳು ಕಳ್ಳ ಅಳು ಅಳುತ್ತಾ.. ಗೊಣ್ಣೆ ಸುರಿಸುತ್ತಾ ಅರ್ಧ ಪೊಟ್ಟಣ ಬಿರಿಯಾನಿಯನ್ನು ಆ ಶಿಶುದೈತ್ಯೆ ಭಕ್ಷಿಸಿತು.

ಮತ್ತೆ ಶೋಭಾಯಾತ್ರೆ ಹೊರಟಿತು. ಸಿಗ್ನಲ್‌ಗಳಲ್ಲಿ ಗಾಡಿ ನಿಂತಾಗಲೆಲ್ಲಾ ಗದೆ ಹಿಡಿದ ನನ್ನ ಕಡೆ ಸವಾರರು ವಿಚಿತ್ರ ದೃಷ್ಟಿ ಬೀರುವುದೂ ಸಿದ್ಲಿಂಗು "ಫ್ಯಾನ್ಸಿ ಡ್ರೆಸ್ಸು ಸಾ ಹಿರಣ್ಯ ಕಶಿಪು" ಎನ್ನುವುದೂ ಕೇಳುಗರು ಕುಹಕದ ನಗೆ ಬೀರುವುದೂ ನಡೆದೇ ಇತ್ತು. ಮಧ್ಯೆ ಮಧ್ಯ ಸಿದ್ಲಿಂಗು "ಲೇ ಮಗಾ... ಸಾರ್‌ಗೆ ಕಾಪಿ ಕುಡಿಸಬೇಕು ಕಳ್ಲಾ" ಅಂತ ಪರಾಕು ಹೇಳುವುದೂ ನಡೆದೇ ಇತ್ತು. ಪಯಣ ಸಾಗುತ್ತಿತ್ತು ಇನ್ನೊಂದು ತೊಡಕು ಎರುರಾಯ್ತು ಹೊಸಕೆರೆಹಳ್ಳಿ ಕೆರೆ ಕೋಡಿ ರಸ್ತೆಗೆ ಹೋಗುವ ಬದಲು ಮುಂದಿನ ರಸ್ತೆಗೆ ಹೋಗಿ ಕೆರೆ ಅಂಗಳದ ಒಳಗೇ ಇಳಿದುಬಿಟ್ಟಿದ್ದ. ಕಚ್ಚಾರಸ್ತೆ ನೀರು ತುಂಬಿತ್ತು. ಸಿದ್ಲಿಂಗು ಆ ನೀರಿನಲ್ಲೇ ಸ್ಕೂಟರ್ ಹಾರಿಸಿದ. ನನ್ನ ಅರ್ಧ ಮೈಗೆ ಆ ಗಲೀಜು ನೀರಿನ ಸಿಂಚನ ಸ್ನಾನವಾಯ್ತು. ಜನ್ಮ ಪಾವನವಾಯ್ತು. ಸದ್ಯ ಹೇಗೋ– ಜೋಡಿ ರಸ್ತೆಗೆ ಗಾಡಿ ಹತ್ತಿಸಿದ. ಮನೆ ಹತ್ತಿರ ಹತ್ತಿರ ಬರುತ್ತಿತ್ತು. ಲೇ ಬಡ್ಡೆತ್ತವಾ.. ಸಾರ್ಗೆ ಕಾಪಿ ಕುಡಿಸಬೇಕು ಕಳ್ಲಾ" ಅಂತ ಹೇಳಿ ಮನೆ ಹತ್ತಿರದ ಬೇಕರಿಯಲ್ಲಿ ಕಾಪಿ ಕುಡಿಸಿಯೇ ಬಿಟ್ಟ. ಮನೆ ಸೇರಿ ಗದೆಯನ್ನು ಹಸ್ತಾಂತರಿಸಿ, ನಿಟ್ಟುಸಿರು ಬಿಟ್ಟು ಒಳ ಬಂದರೆ ನನ್ನ ಹೆಂಡತಿ 'ಬಿಂಗೋ ಗೇಮ್ಸ್ ಆಡಲು ಗೆಳತಿಯರ ಮನೆಗೆ ಹೊರಟು ಹೋಗಿದ್ದಳು. ಅಡುಗೆಗಳೆಲ್ಲಾ ಆಗಿ ಐಸ್‌ಕೋಲ್ಡ್ ಆಗಿದ್ದವು. 'ಅದೇ ಉಂಡೇನು ಕದಾ ತೆಗಿ' ಅಂತ ಮುಚ್ಚಿಕೊಂಡು ಅದನ್ನೇ ತಿಂದು, ಕೊಂಚ ಮಲಗೋಣ ಎಂದು ಫ್ಯಾನ್ ಹಾಕಿ ಮಲಗಿದೆ. ಫ್ಯಾನ್ ಮುಷ್ಕರ ಹೂಡಿತು ಆಯಾಸಕ್ಕೆ ಹಾಗೇ ಕಣ್ಣು ತೂಗಿ ಗಾಢ ನಿದ್ರೆ ಹತ್ತಿತು.

ಮರುದಿನ ಮಿ॥ ಸಿದ್ಲಿಂಗು ಫೋನಾಯಿಸಿ "ಸನ್ಮಾನ್ಯ ಶ್ರೀ ಕಾಳೇಗೌಡರ ಹಿರಣ್ಯ ಕಶಿಪು ವೇಷಕ್ಕೆ ಫ್ಯಾನ್ಸಿ ಡ್ರೆಸ್ ಕಾಂಪಿಟಿಷನ್‌ನಲ್ಲಿ ಪಶ್ಟ್ ಪ್ರೈಜ್ ಬಂತು ಸಾ" ಎಂದು ಅರುಹಿ ನನಗೆ ವಂದನಾರ್ಪಣೆ ಸಲ್ಲಿಸಿದ. ■

---

## ಲಿಮಿರಿಕ್ಸ್

– ಬಿ.ಎಸ್. ರವಿಕುಮಾರ್

### ಒಗಟು

ಅದು ಮೇಲೆ ಹೋಗುತ್ತೆ
ಕೆಳಗೂ ಬರುತ್ತೆ
ಆದರೂ ಕದಲೋದಿಲ್ಲ ಒಂಚೂರೂ
ಥಟ್ಟಂತ ಹೇಳು ಏನಿರಬಹುದು
ಗೊತ್ತಾಗಲಿಲ್ವಾ? ಬೆಟ್ಟದ್ ರಸ್ತೆ!

# ಕಂಡೋರ್ಮನೆಯಿಚಾರ..

● ನಳಿನಿ ಸೂರ್ಯಪ್ರಕಾಶ್

ಮನೆಗೆಲಸದ ನರಸಿ ಕೊನೆಯದಾಗಿ ಬಟ್ಟೆ ಒಗೆದು ಒಣಹಾಕ್ತಿದ್ದಂಗೆ, ಇತ್ತ ಪದ್ದಿ ಇಬ್ಬರಿಗೂ ಕಾಪಿ ಬಿಸಿಗಿಡ್ತಾಳೆ. ನರಸಿ ಅಡುಗೆಮನೆ ಬಾಗಿಲ ಹತ್ರ ಗೋಡೆಗೊರಗಿ ಕೂರ್ತಿದ್ದಂಗೆ, ಬಿಸಿ ಕಾಫಿ ಎರಡು ಲೋಟಕ್ಕೆ ಸುರಿದು, ನರಸಿಗೊಂದು ಕೊಡ್ತಾ, ತಾನೊಂದು ಇಟ್ಕೊಂಡು ಪದ್ದಿ ಅಡುಗೆಕಟ್ಟೆಗೊರಗಿ ನಿಲ್ತಾಳೆ. ಒಂದು ಕಾಲುಗಂಟೆ, ಸೊರ್..ಸೊರ್.. ಅಂತ ಬಿಸಿ ಕಾಫಿ ಹೀರ್ತಾ ಇಬ್ರು ಅವರಿವರ ಮನೆ ವಿಷಯ ಹರಟ್ತಾರೆ... ಇನ್ನೂ ಬಾಕಿ ಇರೋ ಐದು ಮನೆಗೆಲಸ ನೆನಪಾಗ್ತಿದ್ದಂಗೆ , ನರಸಿ '"ತಗೊಳಕ್ಕ, ನಮಗ್ಯಾಕಂತೀನಿ ಇನ್ನೊಬ್ರಿಚಾರ......'" ಅಂತ ಪದ್ದೀದೂ ಲೋಟ ಇಸ್ಕೊಂಡು, ಎರಡನ್ನೂ ತೊಳೆದು, ಬೋರಲ್ಹಾಕಿ, ತನ್ನ ವ್ಯಾನಿಟಿ ಬ್ಯಾಗು ಭುಜಕ್ಕೇರಿಸಿಗೊಂಡು, "ಬರ್ಲಾಕ್ಕಾ......" ಅನ್ತಾ ಸರ್‍ರಂತ ಹೊರಟು ಬಿಡ್ತಾಳೆ.... ಇದು ದಿನನಿತ್ಯದ ಪರಿಪಾಠ.

ಮೊನ್ನೆ, ತನ್ನ ಬ್ಯಾಗಿಂದ ಸ್ಮಾರ್ಟ್ ಫೋನ್ ತೆಗೆದವಳೆ "ನನ್ನ ಮಗ್ಳು ಈ ಸಲ ಬಿಎ ಸೇರ್ಕಂಡವ್ಳಲ್ಲಕ್ಕ.... ಅವ್ಳುದು ಒಂದೇ ಗಲಾಟೆ... ಅದ್ಕೇಯ.....ಚೀಟಿ ದುಡ್ ಬಂತು...ಮೊಬೈಲ್ ತೆಕ್ಕೊಟ್ಟೆ.. ಅದೇನೊ ಗುರೂಪು ಮಾಡವ್ಳೆ.. ನೋಡಿ...." ಮೊಬೈಲು ಕೈಗೆತ್ತಿಗೊಂಡು ಪದ್ದಿ ಬೆರಳಾಡಿಸಿದಳು. ವಾಟ್ಸಾಪಿನಲ್ಲಿ "ಮೇಡ್ ಮೈ ಡೇ.." ಅಂತ ಪದ್ದಿಯೂ ಸೇರಿ ಹತ್ತಾರು ಜನರಿರುವ ಗ್ರೂಪು...

"ಇನ್ಮ್ಯಾಲೆ ನಾನು ಲೇಟಾಗಿ ಬರೋದು. ರಜ ತೊಗೊಳ್ಳಾದು ಎಲ್ಲಾ ಇದ್ರಾಗ್ ನನ್ನ ಮಗಳೇ ಆಕ್ತಾಳೆ.. ನಂಗೂ ಎಲ್ಲ ಏಳ್ಕೊಡ್ತಳಂತೆ... ಮತ್ತೆ ಅಕ್ಕೋ...ಇನ್ನೊಂದೆರ್ಡು ಮಾತು.. ನಂಗೇ ಅಂತ ಕೈತೊಳ್ಕಳಕ್ಕೆಂತ ಒಂದು ಸೋಪು ಇಟ್ಬುಡಿ. ಕೆಲ್ಸಕ್ ಮುಂಚೆ,,,ಆಮೇಲೊಂದ್ಸಲ ತೊಳ್ಕಳಾದು ಅಂತ. ಟೀವೀಲೂ ಬಡ್ಕಂತಿರ್ತಾರಲ್ಲ...ಕೀಟಾಣು.. ಕೀಟಾಣು ಅಂತ...ಅದ್ಕೇಯ..ಮತ್ತ್ ನೋಡೋರ್ಗೂ ನಾವು ನೀಟು ಅಂತಾಗತ್ತಲ್ವ..?

ಪದ್ದಿ ನಕ್ಕು ."ತಥಾಸ್ತು " ಅಂತ ಅಭಯಹಸ್ತ ತೋರಿಸಿದ್ಲು..

"ಅಕ್ಕೋ..." ಮತ್ತೆ ನರಸಿಯ ರಾಗ. "ನಿಮ್ ಕಡೆಯಿಂದ ಐವತ್ ರುಪ್ಯೆ ಕೊಡ್ರಕ್ಕ.. ನನ್ನ ಆರು ಮನೆಯಿಂದ್ಲೂ ತಲಾ ಐವತ್ತು ತೊಗೊಂಡು, ಒಂದು.....ಅದೇ....ಕೆಲ್ಸ ಮಾಡ್ವಾಗ ಕಟ್ಗಂತಾರಲ್ಲ...."

"ಏಪ್ರನ್ ಅನ್ನು..."

"ಆ! ಅದೇಯ.. ಏರ್ಪನ್ನು...!" ಇನ್ಮ್ಯಾಲೆ ನಾನು ನನ್ ಬಟ್ಟೆ ಕೊಳೆ ಆಗ್ದಿದ್ದಂಗೆ ಅದ್ನ ಕಟ್ಗಂಡೇ ಕೆಲ್ಸ ಮಾಡಣಾಂತ.."

"ನಿನ್ನ ಐಡಿಯ ಏನೊ ಚೆನ್ನಾಗಿದೆ ಕಣೆ... ಆದ್ರೆ ನೀನು ಇಷ್ಟು ಪ್ರೊಫೆಷನಲ್ಲಾದ್ರೆ ನಿಂಗೆ ನಾವು ಸಂಬಳ ಕೊಟ್ಟು ಪೂರೈಸಕ್ಕಾಗತ್ತೇನೆ....? ಏನೋಮ್ಮಾ.. ನಮ್ಮೆಜಮಾನ್ರು ಹೇಗೂ ಈ ವರ್ಷ ವಿಆರೆಸ್ ತೊಗೊಂಡುಬಿಡ್ತಾರೆ...ಒಂದ್ ಏಪ್ರನ್ ಹೊಲ್ಸಿ, ಅವ್ರಿಗೇ ಕಟ್ತೀನ್ಬಿಡು....!"

" ಏ ಬುಡ್ತು ಅನ್ನಕ್ಕಾ...... ನಾನೇನು ಈಗ್ಲೇ ಸಂಬಳ ಜಾಸ್ತಿ ಮಾಡು ಅಂತಿದೀನ..? ದೀಪಾವಳಿಗೆ ಹೇಗೂ ನೀವು ಮಾಡೇಮಾಡ್ತೀರ.... ಅದ್ಬುಡಿ.... ಅಯ್ನೋರು ಓದ್ವರ್ಸ ತಾನೆ ತೀಫ್ ಮೆನೆಜರ್ ಆಗಿದ್ದಲ್ವ..?"

"ಲೇ....ಚೀಫ್ ಮ್ಯಾನೇಜರ್ ಅನ್ನು...ಆಫೀಸಿನಲ್ಲಿ ಅವ್ರಿಗೆ ಟೆನ್ಷನ್ನು ಜಾಸ್ತಿ ಅಂತೆ. ಇರೋದಿನ್ನೆರಡು ವರ್ಷ ಸರ್ವಿಸು..ಮತ್ತಿನ್ಯಾರು ಪ್ರಮೋಷನ್ ಕೊಡ್ತಾರೆ ಅವ್ರಿಗೆ..

ರಿಟೈರ್ಮೆಂಟು ಕೊಟ್ಟು, ಟೆನ್ಷನ್ನಿಲ್ದೆ ಪೆನ್ಷನ್ನು ತೊಗೊಂಡು, ಆರಾಮಾಗಿ ಮದುವೆ, ಮುಂಜಿ, ತಿಥಿಗಳ್ನೆಲ್ಲಾ ಅಟೆಂಡ್ ಮಾಡ್ಕೊಂಡು ಹಾಯಾಗಿರಣಾಂತಿದಾರೆ..

ನರಸಿ ಶುರುವಿಟ್ಟು..." ಅದೇನ್ ಆಫೀಸೊ ....ಟೆನ್ಷನ್ನೊ...ಮುಂದಿನ ಬೀದೀಲಿ ಆ ದೊಡ್ಡ ಅಪಾರ್ಟಮೆಂಟಿಲ್ವಕ್ಕ... ಅಲ್ಲಿ ನಾಕ್ನೆ ಮಾಡೀಲಿ ಒಂದ್ಮನೆ ಕೆಲ್ಸ ಮಾಡ್ತೀನ...ಗಂಡ ಎಂಡ್ತಿ ಇಬ್ರೇಯ..ಇನ್ನೂ ಮಕ್ಕಿಲ್ಲ....ಯಾವ್ದೊ ದೊಡ್ ಕೆಲ್ಸದಾಗವ್ರೆ ಇಬ್ರೂನು..ಮೂರೊತ್ತೂ ಕೆಲ್ಸ ಕೆಲ್ಸ.. ಆಯಮ್ಮಂಗಂತೂ ಉಣ್ಣಕ್ಕೇ ಪುರುಸೊತ್ತಿಲ್ಲ...ಇನ್ನು ಬೇಯಿಸೊದ್ಯಾವಾಗ...? ಅದ್ಕೇ ನನ್ನ ಅಡ್ಗೇನೂ ಮಾಡ್ತೀಯ ಅಂದ್ರು.. ಒಪ್ಗೊಂಡಿದೀನಿ..ಚಪಾತಿ, ಮುದ್ದೆ..ಟನ್ಷನ್ನಲ್ಲಿ ಬೇಗ ಸಕ್ರಕಾಯಿಲೆ ಬಂದ್ಬುಟ್ರೆ ಅಂತ ಬಯಾ ಪಾಪ..ಮದ್ಯಾನ ಓಗಿ ಬರ್ತೀನಿ. ಮನೆ ಬೀಗದ ಕೈ ಕೆಳಗಡೆ ವಾಚ್ಮೆನ್ನತ್ರ ಕೊಟ್ಟಿರ್ತರೆ...ನನ್ನ ಮಗ್ಳು ಏಳವ್ಳೆ.. ಈ ಮೊಬೈಲ್ನಾಗೆ ಒಸಾ ಅಡಿಗೆ ಮಾಡೋದು ಎಲ್ಲ ಅದೇನೊ ಊಟೂಬ್ನಾಗೆ ನೋಡ್ಕೋಬೋದಂತಲ್ಲ...ಒಸಾ ಅಡಿಗೆ ಕಲಿ ಅಂದವ್ಳೆ.. ನಾನು ಚೆನ್ನಾಗಿ ಅಡಿಗೆ ಮಾಡ್ತೀನಿ ಅಂತ ಆ ಯಮ್ಮಾನೂ ಏಳ್ತು...ಒಸ ಒಸ ಅಡಿಗೆ ಕಲ್ತು ಇನ್ನು ನಾಕಾರು ಮನೆ ಒಪ್ಗೊಂಡ್ರೆ ಇನ್ನೂ ನಾಕ್ಕಾಸು ಜಾಸ್ತಿ ದುಡಿಬೋದಲ್ವ..ಕ್ಕಾ...?

"ನಿಂದು, ನಿನ್ನ ಮಗಳದ್ದು ಒಳ್ಳೆ ಐಡಿಯ ಕಣೆ ನರಸಿ. ಆದ್ರೆ ನೀನು ಕಸಮುಸುರೆಯಿಂದ ಅಡಿಗೆ ಕೆಲಸಕ್ಕೆ ಪ್ರಮೋಷನ್ ತಗೊಂಡ್ರೆ ನಮ್ಮನೆ ಗತಿಯೇನೆ? ಈ ಕಾಲ್ದಲ್ಲಿ ನಂಬಿಕಸ್ಥ ಕೆಲ್ಸದೋರು ಸಿಗೋದೆ ಕಷ್ಟ...ನೀನು ಹೇಳೋದು ನೋಡಿದ್ರೆ ಇನ್ನೆಷ್ಟು ದಿನಾನೊ ನಮ್ಮನೆ ಋಣ ನಿಂಗೆ...?

"ಅಯ್ಯೋ ಅಂಗ್ಯಾಕಂತೀರಕ್ಕ...ಅದ್ಬುಡಿ..ಈ ಬೀದಿ ಕೊನೆ ಮನೆ ಇಲ್ವ..ಅದೇ ಆ ಅಜ್ಜಿ ತಾತ ಇಬ್ರೆ ಇರಾದು..ಏನೊ ಅವ್ರ ಪುಣ್ಯ..ಆ ತಾತ ದೊಡ್ಡ ಕೆಲ್ಸದಾಗಿತ್ತಲ್ಲ.. ಆ ಆಫೀಸಿನ ಕೆಲ್ಸದೋನೆ ಆ ಯೆಂಕಟೇಸ.. ತುಂಬ ನಿಯತ್ತಿನ ಮನ್ಸ.. ಅವ್ರ ಮನೇಲೆ ಜೊತೆಗಿದಾನೆ..ಅವ್ರ ಮಕ್ಕಳಿಬ್ರೂ ಅಮೇರಿಕದಲ್ಲವ್ರೆ....ಪಾಪ ಅಜ್ಜಿ ತಾತಂಗೆ ಬಯಾ ಜಾಸ್ತಿ..ಯಾವಾಗ್ಲೊ ನನ್ನತ್ರ ಯೇಳಿದ್ರು..ಕಳ್ಳ ಗಿಳ್ಳ ಬಂದ್ರೆ ಅಂತ ತಲೆ ದಿಂಬಿನ ಕೆಳಗೆ ಚಾಕು ಇಟ್ಕಂಡೇ ಮಲಗ್ತಾರಂತೆ..ಅದ್ಕೇ ನಾನಂದೆ,,..ನೀವು ಕಳ್ಳಂಗೆ ಚಾಕು ಆಕೋಕ್ಮುಂಚೆ ಆ ಚಾಕುಯಿಂದ್ಲೇ ನಿಮ್ ಕುತ್ತಿಗೆ 'ಕಚಕ್' ಅನ್ನಿಸ್ತಾನಟ್ಟೇಯ....ಅಂತ..! ಪಾಪ ಅಜ್ಜಿ ಇನ್ನೂ ಬಯ ಬುದ್ಬುಟ್ರು...ಒಂದ್ವಾರ ಆಯ್ತು...ಅವ್ರ ಮೊದಲ್ನೆ ಮಗ ಅಮೆರಿಕದಿಂದ ಬಂದವರೆ.. ಇದೆಲ್ಲ ಗೊತ್ತಾಗಿ, ಚಾಕು ಗೀಕು ಏನು ಬೇಡ, ಅದೇನೊ ಪುಸ್ ಪುಸ್ ಅಂತ ಮಕಕ್ಕೆ ಒಡೀತಾರಲ್ಲ...ಅದನ್ನ ತಂದ್ಕಟ್ಟವ್ರೆ....ಅದ್ನೇನಾದ್ರು ಕಣ್ಗೆ ಮಕಕ್ಕೆ ಒಡೆದ್ರೆ ಮಕಾ ಮೂತಿ ಉರಿ ಕಿತ್ಗಳತಂತಕ್ಕಾ "

" ಓ... ಪೆಪ್ಪರ್ ಸ್ಪ್ರೇ...ಕಣೆ.."

"ಆ ಅದೇಯ. ಮೂರು ಬಾಟ್ಲಿ ತಂದ್ಕೊಟ್ಟವ್ರೆ...ರೂಮು, ಅಡ್ಗೆಮನೆ, ಆಲು...ಮೂರು ಕಡೇನು ಒಂದೊಂದು ಬಾಟ್ಲು ಇಟ್ಟವ್ರೆ....ಅದ್ಕೆ ನಾನು ಒಂದ್ ಯೋಚ್ನೆ ಮಾಡ್ದೆ...ನಾನೂ ಅವ್ರಿವ್ರ ಮನೆಗೋಗ್ತಿರ್ತೀನಿ. ನನ್ ಉಸಾರಲ್ ನಾನಿರ್ಬೇಕಲ್ಲಕ್ಕ....ಮದುವೆ ನಡದೈತಲ್ಲ....ಇನಾಮು ಅಂತ ನಂಗೊಂದು ಅದೇ ಇಸ್ಪ್ರೆ ಕೊಡಿ ಅಂತ ಕೇಳೀನಿ. ಈ ಗಂಡಸರನ್ನ ನಂಬಕ್ಕಾಗಲ್ಲಕ್ಕ....ಯಾವ ಉತ್ತದಲ್ಯಾವ್ ಹಾವಿರ್ತೈತೊ ಯಾರಿಗೊತ್ತು...? ಅಲ್ವಾಕ್ಕಾ.....? ಒಂದು ಬಾಟ್ಲಿ ನಂಗೂ ಕೊಡ್ತೀನಿ ಅಂದವ್ರೆ....

"ಹೌದೇನೆ ನರಸಿ...?! " ಪದ್ದಿಯ ಉದ್ಗಾರ....ಕಾಫಿ ಲೋಟ ನರಸಿ ಕೈಗಿಟ್ಟು..

"ಅಯೋ ಬುಡೀಕ್ಕಾ.. ನಮಗ್ಯಾಕಂತೀನಿ ಕಂಡೋರ್ಮನೆಯಿಚಾರ...." ಅಂತ ಲೋಟಗಳ್ನ ತೊಳೆದು ಬೋರಲ್ಹಾಕಿ, ವ್ಯಾನಿಟಿ ಬ್ಯಾಗು ತೊಗೊಂಡು, "ಬರ್ಲಾಕ್ಕಾ..." ಅಂತ ನರಸಿ ಹೊರಟೇಬಿಟ್ಟು.

■

# ಬಾಳ್ಳುಪೇಟೆ ಭಾಗೀರತಮ್ಮ ಪ್ರಸಂಗ

● ವತ್ಸನ

ಅದೊಂದು ಬಿಡುವಿಲ್ಲದ ದಿನ. ಎಲ್ಲಾ ಕೆಲಸ ಮುಗಿಸಿ ಮನೆಗೆ ಬಂದು ಉಸ್ಸಪ್ಪಾ ಅಂತ ಟಿ.ವಿ ಮುಂದೆ ಕೂರೋ ಹೊತ್ತಿಗೆ ಶರಲೇಖನೂ ಆಗ ತಾನೇ ಮನೆಗೆ ಹಿಂತಿರುಗಿದ್ದ. ''ಟಿ.ವಿ. ಆನ್ ಮಾಡು. ನ್ಯೂಸ್ ನೋಡೋಣ'' ಅಂದ ಶರಲೇಖ. ಆನ್ ಮಾಡಿದೆ. ರಾಹುಲ್ ಯಾವುದೋ ಭಾಷಣ ಮಾಡುತ್ತಿದ್ದ ವಿಡಿಯೋ ಕ್ಲಿಪ್ ಬಿತ್ತರವಾಗುತ್ತಿತ್ತು. ''ಅಯ್ಯೋ ಸಾಕಾಯ್ತು ಈ ರಾಜಕೀಯ, ಆಫ್ ಮಾಡು ಮಾರಾಯ. ಸುಮ್ಮನೆ ಹರಟೋಣ'' ಅಂತ ಶರಲೇಖ ಹೇಳಿದಾಕ್ಷಣ ನಾನು ಟಿ.ವಿ. ಆರಿಸಿದ ನಂತರ, ಹರಟಲು ಪ್ರಾರಂಭಿಸಿದೆವು. ಮಾತುಕತೆ ಪೆದ್ದುತನದ ವಿಶ್ಲೇಷಣೆಗೆ ತಿರುಗಿತು. ''ಪೆದ್ದುತನದಲ್ಲಿ ಎರಡು ಬಗೆ ಇರುತ್ತಂತೆ. ಮೊದಲನೆಯದು ನಮಗೇನೂ ಗೊತ್ತಿಲ್ಲದಿದ್ರೂ, ಗೊತ್ತಿಲ್ಲ ಅನ್ನೋ ಸಂಗತಿ ತಿಳಿದಿರೋದು ಬಿ ಗ್ರೇಡ್ ಪೆದ್ದುತನ. ಎ ಗ್ರೇಡ್ ಪೆದ್ದುತನದವರಿಗೆ ತಮಗೇನೂ ತಿಳಿದಿಲ್ಲ ಅನ್ನೋ ವಿಷಯಾನೇ ತಿಳಿದಿರೋದಿಲ್ಲ. ತಾವೇ ಮೇಧಾವಿಗಳು ಅನ್ನೋ ಭ್ರಮೆ ಈ ಜನಕ್ಕೆ ಮಿಸ್ ಪ್ಲೇಸ್ಡ್ ಆತ್ಮ ವಿಶ್ವಾಸಾನ ತುಂಬಿರುತ್ತೆ. ಈ ಪೆದ್ದುತನದ ಬಗ್ಗೆ ನ್ಯೂಯಾರ್ಕಿನ ಕಾರ್ನೆಲ್ ವಿಶ್ವವಿದ್ಯಾಲಯದ ಡನ್ನಿಂಗ್ ಮತ್ತು ಕ್ರೂಗರ್ ಇಬ್ಬರೂ ಸೇರಿ ಸ್ಟುಪಿಡಾಲಜಿ ಅಂತ ಒಂದು ಪ್ರಬಂಧಾನೇ ಬರೆದಿದ್ದಾರಂತೆ'' ''ಅವರೇನು ಹೇಳ್ತಾರೆ, ಈ ಬಗ್ಗೆ?'' ಅಂತ ನಾನು ಕುತೂಹಲದಿಂದ ಕೇಳಿದೆ.

''ನಾವು ಎ ಗ್ರೇಡೋ, ಬಿ ಗ್ರೇಡೋ ತಿಳಿದುಕೊಳ್ಳೋಕ್ಕೆ ಒಂದು ಪ್ರಶ್ನಾವಳಿ ತಯಾರಿಸಿದ್ದಾರೆ ಅವರು. ಅದರ ಎಲ್ಲ ಪ್ರಶ್ನೆಗಳಿಗೆ ಹೌದು ಅಂತ ಉತ್ತರ ಬಂದರೆ ನಾವು ಎ ಗ್ರೇಡ್ ಅನ್ನೋದು ಗ್ಯಾರಂಟಿ. ಒಂದೆರಡು ಸ್ಯಾಂಪಲ್ ಪ್ರಶ್ನೆಗಳು. ಮೊದಲಿಗೆ, ನೀವು ಲಿಫ್ಟ್‌ಗಾಗಿ ಕಾಯುತ್ತಿರುವಾಗ ಲಿಫ್ಟ್ ಬರುವುದು ತಡವಾಗುತ್ತಿದ್ದರೆ, ಪದೇ ಪದೇ ಲಿಫ್ಟ್ ಬಟನ್ ಒತ್ತುವುದರಿಂದ ಲಿಫ್ಟ್ ಬೇಗ ಬರುತ್ತದೆಂದು ನಂಬಿದ್ದೀರಾ? ಎರಡನೆಯ ಪ್ರಶ್ನೆ. ನಿಮ್ಮ ಜೇಬನ್ನು ಪದೇ ಪದೇ ಮುಟ್ಟಿಕೊಳ್ಳುವುದರಿಂದ ಕಾಣೆಯಾಗಿರುವ ಬೀಗದ ಕೈಯಾ ಪರ್ಸ್ ಮತ್ತೆ ಪ್ರತ್ಯಕ್ಷವಾಗುತ್ತೆಂಬುದು ನಿಮ್ಮ ನಂಬಿಕೆಯೇ?......''

ಶರಲೇಖ ಮಾತನಾಡುತ್ತಿದ್ದಂತೆಯೇ ನನ್ನ ಮೊಬೈಲ್ ಟ್ರಿನ್ ಗುಟ್ಟಿತು. ಆ ಕಡೆಯಿಂದ ಐಶ್ವರ್ಯಾ ಮಾತನಾಡುತ್ತಿದ್ದಳು. ''ಅಂಕಲ್, ನಮ್ಮಪ್ಪ ನಿಮಗೆ ಫೋನ್ ಮಾಡಲು ಹೇಳಿದ್ರು. ಒಂದು ದೊಡ್ಡ ಸಮಸ್ಯೆ ನಮಗೆ ಎದುರಾಗಿದೆ. ಶರಲೇಖ ಅಂಕಲ್‌ನೂ ಕರೆದುಕೊಂಡು ನಮ್ಮ ಎಸ್ಟೇಟ್‌ಗೆ ನಾಳೆನೇ ಬರುಕ್ಕಾಗುತ್ಯೇ? ದುಷ್ಯಂತ್ ಈಗಾಗಲೇ ಬೆಂಗಳೂರಿನಲ್ಲಿದ್ದಾನೆ. ಬೆಳಗ್ಗೆನೇ ನಿಮ್ಮ ಮನೆಗೆ ಬರ್ತಾನೆ'' ಅಂತ ಐಶ್ವರ್ಯ ಬಡಬಡಿಸಿದಳು. ಐಶ್ವರ್ಯಾ ನನ್ನ ಆಪ್ತ ಗೆಳೆಯ ಮಂಜುಗೌಡನ ಮಗಳು. ಬಾಳ್ಳುಪೇಟೆ ಹತ್ತಿರದ ಧವಳಗಿರಿ ಕಾಫಿ ಎಸ್ಟೇಟಿನ ಮಾಲಿಕ ಮಂಜುಗೌಡ. ಸ್ಪೀಕರ್ ಫೋನ್ ಆನ್ ಆಗಿದ್ದರಿಂದ ಶರಲೇಖ ಕೂತಲ್ಲಿಂದಲೇ ಥಂಬ್ಸ್ ಅಪ್ ಮಾಡಿ ತನ್ನ ಒಪ್ಪಿಗೆ ಸೂಚಿಸಿದ.

''ಖಂಡಿತ ಬರ್ತೀವಿ ಐಶ್ವರ್ಯಾ. ದುಷ್ಯಂತ್‌ನ ಮೊಬೈಲ್ ನಂಬರ್ನ ವಾಟ್ಸಪ್ ಮಾಡು. ಅವನೊಂದಿಗೆ ಮಾತನಾಡಿ ಹೊರಡುವ ವ್ಯವಸ್ಥೆ ಮಾಡುವೆ'' ಅಂತ ಐಶ್ವರ್ಯಾಳಿಗೆ ಭರವಸೆ ನೀಡಿದೆ.

ಮಾರನೆಯ ಬೆಳಗ್ಗೆ ಆರು ಘಂಟೆಗೇ ಹೊರಟು ಕುಣಿಗಲ್- ಹಾಸನ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದೆವು. ದುಷ್ಯಂತ್‌ನ ಇನ್ನೋವಾ ಭರದಿಂದ ಸಾಗುತ್ತಿತ್ತು. ದುಷ್ಯಂತ್ ನನಗೆ ಹೊಸ ಪರಿಚಯ. ಹಾಗಾಗಿ ಮಂಜುಗೌಡನ ಸಮಸ್ಯೆ ಬಗ್ಗೆ ಇವನನ್ನು ಕೇಳಲು ಸಂಕೋಚವೆನಿಸಿತು. ದುಷ್ಯಂತನೇ ಶುರುಮಾಡಿದ. ''ವತ್ಸನ ಅಂಕಲ್, ಐಶ್ವರ್ಯಾ ನಿಮ್ಮಿಬ್ಬರ ಬಗ್ಗೆ ಯಾವಾಗ್ಲೂ ಮಾತಾಡ್ತಾನೇ ಇರ್ತಾಳೆ. ನಮ್ಮ ಮಾವನವರಿಗಂತೂ ನಿಮ್ಮಿಬ್ಬರ ಬಗ್ಗೆ ಅಚಲ ನಂಬಿಕೆ ಹಾಗೂ ಗೌರವ. ನೀವು ಬರಲು ಒಪ್ಪಿದ್ದು ಒಂದು ದೊಡ್ಡ ರಿಲೀಫ್ ನಮಗೆಲ್ಲಾ'' ಅಂದ ದುಷ್ಯಂತ್. ಐಸ್ ಬ್ರೇಕ್ ಆದನಂತರ ಶರಲೇಖನೇ ಮಾತು ಪ್ರಾರಂಭಿಸಿದ. ''ದುಷ್ಯಂತ್, ಈ ಪ್ರಯಾಣದ ಸಮಯದಲ್ಲೇ ನೀನು ನಿಮ್ಮ ಕುಟುಂಬದ ಬಗ್ಗೆ ಒಂದು ಕಿರು ಪರಿಚಯ ಕೊಟ್ಟು, ಸಮಸ್ಯೆ ಏನು ಅನ್ನೋದನ್ನ ಸಂಕ್ಷಿಪ್ತವಾಗಿ ಹೇಳಿದರೆ ಊರು ಸೇರೋ ಹೊತ್ತಿಗೆ ಮುಂದಿನ ಕ್ರಮದ ಬಗ್ಗೆ ಸ್ವಲ್ಪ ಯೋಚಿಸೋಕ್ಕೆ ಅನುಕೂಲವಾಗುತ್ತೆ'' ಅಂತ ಸೂಚಿಸಿದ. ''ಖಂಡಿತ ಅಂಕಲ್, ನಮ್ಮ ಮಾವ ಮಂಜುಗೌಡರು ಧವಳಗಿರಿ ಕಾಫಿ ಎಸ್ಟೇಟಿನ ಮಾಲಿಕರು. ಅವರಿಗೆ ಇಬ್ಬರು ಮಕ್ಕಳು. ಸಿದ್ಧಾರ್ಥ್ ಅವರು ಮಗ, ಇಲೆಕ್ಟ್ರಾನಿಕ್ ಇಂಜಿನಿಯರ್. ಅಮೆರಿಕೆಯಲ್ಲಿ ವಾಸ. ಮಗಳು ಐಶ್ವರ್ಯಾ, ಸಿದ್ಧಾರ್ಥನ ತಂಗಿ. ಮ್ಯಾನೇಜ್ಮೆಂಟ್ ಓದಿ, ಈಗ ಎಸ್ಟೇಟನ್ನು ನಿರ್ವಹಿಸೋದಕ್ಕೆ ತನ್ನ ತಂದೆಗೆ ಸಹಾಯವಾಗಿದ್ದಾಳೆ. ನಾನು ವೃತ್ತಿಯಲ್ಲಿ ಸಸ್ಯಶಾಸ್ತ್ರ ವಿಜ್ಞಾನಿ. ಕಾಫಿ ಬೆಳೆಗೆ ಸಲಹೆಗಾರನಾಗಿ ಇಲ್ಲಿ ಸೇರಿದ ನಂತರ ಐಶ್ವರ್ಯಾಳ ಕೈ ಹಿಡಿಯುವ ಸೌಭಾಗ್ಯವೂ ನನ್ನದಾಯಿತು. ನಮ್ಮ ಅತ್ತೆ ಭಾಗೀರತಿಬಾಯಿ ಕಳೆದ ವರ್ಷ ತೀರಿಕೊಂಡರು''.

''ಸಿದ್ಧಾರ್ಥನಿಗೆ ಮದುವೆ?'' ಶರಲೇಖ ಪ್ರಶ್ನಿಸಿದ.

ದುಷ್ಯಂತ್ ಮೊದಲ ಬಾರಿಗೆ ಉತ್ತರಿಸಲು ಸ್ವಲ್ಪ ಹಿಂದೇಟು ಹಾಕಿದ್ದನ್ನು ನಾನು ಗಮನಿಸಿದೆ. ''ಮದುವೆ ಆಗಿದೆ. ಅಮೆರಿಕನ್ ಹುಡುಗಿ. ಕ್ಲಾರಾ''

''ಸರಿ ಈಗ ಸಮಸ್ಯೆ ಏನು ಅಂತ ಹೇಳಲಾದೀತೆ?'' ಶರಲೇಖನದು ಯಾವಾಗಲೂ ನೇರವಾಗಿ ಮಾತನಾಡುವ ಪ್ರವೃತ್ತಿ.

ದುಷ್ಯಂತ್ ಈಗ ನಿಜವಾಗಿ ಇಬ್ಬಂದಿಯಲ್ಲಿರುವಂತೆ ಕಂಡಿತು.

''ನಿಜ ಹೇಳಬೇಕೆಂದರೆ ಇದು ನೀವು ಪರಿಹರಿಸಬಲ್ಲ ಸಮಸ್ಯೆಯೇ ಅಲ್ಲ, ತಪ್ಪು ತಿಳಿಯ ಬೇಡಿ. ಸಾವಧಾನದಿಂದ ನನ್ನ ಮಾತನ್ನು ಕೇಳಿಸಿ ಕೊಂಡರೆ ನೀವೂ ಸಹಾ ಈ ಮಾತನ್ನು ಒಪ್ಪುತ್ತೀರ'' ಅಷ್ಟು ಹೊತ್ತಿಗೆ ನಾವು ಹಾಸನ ದಾಟಿ ಬಾಳ್ಳುಪೇಟೆಗೆ ಬಂದಿದ್ದೆವು. ಹೋಟೆಲ್ ಸಾಯಿ ಪ್ಯಾಲೇಸ್‌ನಲ್ಲಿ ಕಾಫಿ ಕುಡಿದು ಮತ್ತೆ ಸಕಲೇಶಪುರದ ಹಾದಿ ಹಿಡಿದೆವು.

ದುಷ್ಯಂತ್ ತನ್ನ ಮಾತನ್ನು ಮುಂದುವರಿಸಿದ. ''ನಮ್ಮ ಮೂಲಮನೆಯ ಪಕ್ಕದಲ್ಲಿ

ಒಂದು ಪುಟ್ಟ ಕಾಟೇಜು ಇದೆ. ಅದರಲ್ಲೊಂದು ಪುಸ್ತಕ ಭಂಡಾರ. ನಮ್ಮ ಅತ್ತೆ ಪುಸ್ತಕ ಪ್ರೇಮಿ. ಹಾಗಾಗಿ ಅವರು ತುಂಬಾ ಸಮಯವನ್ನು ಅಲ್ಲೇ ಕಳೆಯುತ್ತಿದ್ದರು. ಅವರು ತೀರಿಕೊಂಡ ಮೇಲೆ ಅಲ್ಲಿಗೆ ಯಾರೂ ಹೋಗುತ್ತಿರಲಿಲ್ಲ. ಮೂರು ತಿಂಗಳ ಹಿಂದೆ ಒಂದು ಅಮಾವಾಸ್ಯೆಯ ರಾತ್ರಿ ಹನ್ನೆರಡು ಘಂಟೆಗೆ ಸರಿಯಾಗಿ ಯಾರೋ ಅಳುತ್ತಿರುವ ಶಬ್ದ ಆ ಕಾಟೇಜಿನಿಂದ ಬರಲು ಶುರುವಾಯಿತು. ನಾನು ಟಾರ್ಚ್ ಹಿಡಿದು ಕಾಟೇಜಿನ ಬಳಿ ಹೋದೆ. ಒಳಗಿನಿಂದ ಅದೇ ಅಳುವ ಶಬ್ದ. ಕಾಟೇಜಿನ ಬೀಗ ತೆಗೆದು ಒಳಕ್ಕೆ ಹೋದೆ. ದೂರದ ಮೂಲೆಯಲ್ಲಿ ನಮ್ಮ ಅತ್ತೆ ತಲೆ ಬಗ್ಗಿಸಿ ಕೂತು ಅಳುತ್ತಿದ್ದರು. ತಲೆಗೂದಲೆಲ್ಲಾ ಮುಖದ ಮುಂದೆ ಹರಡಿತ್ತು. ನನಗೆ ದೆವ್ವ ಭೂತ ಇವುಗಳಲ್ಲಿ ಖಂಡಿತ ನಂಬಿಕೆ ಇಲ್ಲ. ''ಯಾರು ನೀವು?'' ಅಂತ ಜೋರಾಗಿ ಕೇಳಿದೆ. ನನ್ನ ಮಾತು ಕೇಳಿದ ತಕ್ಷಣ ಆಕೆ ಅದೃಶ್ಯರಾದರು. ಕೊಠಡಿಯ ದೀಪ ಹಚ್ಚಿ ಎಲ್ಲ ಮೂಲೆ ಮೂಲೆಗಳಲ್ಲೂ ಹುಡುಕಿದೆ. ನಾನು ನೋಡಿದ ದೃಶ್ಯ ನಿಜ ಅನ್ನುವುದಕ್ಕೆ ಯಾವ ಪುರಾವೆಯೂ ಸಿಗಲಿಲ್ಲ. ದೀಪ ಆರಿಸಿ ಕಾಟೇಜಿನ ಬೀಗ ಹಾಕಿಕೊಂಡು ಮನೆಗೆ ಹಿಂತಿರುಗಿದೆ. ಐಶ್ವರ್ಯಾಗೆ ಹೇಳಿದರೆ ಗಾಬರಿಯಾಗುತ್ತಾಳೆಂದು ಅವಳಿಗೆ ''ಯಾವುದೋ ನಾಯಿ ಕೂಗುತ್ತಿತ್ತು'' ಅಂತ ಸುಳ್ಳು ಹೇಳಿ ಸುಮ್ಮನಾದೆ. ಮುಂದಿನ ಅಮಾವಾಸ್ಯೆ ಕೂಡ ಇದೇ ಪುನರಾವೃತ್ತಿಯಾದಾಗ ಈ ವಿಷಯವನ್ನು ಐಶ್ವರ್ಯಾಗೆ ಮತ್ತು ನಮ್ಮ ಮಾವನವರಿಗೆ ಹೇಳಲೇ ಬೇಕಾಯಿತು. ನಮ್ಮ ಮಾವನವರು ದೆವ್ವ ಉಚ್ಚಾಟನೆಗೆ ಯಾರಾದರೂ ಮಾಟಗಾರನನ್ನ ಕರೆಸೋಣವೆಂದು ಸೂಚಿಸಿದರು. ನನಗೆ ಅವರ ಮಾತು ಒಪ್ಪಿಗೆಯಾಗಲಿಲ್ಲ''.

''ಯಾಕೆ?'' ಶರಲೇಖ ಕೇಳಿದ.

''ನೋಡಿ ಅಂಕಲ್, ನಮ್ಮ ಎಸ್ಟೇಟನ್ನ ಹೋಮ್ ಸ್ಟೇ ಆಗಿ ನಡೆಸೋಣವೆಂದು ನಾನು ಐಶ್ವರ್ಯಾ ಪ್ಲಾನ್ ಹಾಕಿದ್ದೇವೆ. ಈ ದೆವ್ವ ಭೂತಗಳ ಸುದ್ದಿ ಜಗಜ್ಜಾಹೀರವಾದರೆ ನಮ್ಮ ಪ್ಲಾನ್ನೆಲ್ಲಾ ಭಗ್ನವಾಗುತ್ತದೆ. ಮೊದಲೇ ಮಲೆನಾಡು, ದೆವ್ವ ಇರೋ ಮನೆಗೆ ಯಾರು ಹಾಲಿಡೇಗೆ ಬರ್ತಾರೆ'' ಶರಲೇಖ ಮೌನಿಯಾದ.

ಈಗ ಕಾರು ಹೆದ್ದಾರಿ ಬಿಟ್ಟು ಎಡಕ್ಕೆ ತಿರುಗಿತ್ತು. ದೂರದಲ್ಲಿ ಒಂದು ಪುಟ್ಟ ಬೆಟ್ಟ, ಅದರ ಮೇಲೆ ಒಂದು ಕೋಟೆಯ ಅವಶೇಷಗಳು ಕಂಡುಬಂತು. ''ಯಾವುದು ಆ ಕೋಟೆ?'' ಅಂತ ಶರಲೇಖ ಕೇಳಿದ.

''ಅದನ್ನು ಮಗನ ತಿಂದ ಮಹರಾಯನ ದುರ್ಗ ಅಂತ ಕರೀತಾರೆ ಅಂಕಲ್. ಬಹು ಹಿಂದೆ ಅಲ್ಲಿ ವೀರರಾಜ ಅಂತ ಒಬ್ಬ ಪಾಳೇಗಾರ ಇದ್ದನಂತೆ. ಅವನ ಶತ್ರುಗಳು ಮಸಲತ್ತು ಮಾಡಿ ಅವನ ಮಗನನ್ನು ಕೊಂದು ಅವನಿಗೆ ಊಟಕ್ಕೆ ನೀಡಿದರಂತೆ. ಗೊತ್ತಿಲ್ಲದೆ ಅವನು ತಿಂದ ನಂತರ ವೀರರಾಜನಿಗೆ ಯಾರೋ ಸತ್ಯ ಸಂಗತಿಯನ್ನ ತಿಳಿಸಿದರಂತೆ. ಅವನ ತನ್ನ ದುಃಖವನ್ನು ತಡೆಯಲಾರದೆ ಕುದುರೆಯನ್ನು ಏರಿ ವೇಗದಿಂದ ಅದನ್ನು ಓಡಿಸುತ್ತಾ ಕೋಟೆ ಗೋಡೆ ಹಾರಿ ಒಂದು ಪ್ರಪಾತಕ್ಕೆ ಧುಮುಕಿ ಅಸುನೀಗಿದನಂತೆ. ಆಗಿನಿಂದ ಆ ದುರ್ಗಕ್ಕೆ ಈ ಹೆಸರು'' ಅಂತ ದುಷ್ಯಂತ ಉತ್ತರಿಸಿದ.

ಯಾಕೆ ಶರಲೇಖ ಈ ಪ್ರಶ್ನೆ ಕೇಳಿದನೋ, ಸುಮ್ಮನೆ ಇರುಕ್ಕೆ ಆಗ್ತಿರ್ಲಿಲ್ಲವೇ ಅಂತ ನನಗನ್ನಿಸಿತು.

ಧವಳಗಿರಿ ಎಸ್ಟೇಟನ್ನು ಸೇರಿದಾಗ ಸಂಜೆ ನಾಲ್ಕು ಘಂಟೆ ಆಗಿತ್ತು. ಮಂಜುಗೌಡ ನಮ್ಮನ್ನು ಆದರದಿಂದ ಬರಮಾಡಿಕೊಂಡ. ಶರಲೇಖನೇ ಮಾತು ಪ್ರಾರಂಭಿಸಿದ. ''ನೋಡಿ ಗೌಡರೇ, ದುಷ್ಯಂತ್ ನಮಗೆಲ್ಲಾ ವಿಷಯ ತಿಳಿಸಿದ್ದಾನೆ. ನನ್ನದೇನಿದ್ರೂ ಮನುಷ್ಯ ಲೋಕದ ಸಮಸ್ಯೆಗಳನ್ನು ಬಿಡಿಸೋ ಕೆಲಸ. ಅಷ್ಟೋ ಇಷ್ಟೋ ಯಶಸ್ಸನ್ನೂ ಗಳಿಸಿದ್ದೇನೆ. ಆದರೆ ಅತಿಮಾನುಷ ಜಗತ್ತಿನ ವ್ಯವಹಾರ ನನಗೆ ತೀರಾ ಹೊಸದು. ಆದರೂ ನನ್ನನ್ನು ನಂಬಿ ಇಲ್ಲಿಗೆ ಕರೆಸಿಕೊಂಡಿರುವುದರಿಂದ ನಾನು ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವೆ. ಕಾಕತಾಳೀಯವಾಗಿ ಇಂದೇ ಅಮಾವಾಸ್ಯೆ. ಈ ರಾತ್ರಿ ನಾನು ಮತ್ತು ವತ್ಸನ ಆ ಕಾಟೇಜಿನಲ್ಲೇ ಉಳಿಯುತ್ತೇವೆ. ನಡೆಯಬಹುದಾದ ಘಟನೆಗಳನ್ನು ನಾನು ಕಣ್ಣಾರೆ ನೋಡಿದ ನಂತರ ಮುಂದಿನ ಕಾರ್ಯವನ್ನು ನಿರ್ಧರಿಸಬಹುದು'' ಅಂದು ಶರಲೇಖ.

ರಾತ್ರಿ ಊಟವಾದ ಮೇಲೆ ನಾವಿಬ್ಬರೂ ಕಾಟೇಜಿಗೆ ಹೋದೆವು. ''ಯಾಕೋ ಹೆದರಿಕೆ ಆಗುತ್ತೆ ಶರಲೇಖ'' ಅಂತ ನಾನು ನಿಜ ಹೇಳಿದೆ. ''ನಿನಗೆ ಯಾಕೋ ಹೆದರಿಕೆ? ಭಾಗೀರತಮ್ಮ ಪ್ರೇತಲೋಕದಿಂದ ಇಲ್ಲಿಗೆ ಬಂದರೆ ಅವರ ಕೋಪ ತನ್ನ ಗಂಡನ ಮೇಲಿರುತ್ತೇ ಹೊರತು ನಮ್ಮಂತಹ ಅಪರಿಚಿತರ ಬಗ್ಗೆ ಖಂಡಿತಾ ಇರೋದಿಲ್ಲ. ನಿನ್ನ ಗೆಳೆಯ ಹೆದರ್ಕೋ ಬೇಕು. ನಿನಗ್ಯಾಕೆ ಹೆದರಿಕೆ?'' ಅಂತ ಹೇಳಿ ನನ್ನ ಬಾಯಿ ಮುಚ್ಚಿಸಿದ.

ಪುಸ್ತಕ ಭಂಡಾರದಲ್ಲಿ ಕನ್ನಡ ಪುಸ್ತಕಗಳ ಜೊತೆಗೆ ಸಾಕಷ್ಟು ಇಂಗ್ಲಿಷ್ ಪುಸ್ತಕಗಳೂ ಇದ್ದವು. ಹನ್ನೊಂದರ ವರೆಗೂ ಏನೋ ಓದುತ್ತಿದ್ದೆ. ಹಾಗೇ ನಿದ್ದೆ ಬಂದುಬಿಡ್ತು. ಶರಲೇಖ ''ಏಳು'' ಅಂತ ನನ್ನ ಕಿವಿ ಹತ್ರ ಪಿಸುಗುಟ್ಟಿದಾಗಲೇ ನನಗೆ ಎಚ್ಚರವಾದದ್ದು. ''ಸಮಯ ಹನ್ನೆರಡಾಗುತ್ತಾ ಬಂತು'' ಎಂದು ಶರಲೇಖ ಪುನಃ ಪಿಸುಗುಟ್ಟಿದ. ಸಾಮಾನ್ಯವಾಗಿ ಮಾತನಾಡುವ ಬದಲು ಅವನು ಯಾಕೆ ಪಿಸುಗುಟ್ಟುತ್ತಿದ್ದನೋ ನನಗೆ ಅರ್ಥವಾಗಲಿಲ್ಲ. ಒಂದೆರಡು ನಿಮಿಷ ಕಳೆದಿರಬಹುದು. ದೂರದ ಮೂಲೆಯಲ್ಲಿ ಒಂದು ಆಕೃತಿ ಕಾಣಿಸಿಕೊಂಡಿತು. ಸ್ವಯಂ ಪ್ರಭೆಯಿಂದ ಮಂಜಿನ ಹನಿಗಳಂತೆ ಬೆಳಗುತ್ತಿದ್ದ ಆ ಸ್ತ್ರೀ ಆಕೃತಿ ಮೂಲೆಯಲ್ಲಿ ಕುಳಿತಂತೆ ಕಾಣಿಸಿಕೊಂಡು ಅಳಲು ಶುರು ಮಾಡಿತು. ಶರಲೇಖ ''ನೀವು ಯಾರು?'' ಎಂದು ಜೋರಾಗಿ ಕೇಳಿದ. ಆಕೃತಿ ಥಟ್ಟನೆ ಅದೃಶ್ಯವಾಯಿತು. ''ಪಾಪ ಹಳೆಯ ಕಾಲದ ಹೆಂಗಸು. ಪರಪುರುಷರೊಂದಿಗೆ ಹೇಗೆ ಮಾತನಾಡಿಯಾರು'' ಎನ್ನುತ್ತಾ ಶರಲೇಖ ಹೊದ್ದು ಮಲಗಿದ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಶರಲೇಖನ ಫ್ಲಿ ಪ್ಪೆಂಟ್ ಮಾತು ನೋಡಿ ನನಗೆ ರೇಗಿತು. ಮಲಗಲು ಪ್ರಯತ್ನಿಸಿದೆ. ನಿದ್ದೆ ಬರಲಿಲ್ಲ.

ಮಾರನೆಯ ಬೆಳಗ್ಗೆ ತಿಂಡಿಗೆ ಕುಳಿತಾಗ ಮಂಜುಗೌಡರು, ''ಏನಾಯಿತು, ಭಾಗೀರತಿ ಕಾಣಿಸಿಕೊಂಡಳೇ? ಎಂದು ಕಾತರದಿಂದ ಕೇಳಿದರು. ಶರಲೇಖ, ''ಹೌದು ಆದರೆ ಈ ಬಗ್ಗೆ ನಾನು ಹಲವು ಮಾಹಿತಿಗಳನ್ನು ಸಂಗ್ರಹಿಸಬೇಕಾಗಿದೆ. ಒಂದೆರಡು ದಿನ ಬೆಂಗಳೂರಿಗೆ ಹೋಗಿ ಬರುವೆ. ಅಲ್ಲಿನವರೆಗೆ ವತ್ಸನ ಇಲ್ಲೇ ಇರಲಿ. ಏನಾದರೂ ಹೆಚ್ಚಿನ ಮಾಹಿತಿ ನನಗೆ ಬೇಕಾದರೆ ಮೊಬೈಲ್‌ನಲ್ಲಿ ಸಂಪರ್ಕಿಸುವೆ'' ಅಂತ ಹೇಳಿ ತಿಂಡಿ ತಿಂದನಂತರ ಹೊರಟು ಬಿಟ್ಟ. ಮಂಜು, ದುಷ್ಯಂತ್ ಮತ್ತು ಐಶ್ವರ್ಯಾ ನನ್ನನ್ನು ಕುರಿತು ''ಶರಲೇಖ ಏಕೆ ಹಾಗೇ ಹೊರಟು ಹೋದರು?'' ಅಂತ ಕಾತರರಾಗಿ ಕೇಳಿದರು. ''ನನ್ನ ಅನುಭವದ ಪ್ರಕಾರ, ಸಮಸ್ಯೆಗೆ ಪರಿಹಾರ ಸಿಕ್ಕಾಗ ಮಾತ್ರ ಅವನ ಓಡಾಟ

ಚುರುಕಾಗಿರುತ್ತದೆ. ಇಲ್ಲವಾದರೆ ಈ ಕಾಟೇಜಿನಲ್ಲೇ ಕುಳಿತಿರುತ್ತಿದ್ದ. ಏನೂ ಯೋಚನೆ ಬೇಡ.'' ನನ್ನಲ್ಲೇ ಇಲ್ಲದ ಧೈರ್ಯವನ್ನು ಅವರಲ್ಲಿ ತುಂಬಿದೆ.

ಆ ಎರಡು ದಿನ ಎಸ್ಟೇಟಿನ ಸುತ್ತ ಮುತ್ತ ಓಡಾಡಿದೆವು. ಮುಳುಗಡೆಯಾಗಿದ್ದರಿಂದ ನೀರಿನ ಮೇಲೆ ತೇಲುತ್ತಿದ್ದಂತೆ ಕಾಣುತ್ತಿದ್ದ ಶೆಟ್ಟಿ ಹಳ್ಳಿಯಲ್ಲಿನ ರೋಸರಿ ಚರ್ಚ್, ಗೊರೂರು, ಹೇಮಾವತಿ ಹಿನ್ನೀರು ಇವೆನ್ನೆಲ್ಲಾ ನೋಡಿದ್ದಾಯಿತು. ಆದರೂ ನಿಜ ಹೇಳಬೇಕೆಂದರೆ ಶರಲೇಖ ಹಿಂತಿರುಗುವವರೆಗೂ ಯಾರಿಗೂ ಮನಸ್ಸಿನ ಸಮಾಧಾನವಿರಲಿಲ್ಲ.

ಮೂರನೆಯ ದಿನ ಬೆಳಗ್ಗೆ ಶರಲೇಖ ಹಿಂತಿರುಗಿದ. ಸ್ನಾನ ತಿಂಡಿ ಮುಗಿದ ನಂತರ ಅವನು ಮಂಜುಗೌಡರನ್ನು ಕುರಿತು ''ನಿಮ್ಮ ಸಮಸ್ಯೆಗೆ ಪರಿಹಾರ ಸಿಗುವಂತೆ ಕಾಣುತ್ತಿದೆ. ಈಗ ಬನ್ನಿ ಆ ಕಾಟೇಜಿಗೆ ಹೋಗುವಾ. ಅಲ್ಲೇ ಕುಳಿತು ಎಲ್ಲವನ್ನೂ ವಿವರಿಸುವೆ'' ಅಂದ. ಕಾಟೇಜಿನಲ್ಲಿ ಎಲ್ಲರೂ ಕುಳಿತೆವು. ಬೆಳ್ಳನೆ ಬೆಳಕು, ಕಿಟಕಿಗಳೆಲ್ಲಾ ತೆರೆದಿದ್ದವು. ಹೆದರುವಂತಹಾ ಪರಿಸ್ಥಿತಿಯೇ ಇರಲಿಲ್ಲ ಅನ್ನಬಹುದಾಗಿತ್ತು. ಶರಲೇಖ, ''ಇವತ್ತು ಅಮಾವಾಸ್ಯೆ ಅಲ್ಲ, ರಾತ್ರಿ ಹನ್ನೆರಡು ಘಂಟೆಯೂ ಅಲ್ಲ, ಅದರೂ ಭಾಗೀರತಮ್ಮನವರನ್ನು ಕರೆಸುವೆ ಮೂಲೆಯನ್ನು ನೋಡಿ'' ಅಂತ ಹೇಳಿದ ತಕ್ಷಣ ಸ್ವಯಂಪ್ರಭೆಯುಳ್ಳ ಮಂಜಿನ ಹನಿಗಳಿಂದ ನಿರ್ಮಿತವಾದ ಸ್ತ್ರೀ ಆಕೃತಿಯೊಂದು ಮೂಲೆಯಲ್ಲಿ ಕಾಣಿಸಿಕೊಂಡು ಅಳುವುದಕ್ಕೆ ಪ್ರಾರಂಭಿಸಿತು. ಶರಲೇಖ ಜೋರಾಗಿ ಚಪ್ಪಾಳೆ ತಟ್ಟಿದ ತಕ್ಷಣ ಆಕೃತಿ ಅದೃಶ್ಯವಾಯಿತು.

ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

''ದುಷ್ಯಂತ್ ಮೊದಲ ಬಾರಿ ಈ ಆಕೃತಿಯ ಬಗ್ಗೆ ಹೇಳಿದಂದಿನಿಂದಲೇ ನನ್ನ ಮನಸ್ಸಿನಲ್ಲಿ ಎರಡು ಸಾಧ್ಯತೆಗಳು ಮೂಡಿದವು. ಒಂದು ಇದು ಮಾನವ ನಿರ್ಮಿತ ಆಕೃತಿ. ಎರಡು ನಿಜವಾಗಿ ಪ್ರೇತಲೋಕದಿಂದ ಬಂದ ಅತಿಥಿ. ಎರಡನೆಯ ಸಾಧ್ಯತೆ ನಿಜವಾಗಿದ್ದರೆ, ನನ್ನಿಂದ ಏನೂ ಮಾಡಲು ಸಾಧ್ಯವಿರಲಿಲ್ಲ. ಆದರೆ ಮೊದಲ ಸಾಧ್ಯತೆಯನ್ನು ಸಂಪೂರ್ಣವಾಗಿ ಪರಿಶೀಲಿಸುವವರೆಗೂ ಎರಡನೆಯ ಸಾಧ್ಯತೆಯ ಕಡೆ ಗಮನಹರಿಸುವುದು ಅನಗತ್ಯ ಎಂದು ನಿರ್ಧರಿಸಿದೆ.

ಈಗಿನ ಕಾಲದಲ್ಲಿ ಹೋಲೋಗ್ರಾಮ್‌ಗಳನ್ನು ಮನುಷ್ಯನ ಆಕೃತಿಗಳನ್ನು ಸಂಪೂರ್ಣವಾಗಿ ಹೋಲುವಂತೆ ಮಾಡಬಹುದು. ಆದರೆ ಈ ಹಳ್ಳಿಯ ಪರಿಸರದಲ್ಲಿ ಇಂತಹ ಹೋಲೋಗ್ರಾಮ್ ಬಂದಿದ್ದಾದರೂ ಹೇಗೆ ಎಂಬ ಪ್ರಶ್ನೆಯನ್ನು ನಾನು ಉತ್ತರಿಸಬೇಕಾಯಿತು. ನಿಮ್ಮ ಎಸ್ಟೇಟಿನ ಎಲೆಕ್ಟ್ರಿಕಲ್ ಕೆಲಸಗಳನ್ನು ಯಾರು ಮಾಡುತ್ತಾರೆ ಅಂತ ನಿಮ್ಮ ಎಸ್ಟೇಟ್ ಮ್ಯಾನೇಜರನ್ನು ಕೇಳಿದಾಗ ಅವರು ಬಾಳ್ಳುಪೇಟೆಯ ಷಣ್ಮುಗಂ ಹೆಸರು ಹೇಳಿದರು. ಅನಂತರ ಇನ್‌ಸ್ಪೆಕ್ಟರ್ ಉಳ್ಳಾಗಡ್ಡಿ ಅವರ ಸಹಾಯದಿಂದ ಬಾಳ್ಳುಪೇಟೆಯ ಪೊಲೀಸ್ ಇನ್‌ಸ್ಪೆಕ್ಟರನ್ನು ಕರೆದುಕೊಂಡು ಷಣ್ಮುಗಂ ಹತ್ತಿರ ಹೋಗಿ ಅವನ ಬಾಯಿ ಬಿಡಿಸಿದೆ. ಪೊಲೀಸರನ್ನು ನೋಡಿದ ತಕ್ಷಣ ಹೆದರಿ ಅವನು ನಿಜ ಹೇಳಿದ. ಹಲವು ತಿಂಗಳುಗಳ ಹಿಂದೆ ಸಿದ್ಧಾರ್ಥ್ ಅಮೆರಿಕಯಿಂದ ಬಂದಿದ್ದಾಗ ಅವನು ಈ

ಹೋಲೋಗ್ರಾಫಿಕ್ ಪ್ರೊಜೆಕ್ಟರ್ ಮತ್ತು ಕಂಟ್ರೋಲ್ ಸಿಸ್ಟಮ್‌ಗಳನ್ನು ತಂದಿದ್ದನಂತೆ. ಇವನ್ನೆಲ್ಲಾ ಅವನು ಕಾಟೇಜಿನಲ್ಲಿ ಯಾರಿಗೂ ಕಾಣದಂತೆ ಅಳವಡಿಸಿ, ಅಮಾವಾಸ್ಯೆ ರಾತ್ರಿ ಅದನ್ನು ಚಾಲನೆಗೊಳಿಸಲು ಇಂಟರ್ನೆಟ್ ಆಫ್ ಥಿಂಗ್ಸ್ (ಐ ಓ ಟಿ) ಬಳಸಿ ಬಾಳ್ಳುಪೇಟೆಯ ಷಣ್ಮುಗಂ ಮನೆಯಿಂದ ಅದನ್ನು ಚಾಲನೆಗೊಳಿಸುತ್ತಿದ್ದನಂತೆ. ಆಕೃತಿಯನ್ನು ಸ್ವಿಚ್ ಆಫ್ ಮಾಡಲು ಸೌಂಡ್ ಸೆನ್ಸಾರ್‌ಗಳನ್ನು ಬಳಸಿದ್ದನಂತೆ. ಅದಕ್ಕೇ ಯಾರಾದರೂ ಜೋರಾಗಿ ಮಾತನಾಡಿದರೆ ಅದು ತಾನಾಗಿಯೇ ಅದೃಶ್ಯವಾಗುತ್ತಿತ್ತು. ಈ ಎಲ್ಲ ಹೋಕ್ಸ್‌ಗೆ ಸಿದ್ಧಾರ್ಥ್ ಕಾರಣ. ಹಾಗಾಗಿ ಷಣ್ಮುಗಂ ಮೇಲೆ ಯಾವುದಾದರೂ ಕ್ರಮವನ್ನು ಕೈಗೊಂಡರೆ ಸಿದ್ಧಾರ್ಥನ ಹೆಸರೂ ಹೊರಬರುತ್ತದೆ. ಈ ಹೋಲೋಗ್ರಾಮ್‌ನ್ನು ನಿಯಂತ್ರಿಸುವ ಆ್ಯಪ್ ಅನ್ನು ಷಣ್ಮುಗಂ ನನ್ನ ಮೊಬೈಲಿಗೆ ಅಳವಡಿಸಿರುವುದರಿಂದ ನನ್ನ ಮೊಬೈಲ್‌ನಿಂದಲೇ ಈಗ ಆಕೃತಿಯನ್ನು ಚಾಲನೆಗೊಳಿಸುವುದು ಸಾಧ್ಯವಾಯಿತು.

ಇಲ್ಲಿಗೆ ನಮ್ಮ ಕೆಲಸ ಮುಗಿಯಿತು. ಮುಂದಿನ ಕ್ರಮ ನಿಮಗೆ ಬಿಟ್ಟಿದ್ದು ಎಂದ ಶರಲೇಖ.

★★★★★

ಇದೆಲ್ಲಾ ನಡೆದ ಮೂರು ತಿಂಗಳ ನಂತರ ಐಶ್ವರ್ಯ ನನಗೆ ಫೋನ್ ಮಾಡಿ ನಮ್ಮಿಬ್ಬರನ್ನೂ ಧವಳಗಿರಿ ಹೋಮ್ ಸ್ಟೇಯ ಇನಾಗುರೇಶನ್‌ಗೆ ಆಹ್ವಾನಿಸಿದ್ದಳು. ಮಂಜುಗೌಡನ ಆಗ್ರಹದಿಂದ ನಾವು ಅಲ್ಲಿಗೆ ಹೋಗಲೇ ಬೇಕಾಯಿತು. ಮಂಜು ನಮ್ಮನ್ನು ಆದರದಿಂದ ಬರಮಾಡಿಕೊಂಡ. ಭಾಗೀರತಮ್ಮನವರ ಹೋಲೋಗ್ರಾಮ್‌ನ್ನು ಸ್ವಲ್ಪ ಬದಲಿಸಿ ಅವರು ಅಳುವ ಬದಲು ಧವಳಗಿರಿಯ ಹಿನ್ನೆಲೆಯನ್ನು ಹೇಳುವಂತೆ ಮಾಡಿದ್ದರು. ಹೋಮ್ ಸ್ಟೇ ಗೇ ಬರುವ ಅತಿಥಿಗಳಿಗೆ ಇದೊಂದು ದೊಡ್ಡ ಆಕರ್ಷಣೆ ಅಂತ ಐಶ್ವರ್ಯ ಸಂತಸದಿಂದ ಹೇಳಿದಳು. ಆಶ್ಚರ್ಯವೆಂದರೆ ಅವಳ ಅಣ್ಣ ಸಿದ್ಧಾರ್ಥ ಅವಳೊಂದಿಗೆ ನಿಂತು ಎಲ್ಲರನ್ನೂ ಮಾತನಾಡಿಸುತ್ತಿದ್ದ. ಯಾವ ಸಿದ್ಧಾರ್ಥ ಕೋಪದಿಂದ ತನ್ನ ತಂಗಿಯ ಪ್ರಾಜೆಕ್ಟಿಗೆ ಕಂಟಕ ತರಲು ಸನ್ನಾಹ ನಡೆಸಿದ್ದನೋ ಅದೇ ಸಿದ್ಧಾರ್ಥ ಅದು ಹೇಗೆ ಈಗ ನಗು ನಗುತ್ತಾ ಅವಳೊಂದಿಗೆ ಓಡಾಡುತ್ತಿದ್ದನೋ ಆ ಭಾಗೀರತಮ್ಮನವರೇ ಬಲ್ಲರು!

■

ಲಿಮರಿಕ್ಸ್ – ಬಿ.ಎಸ್. ರವಿಕುಮಾರ್

## ಕಲಹಪ್ರಿಯ

ನಾರದನೆಂಬ ಸೇಜು
ಕಳಿಸಿದ ಮೊದಲ ಮೆಸೇಜು
ಎಡಬಲಗಳಿಗೂ ಚುಚ್ಚಿ
280 ಬೈಟ್ನಲ್ಲಿ ಕಚ್ಚಿ
ನೋಡುತ್ತಿದ್ದ ಕಾಮೆಂಟ್ ಕಲಹಗಳ ಮೋಜು

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR
No. of Pages: **40+4** APARANJI KANNADA MONTHLY.